
# ಅಡುಗೆ ಅನಿಲ ಅಭಾವದಿಂದ ಸೌದೆಗೆ ಹೆಚ್ಚಾದ ಬೇಡಿಕೆ

• ಉದಯವಾಹಿನಿ, ಬೆಂಗಳೂರು

ಮಧ್ಯಪ್ರಾಚ್ಯದಲ್ಲಿನ ಸಂಘರ್ಷ ಸನ್ನಿವೇಶದಿಂದಾಗಿ ಉಂಟಾಗಿರುವ ಅನಿಲ ಅಭಾವದಿಂದ ಸೌದೆಗೆ ಬೇಡಿಕೆ ಹೆಚ್ಚಾಗಿದ್ದು, ಕಾಡು, ಕಾಡಿನಂಚಿನಲ್ಲಿ ಹಾಗೂ ಸರ್ಕಾರ ಭೂಮಿಯಲ್ಲಿ ಮರಗಳ ಅಕ್ರಮ ಕಡಿತಲೆ ಆಗದಂತೆ ಕಟ್ಟೆಚ್ಚರ ವಹಿಸಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಸ್ಪಷ್ಟ ಸೂಚನೆ ನೀಡಿದ್ದಾರೆ.



ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಿಗೆ ನೀಡಿರುವ ಲಿಖಿತ ಸೂಚನೆಯಲ್ಲಿ ಅವರು, ಅನಿಲ ಅಭಾವದ ಬಿಸಿ ಕರ್ನಾಟಕಕ್ಕೂ ತಟ್ಟಿದ್ದು, ಹೋಟೆಲ್, ರೆಸಾರ್ಟ್, ಹೋಂಸ್ಟೇಗಳಿಗೆ ವಾಣಿಜ್ಯ ಸಿಲಿಂಡರ್ ದೊರಕದೆ ಸಮಸ್ಯೆ ಆಗಿದ್ದರೆ, ಗೃಹ ಬಳಕೆ ಅಡುಗೆ ಅನಿಲ ಪೂರೈಕೆಯಲ್ಲೂ ವ್ಯತ್ಯಯ ಆಗಿರುವ ಹಿನ್ನೆಲೆಯಲ್ಲಿ ಸೌದೆಗಾಗಿ ಅಕ್ರಮ ಮರ ಕಡಿತಲೆ ಆಗದಂತೆ ಗಸ್ತು, ನಿಗಾ ಹೆಚ್ಚಿಸಲು ಆದೇಶಿಸಿದ್ದಾರೆ. ಅರಣ್ಯ ಇಲಾಖೆಯ ಎಲ್ಲಾ ವೃತ್ತದ, ಎಲ್ಲಾ ವಲಯಗಳಲ್ಲೂ ಸೂಕ್ತ ಗಸ್ತು, ಮುಂಜಾಗರೂಕತೆ ಕ್ರಮ ಕೈಗೊಳ್ಳಲು ಸೂಚಿಸಿರುವ ಅವರು ಒಂದೊಮ್ಮೆ ಅರಣ್ಯ, ಸರ್ಕಾರಿ ಜಮೀನಿನಲ್ಲಿ ಅಕ್ರಮ ಮರ ಕಡಿತಲೆ ಆದರೆ ಸಂಬಂಧಿತ ವಲಯದ ಅಧಿಕಾರಿ, ಸಿಬ್ಬಂದಿಯನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

**ವದಂತಿಗಳಿಗೆ ಸಾರ್ವಜನಿಕರು ಕಿವಿ ಗೊಡಬಾರದು:** ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಆಗಬಹುದು ಎಂಬ ಆತಂಕ ಸಾರ್ವಜನಿಕರಲ್ಲಿ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ,



ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಸ್ಪಷ್ಟನೆಯನ್ನು ನೀಡಿದೆ.

**ಸಾಕಷ್ಟು ದಾಸ್ತಾನು ಲಭ್ಯತೆ:** ರಾಜ್ಯ ಸರ್ಕಾರವು ಪ್ರಮುಖ ತೈಲ ಕಂಪನಿಗಳಾದ IOC, BPC ಮತ್ತು HPC ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆಯನ್ನು ನಡೆಸಿದೆ. ರಾಜ್ಯದಾದ್ಯಂತ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ ಮತ್ತು ಮುಂಬರುವ ದಿನಗಳಿಗೂ ಸರಿಹೊಂದುವಷ್ಟು ಸಾಕಷ್ಟು ದಾಸ್ತಾನು ಲಭ್ಯವಿದೆ ಎಂದು ತೈಲ ಕಂಪನಿಗಳು ದೃಢಪಡಿಸಿವೆ.

**ಸಾರ್ವಜನಿಕರಿಗೆ ಮನವಿ:** ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯ ಬಗ್ಗೆ ಹರಡುತ್ತಿರುವ ಯಾವುದೇ ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ಸಿಲಿಂಡರ್‌ಗಳ ಕೊರತೆಯಾಗಬಹುದು ಎಂಬ ಆತಂಕದಿಂದ ಸಾರ್ವಜನಿಕರು ಅನಗತ್ಯವಾಗಿ ಸಿಲಿಂಡರ್‌ಗಳನ್ನು ಮುಂಗಡವಾಗಿ ಬುಕ್ ಮಾಡುವುದು ಅಥವಾ ಸಂಗ್ರಹಿಸಿಡುವುದನ್ನು ಮಾಡಬಾರದು. ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿಯಾಗದಂತೆ ಸಹಕರಿಸಲು ಕೋರಲಾಗಿದೆ.

**ಕಾನೂನು ಕ್ರಮದ ಎಚ್ಚರಿಕೆ:** ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳನ್ನು ಸಂಗ್ರಹಿಸಿಡುವುದು, ಕಾಳಸಂತೆಯಲ್ಲಿ ಮಾರಾಟ ಮಾಡುವುದು ಅಥವಾ ರೀಫಿಲ್ಲಿಂಗ್ ದಂಧೆಯಲ್ಲಿ ತೊಡಗುವುದು ಕಂಡುಬಂದಲ್ಲಿ Essential Commodities Act 1955, LPG Control Order 2000 ಮತ್ತು Petroleum Products Order 1999ರ ಕಾಯ್ದೆಗಳ ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು.

**ಜಿಲ್ಲಾಡಳಿತಕ್ಕೆ ಸೂಚನೆ:** ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಎಲ್‌ಪಿಜಿ ವಿತರಣಾ ಕೇಂದ್ರಗಳ ಮೇಲೆ ನಿಗಾ ಇಡಲು ಮತ್ತು ಸುಗಮ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಂಗಳೂರಿನ ಈ ಭಾಗಗಳಲ್ಲಿ 2 ದಿನ ಮದ್ಯ ಮಾರಾಟ ಬಂದ್

• ಉದಯವಾಹಿನಿ, ಬೆಂಗಳೂರು

ಶ್ರೀ ಮದ್ದೂರಮ್ಮ ದೇವಿಯ ಜಾತ್ರೆ ಮತ್ತು ಶ್ರೀ ಧರ್ಮರಾಯ ದೇವಿ ಕರಗ ಪಲ್ಲಕ್ಕಿ ಉತ್ಸವದ ಅಂಗವಾಗಿ ಶನಿವಾರ ಬೆಳಗ್ಗೆ 6 ಗಂಟೆಯಿಂದ 15ರ ರಾತ್ರಿ 11 ಗಂಟೆಯವರೆಗೆ ಪರಪ್ಪನ ಅಗ್ರಹಾರ ಮತ್ತು ಹೆಬ್ಬಗೋಡಿ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ. ಎಲೆಕ್ಟ್ರಾನಿಕ್ ಸಿಟಿ ವಿಭಾಗದ ಹೆಬ್ಬಗೋಡಿ ಮತ್ತು ಪರಪ್ಪನ ಅಗ್ರಹಾರ ಪೊಲೀಸ್ ಠಾಣಾ ವ್ಯಾಪ್ತಿಯ ಹುಸ್ಕೂರು ಗ್ರಾಮದ ಶ್ರೀ ಮದ್ದೂರಮ್ಮ ದೇವಿಯ ಜಾತ್ರೆ, ಶ್ರೀ ಧರ್ಮರಾಯ ದೇವಿ ಕರಗ ಪಲ್ಲಕ್ಕಿ ಕಾರ್ಯಕ್ರಮಕ್ಕೆ ಲಕ್ಷಾಂತರ ಜನರು ಭಾಗವಹಿಸಲಿದ್ದಾರೆ.

ಈ ನಿಟ್ಟಿನಲ್ಲಿ ಕೆಲವು ಕಿಡಿಗೇಡಿಗಳು ಮದ್ಯಪಾನದ ಅಮಲಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ತೊಂದರೆ ಮಾಡಬಹುದಾದ ಸಾಧ್ಯತೆ ಇರುವ ಹಿನ್ನಲೆಯಲ್ಲಿ ಕಾನೂನು, ಸುವ್ಯವಸ್ಥೆಗೆ ಭಂಗ ಉಂಟಾಗ ದಂತೆ ಅಹಿತಕರ ಘಟನೆಗಳನ್ನು ತಡೆಯುವ ಅವಶ್ಯಕತೆ ಇರುವುದರಿಂದ ಈ ಎರಡು ದಿನ ಮುನ್ನೆಚ್ಚರಿಕಾ ಕ್ರಮವಾಗಿ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್‌ಸಿಂಗ್ ಅವರು ಈ ಆದೇಶ ಹೊರಡಿಸಿದ್ದಾರೆ. ಪರಪ್ಪನ ಅಗ್ರಹಾರ, ಹೆಬ್ಬಗೋಡಿ ಠಾಣಾ ವ್ಯಾಪ್ತಿಗಳಲ್ಲಿನ ಎಲ್ಲಾ ಮದ್ಯದ ಅಂಗಡಿ, ಬಾರ್ ಅಂಡ್‌ರೆಸ್ಟೋರೆಂಟ್, ವೈನ್ಸ್ ಸ್ಟೋರ್‌ಗಳನ್ನು ಮುಚ್ಚುವಂತೆ ಮದ್ಯ ಮಾರಾಟ ನಿಷೇಧಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೆಚ್ಚುತ್ತಲೇ ಇವೆ ಡಿಜಿಟಲ್ ಅರೆಸ್ಟ್ ಪ್ರಕರಣಗಳು: ಎಚ್ಚೆತ್ತುಕೊಳ್ಳದ ಸಾರ್ವಜನಿಕರು

• ಉದಯವಾಹಿನಿ, ಬೆಂಗಳೂರು

ಪೊಲೀಸರು ಎಷ್ಟೇ ಜಾಗೃತಿ ಮೂಡಿಸಿದರೂ ಸಹ ಜನರು ಎಚ್ಚೆತ್ತುಕೊಳ್ಳುತ್ತಿಲ್ಲ. ಹಾಗಾಗಿ ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್‌ನಿಂದ ಕೋಟ್ಯಂತರ ರೂ ಹಣವನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರತೀ ವರ್ಷವೂ ಡಿಜಿಟಲ್ ಅರೆಸ್ಟ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಇವೆ. ಪೊಲೀಸರು ಆಗಾಗ್ಗೆ ಹಲವು ರೀತಿಗಳಲ್ಲಿ ಎಷ್ಟೇ ತಿಳುವಳಿಕೆ ನೀಡುತ್ತಿದ್ದರೂ ಸಹ ಜಾಗೃತರಾಗದೇ ವಿದ್ಯಾವಂತರೇ ಹೆಚ್ಚಾಗಿ ಹಣ ಕಳೆದುಕೊಳ್ಳುತ್ತಿರುವುದು ಕಂಡುಬಂದಿದೆ. ಕಳೆದ ಎರಡು ವರ್ಷಗಳಲ್ಲಿ ಸೈಬರ್ ವಂಚನೆಗೊಳಗಾಗಿ ಜನರು ಬರೋಬ್ಬರಿ 468 ಕೋಟಿ ರೂ. ಕಳೆದುಕೊಂಡಿರುವುದು ವರದಿಯಾಗಿದೆ ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,695 ಡಿಜಿಟಲ್ ಅರೆಸ್ಟ್ ಪ್ರಕರಣಗಳು ದಾಖಲಾಗಿವೆ. ರಾಜ್ಯದಲ್ಲಿ ಈವರೆಗೂ 500 ಮಂದಿ ಸೈಬರ್ ಅಪರಾಧಿ ಗಳನ್ನು ಬಂಧಿಸಲಾಗಿದೆ. ಈ ಸೈಬರ್ ಅಪರಾಧಿಗಳು ತೆರೆದಿದ್ದ 40 ಸಾವಿರ ನಕಲಿ ಬ್ಯಾಂಕ್ ಖಾತೆಗಳನ್ನು ಪೊಲೀಸರು ಪತ್ತೆ ಹಚ್ಚಿ ಅವುಗಳನ್ನು ಸ್ಥಗಿತಗೊಳಿಸಿದ್ದಾರೆ.

## ಕಾಳಸಂತೆಯಲ್ಲಿ ಸಿಲಿಂಡರ್ ಮಾರಾಟ ಮಾಡಿದರೆ ಕಠಿಣ ಕ್ರಮ: ಹಿತೇಂದ್ರ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು

ವಾಣಿಜ್ಯ, ಗೃಹ ಬಳಕೆ ಗ್ಯಾಸ್ ಸಿಲಿಂಡರ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡಿದರೆ ಯಾರೇ ಆಗಲಿ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಆಯುಕ್ತ ಹಿತೇಂದ್ರ ಅವರು ಎಚ್ಚರಿಕೆ ನೀಡಿದ್ದಾರೆ. ಈ ಸಂಜೆ ಯೊಂದಿಗೆ ಮಾತನಾಡಿದ ಅವರು, ಕಳೆದ ಮೂರು ದಿನಗಳಿಂದ ನಮ್ಮ ಪೊಲೀಸರು ರಾಜ್ಯದಾದ್ಯಂತ ಪರಿಶೀಲನೆ ಮಾಡುತ್ತಿದ್ದಾರೆ. ಇದುವರೆಗೂ ಅಕ್ರಮವಾಗಿ ಸಿಲಿಂಡರ್ ಸಂಗ್ರಹ, ಸಾಗಾಟದಂತಹ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಹೇಳಿದರು. ನಗರ, ಜಿಲ್ಲೆ, ತಾಲ್ಲೂಕುಗಳಲ್ಲೂ ಸಹ ಆಯಾಯ ಠಾಣಾ ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ಸಿಲಿಂಡರ್ ದಾಸ್ತಾನು ಗೋದಾಮುಗಳಿಗೆ ಹಾಗೂ ಸಂಬಂಧಿಸಿದ ಕಚೇರಿಗಳಿಗೂ ಭೇಟಿ ನೀಡಿ ಪರಿಶೀಲಿಸುತ್ತಿದ್ದಾರೆ ಎಂದು ವಿವರಿಸಿದರು.

ಒಂದು ವೇಳೆ ಗ್ಯಾಸ್ ಸಿಲಿಂಡರ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದು ಕಂಡು ಬಂದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಅವರು ಎಚ್ಚರಿಸಿದ್ದಾರೆ.ಸಿಲಿಂಡರ್‌ಗಳನ್ನು ಸಾಗಾಣೆ ಮಾಡುವವರ ಬಳಿ ಬುಕ್ಕಿಂಗ್ ರಸೀದಿ ಇರಬೇಕು.ಒಂದು ವೇಳೆ ರಸೀದಿ ಇಲ್ಲದಿದ್ದರೆ ಅಂತಹ ಸಿಲಿಂಡರ್‌ಗಳನ್ನು ವಶಕ್ಕೆ ಪಡೆಯಲಾಗುವುದು ಎಂದು ಹೇಳಿದರು.

## ಫಾಲ್ಗುಣ ಮಾಸದ ಸಂಗೀತೋತ್ಸವ

• ಉದಯವಾಹಿನಿ, ಬೆಂಗಳೂರು



ಸಮನ್ವಯ ಕಲಾ ಕೇಂದ್ರದ ಸಂಸ್ಥಾಪಕರೂ 'ಕರ್ನಾಟಕ ಕಲಾಚಾರ್ಯ' ಮತ್ತು 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪುರಸ್ಕೃತರೂ ಆದ ಸಂಗೀತ ವಿದ್ವಾನ್ ಶ್ರೀ ತಿರುಮಲೆ ಶ್ರೀನಿವಾಸ್ (ಚಾಮಿ) ಹಾಗೂ ಶ್ರೀ ಲಾಲ್ ದಾಸ್ ಭಕ್ತ ಆಂಜನೇಯ ಸ್ವಾಮಿ ಭಜನಾ ಮಂಡಳಿಯ ಮುಖ್ಯಸ್ಥರಾದ ಮೃದಂಗ ವಿದ್ವಾನ್ ಶ್ರೀ ಶ್ರೀನಿವಾಸ್ ಅನಂತರಾಮಯ್ಯ ಇವರುಗಳ ನೇತೃತ್ವದಲ್ಲಿ ಮಾರ್ಚ್ 15, ಭಾನುವಾರ ಬೆಳಗ್ಗೆ 9 ರಿಂದ ಸಂಜೆ 5ರ ವರೆಗೆ ನಾಡಿನ ಹೆಸರಾಂತ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸ್ಥಳ ಶ್ರೀ ಲಾಲ್ ದಾಸ್ ವೆಂಕಟರಮಣ ಸ್ವಾಮಿ ದೇವಸ್ಥಾನ, ಬಳೇಪೇಟೆ, ಬೆಂಗಳೂರು-560053. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ಮೊಬೈಲ್ ಸಂಖ್ಯೆ -9844027006 / 9945437653

## ಎಳನೀರು ಸೇರಿದಂತೆ ತಂಪು ಪಾನೀಯಗಳಿಗೆ ಫುಲ್ ಡಿಮ್ಯಾಂಡ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಜನರು ತಂಪು ಪಾನೀಯಗಳ ಮೊರೆ ಹೋಗುತ್ತಿದ್ದು, ಎಳನೀರು ಕುಡಿಯೋಣ ಎಂದು ಹೋದವರ ಜೇಬಿಗೆ ಕತ್ತರಿ ಬೀಳುತ್ತಿದೆ. ಬಿಸಿಲಿನ ತಾಪಕ್ಕೆ ಜನರು ಎಳನೀರು, ಕಲ್ಲಂಗಡಿ, ಕರಬೂಜ ಹಣ್ಣಿನ ಮೊರೆ ಹೋಗುತ್ತಿದ್ದು, ಡಿಮ್ಯಾಂಡ್ ಹೆಚ್ಚಾಗಿದೆ. ಆದರೆ ಬೆಲೆ ಹೆಚ್ಚಳದಿಂದ ಖರೀದಿ ಮಾಡುವುದಕ್ಕೆ ಹಿಂದೆಮುಂದೆ ನೋಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಾರಿ ಬಿಸಿಲಿನ ಪ್ರಮಾಣ ಜೋರಾಗಿಯೇ ಇದೆ. ಬೆಂಗಳೂರಿನಲ್ಲಿಂದು 27 ಡಿಗ್ರಿ ಸೆಲ್ಸಿಯಸ್‌ವರೆಗೂ ಉಷ್ಣಾಂಶ ದಾಖಲಾಗಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಉಷ್ಣಾಂಶ ಹೆಚ್ಚಾಗುವ ಸಾಧ್ಯತೆಯಿದೆ. ಈ ಮಧ್ಯೆ ದೇಹವನ್ನು ತಂಪಾಗಿಸಿರಿಸಿಕೊಳ್ಳಲು ಪೋಷಕಾಂಶಭರಿತ ನೈಸರ್ಗಿಕ ಪಾನೀಯ ಎಳನೀರು ಮೊರೆ ಹೋಗುತ್ತಿದ್ದಾರೆ. ಆದರೆ ಬೆಲೆ ನೋಡಿದರೆ ಬಿಸಿಲಿನಂತೆ ಜೇಬೂ ಕೂಡ ಸುಡುವಂತಾಗಿದೆ. ಕಳೆದ ಎರಡು ವರ್ಷದಿಂದ ಎಳನೀರು ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಂಡು ಬಂದಿದ್ದು, ಈಗ ಗುಣಮಟ್ಟದ ಎಳನೀರು 60 ರಿಂದ 70 ರೂ.ಗೆ ಮಾರಾಟವಾಗುತ್ತಿದೆ.

# ಕಲಾಪದ ವೇಳೆ ಪೇಚಿಗೆ ಸಿಲುಕಿದ ಮಲ್ಲಿಕಾರ್ಜುನ್

### ತರಾಟೆಗೆ ತೆಗೆದುಕೊಂಡ ಬಿಜೆಪಿ ಶಾಸಕ ಸುನಿಲ್ ಕುಮಾರ್, ಸದನಕ್ಕೆ ತಪ್ಪು ಮಾಹಿತಿ

• ಉದಯವಾಹಿನಿ, ಬೆಂಗಳೂರು



ವಿಧಾನಸಭೆಯಲ್ಲಿ ಪ್ರಶ್ನೋತ್ತರ ಕಲಾಪದ ವೇಳೆ ಸಚಿವ ಎಸ್ ಎಸ್ ಮಲ್ಲಿಕಾರ್ಜುನ್ ಪೇಚಿಗೆ ಸಿಲುಕಿದ ಪ್ರಸಂಗ ನಡೆಯಿತು.ಶುಕ್ರವಾರ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್‌ಶಾಸಕ ಭೀಮಣ್ಣ ನಾಯ್ಕ್ ಪ್ರಶ್ನೆಗೆ ಉತ್ತರ ನೀಡುತ್ತಿದ್ದ ವೇಳೆ ಸಚಿವ ಮಲ್ಲಿಕಾರ್ಜುನ್ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದರು.

ಈ ವೇಳೆ ಸಚಿವರ ಉತ್ತರದ ಅಂಕಿ ಅಂಶಗಳನ್ನ ಪ್ರಸ್ತಾಪಿಸಿ ತರಾಟೆಗೆ ತೆಗೆದುಕೊಂಡ ಬಿಜೆಪಿ ಶಾಸಕ ಸುನಿಲ್ ಕುಮಾರ್, ಎಲೆ ಚುಕ್ಕಿ ರೋಗ ನಿಯಂತ್ರಣಕ್ಕೆ ಬಿಡುಗಡೆಯಾದ ಹಾಗೂ ಬಳಕೆಯಾದ ಹಣದ ಬಗ್ಗೆ ಹೇಳಿದ್ದೀರಿ. 16,866 ಜನರಿಗೆ 5.53 ಕೋಟಿ ಬಿಡುಗಡೆ ಮಾಡಲಾಗಿದೆ ಅಂತಾ ಸಚಿವರು ಒಂದು ಉತ್ತರ ನೀಡಿದ್ದಾರೆ. ಸಚಿವರ ಉತ್ತರದ ಕೊನೆಯಲ್ಲಿ ಮತ್ತೊಂದನ್ನು ಉಲ್ಲೇಖಿಸಿದ್ದಾರೆ' ಎಂದು ವಿವರಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ 22,167 ಜನರಿದ್ದಾರೆ ಅಂತಾ ನೀವೇ ಹೇಳಿದ್ದೀರಿ. ಒಂದು ಕಡೆ ರಾಜ್ಯದಲ್ಲಿ 16 ಸಾವಿರ ಅಂತಾ ಹೇಳಿ ಮತ್ತೊಂದು ಕಡೆ 22 ಸಾವಿರ ಕೋಟಿ ಅಂತಾ ಹೇಳ್ತಿದ್ದೀರಿ. ಈ ಸಾಲಿನ ಆಯವ್ಯಯದ ವರದಿಯಲ್ಲಿ 62 ಕೋಟಿಯನ್ನ ಎಲೆಚುಕ್ಕೆ ರೋಗಕ್ಕೆ ಒದಗಿಸಿದ್ದೇವೆ ಅಂತಾ ವರದಿಯಲ್ಲಿ ಹೇಳಿದ್ದಾರೆ. 10,272 ರೈತರಿಗೆ ನಾವು ಪರಿಹಾರ ನೀಡಿದ್ದೇವೆ ಅಂತಾ ಹೇಳಿದ್ದೀರಿ. ನಿಮ್ಮ ಉತ್ತರದಲ್ಲಿ ಹದಿನಾರು ಸಾವಿರ ಅಂತಾ ಇದೆ, ಉ.ಕ ಜಿಲ್ಲೆಯಲ್ಲಿ 22 ಸಾವಿರ ಅಂತಾ ಹೇಳುತ್ತೀರಿ ಇದರಲ್ಲಿ ಯಾವುದನ್ನ ನಂಬಬೇಕು ಎಂದು ತರಾಟೆಗೆ ತೆಗೆದುಕೊಂಡರು.

### ತಪ್ಪು ಉತ್ತರ ಕೊಟ್ಟರು ಹೇಗೆ ಸುಮ್ಮನಿರೋದು

**ಇದೇ ಪ್ರಶ್ನೋತ್ತರ ಕಲಾಪದ ವೇಳೆ ಉತ್ತರ ಕೊಡುವಂತೆ ಸಚಿವರಿಗೆ ತಾಕೀತು ಮಾಡಿದರು. ಎಲ್ಲದಕ್ಕೂ ಹೀಗೆ ಮಾಡಬೇಡಿ, ನಾವು ಬಜೆಟ್ ಬುಕ್ ಹಿಡಿದು ಚರ್ಚೆ ಮಾಡ್ತೇವೆ. ನೀವು ಉತ್ತರ ಕೊಡಿಸಬೇಕು, ಸದನಕ್ಕೆ ತಪ್ಪು ಉತ್ತರ ಕೊಟ್ಟರು ಹೇಗೆ ಸುಮ್ಮನಿರೋದು. ಇಲ್ಲ ಉತ್ತರವನ್ನ ವಾಪಸ್ ಪಡೆಯಲಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.**



### ಮಾಹಿತಿ ಪಡೆದು ಗೊಂದಲ ಬಗೆಹರಿಸಿ

**ಸಚಿವರ ಮಾತಿಗೆ ಸಮಾಧಾನಗೊಳ್ಳದ ಬಿಜೆಪಿ ಸುನಿಲ್ ಕುಮಾರ್, ಇಡೀ ರಾಜ್ಯದಲ್ಲಿ 16 ಸಾವಿರ ಜನ ಅಂತ ಹೇಳ್ತಿದ್ದಿರಿ. ಆದರೆ ಉತ್ತರದಲ್ಲಿ 22 ಸಾವಿರ ಜನ ಅಂತ ಹೇಳಿದ್ದೀರಾ ಎಂದು ಪ್ರಶ್ನಿಸಿದರು. ಕೊನೆಗೆ ಗೊಂದಲಕ್ಕೆ ತೆರೆ ಎಳೆಯಲು ಮಧ್ಯಪ್ರವೇಶಿಸಿದ ಸ್ಪೀಕರ್ ಖಾದರ್, ಮಾಹಿತಿ ಪಡೆದು ಗೊಂದಲ ಬಗೆಹರಿಸಿ ಎಂದು ಸಚಿವರಿಗೆ ಸಲಹೆ ನೀಡಿದರು.**

ಬಜೆಟ್ ಗೂ ನಿಮ್ಮ ಇಲಾಖೆಗೂ ಡಿಸ್ ಲಿಂಕ್ ಆಗಿದೆಯಾ ಎಲೆಚುಕ್ಕೆ ರೋಗದಿಂದ ಅಲ್ಲಿ ಜನ ಸಾಯುತ್ತಿದ್ದರೆ, ಇಲ್ಲಿ ನೀವು ಸುಳ್ಳು ಹೇಳುತ್ತೀರಾ ಎಂದು ಸುನೀಲ್ ಕುಮಾರ್ ಪ್ರಶ್ನಿಸಿದರು. ಈ ವೇಳೆ ನಾವು ಸುಳ್ಳು ಲೆಕ್ಕ ನೀಡಿಲ್ಲ ಅಂತ ಸಬೂಬು ನೀಡಲು ಸಚಿವ ಮಲ್ಲಿಕಾರ್ಜುನ್ ಮುಂದಾದರು. ನಾವು 8.61 ಕೋಟಿ 5.53 ಕೋಟಿ ಕೊಟ್ಟಿದ್ದೇವೆ. ಈಗ ಜಿಲ್ಲಾವಾರು ನೀಡಿರುವ ಪ್ರಸ್ತಾವನೆ ಕಳುಹಿಸಿದ್ದೇವೆ. ಕೇಂದ್ರದ ಪಾಲು ಇದೆ ಅದನ್ನೂ ಕಳಿಸಿದ್ದೇವೆ. ಇದರಲ್ಲಿ ಯಾವ ಮುಚ್ಚು ಮರೆ ಇಲ್ಲ ಎಂದ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಸಮರ್ಥಿಸಿಕೊಂಡರು.

## ಸಿಲಿಂಡರ್‌ಗಾಗಿ ಜನರ ಕ್ಯೂ..!

• ಉದಯವಾಹಿನಿ, ಬೆಂಗಳೂರು

ಗ್ಯಾಸ್ ಸಮಸ್ಯೆಯಿಂದ ಹಲವು ಹೋಟೆಲ್‌ಗಳಲ್ಲಿ ತಿನಿಸುಗಳ ತಯಾರಿಕೆಯಲ್ಲಿ ವ್ಯತ್ಯಯವಾಗಿದ್ದು, ಗ್ರಾಹಕರಿಗೂ ಕೂಡ ತಲೆ ಬಿಸಿಯಾಗಿದೆ. ತರಾವರಿ ತಿಂಡಿಗಳನ್ನು ತಯಾರಿಸುತ್ತಾ ಗ್ರಾಹಕರನ್ನು ಆಕರ್ಷಿಸುತ್ತಿದ್ದ ಕೆಲವು ಹೋಟೆಲ್‌ಗಳು ಮುಚ್ಚಲಾಗಿದ್ದು, ಇನ್ನೂ ಕೆಲವೆಡೆ ಕೇವಲ ಅನ್ನ ಸಾಂಬಾರ್, ಚಿತ್ರಾನ್ನ ಮಾತ್ರ ದೊರೆಯುತ್ತಿದೆ. ವಾಣಿಜ್ಯ ಸಿಲಿಂಡರ್‌ಗಳನ್ನು ನಿಗದಿಯಂತೆ ಕೆಲವು ಹೋಟೆಲ್‌ಗಳಿಗೆ ಸರಬರಾಜು ಮಾಡಲಾಗುತ್ತಿದೆ. ಆದರೆ ಒಲೆ ಬೇಡಿಕೆ ಹೆಚ್ಚುತ್ತಿರುವುದರಿಂದ ಇಂತಹ ಪರಿಸ್ಥಿತಿ ಅನ್ನು ನಿರ್ಮಾಣವಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಕೆಲವೆಡೆ ಈಗ ಇಂಡೆಕ್ಷನ್ ಸ್ಟೌಗಳನ್ನು ಬಳಸುತ್ತಿದ್ದು ಪರಿಸ್ಥಿತಿ ಸುಧಾರಿಸುವ ಸಾಧ್ಯತೆ ಇದೆ.



ಸೀಮೆಎಣ್ಣೆ ಪಂಪ್ ಸ್ಟೌಗಳು ಕೂಡ ಹೊರಗೆ ಬರುತ್ತಿವೆ. ಸೌರಶಕ್ತಿಯನ್ನು ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ಆಹಾರ ತಯಾರಿಕೆ ಕೇಂದ್ರಗಳು ಕೂಡ ಹಲವೆಡೆ ಕಾರ್ಯನಿರ್ವಹಿಸುತ್ತಿದ್ದು, ಅದನ್ನು ಬಳಸಿಕೊಂಡು ನಿಗದಿಯಂತೆ ಹಲವು ಹೋಟೆಲ್‌ಗಳಿಗೆ ತಲುಪಿಸಲಾಗುತ್ತಿದೆ. ಇನ್ನೂ ಕೆಲವರು ಆನ್‌ಲೈನ್ ಮೂಲಕ ಆಹಾರ ತರಿಸಿಕೊಳ್ಳುವ ವ್ಯವಸ್ಥೆಗೂ ಕೂಡ ಪೆಟ್ಟು ಬಿದ್ದಿದ್ದು, ಮನೆ ಊಟಕ್ಕೆ ಈಗ ಕೆಲವರು ಮುಂದಾಗುತ್ತಿದ್ದಾರೆ. ಇನ್ನು ಕೆಲವು ದಿನಗಳಲ್ಲಿ ಪರಿಸ್ಥಿತಿ ಸುಧಾರಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಇನ್ನು ರಾಜ್ಯದ ಕೆಲವೆಡೆ ಗ್ಯಾಸ್ ಏಜೆನ್ಸಿಯವರು ಫೋನ್ ಕಾಲ್‌ರಿಸೀವ್ ಮಾಡುತ್ತಿಲ್ಲ ಎಂದು ಕೇಂದ್ರದ ಬಳಿಯೇ ಹೋಗಿ ಸಿಲಿಂಡರ್‌ಗಳನ್ನು ಪಡೆಯಲು ಸಾಲು ಗಟ್ಟಿರುವ ದೃಶ್ಯಗಳು ಕೂಡ ಕಂಡು ಬಂದಿದೆ. ಹೋಟೆಲ್‌ಗಳಲ್ಲಿ ಪಾರ್ಟಿಗಳು ಕಡಿಮೆಯಾಗಿದ್ದು, ಆಹಾರ ಪೂರೈಕೆ ಕ್ಷೇತ್ರದಲ್ಲೂ ಕೂಡ ಸಾಕಷ್ಟು ಸಮಸ್ಯೆ ಉಂಟಾಗಿದೆ. ಮದುವೆ, ಶುಭ ಕಾರ್ಯಗಳಿಗೆ ಆಹಾರ ತಯಾರಿಕೆಗೆ ಕೂಡ ಅನಿಲ ಕೊರತೆ ಉಂಟಾಗಿದೆ.

## ಆಸ್ಪತ್ರೆ, ಹಾಸ್ಟೆಲ್‌ಗಳಿಗೆ ಮೊದಲ ಆದ್ಯತೆ, ಹೋಟೆಲ್ ನವರು ತಾಳ್ಮೆ ವಹಿಸಿ : ಕೆ.ಎಚ್.ಮುನಿಯಪ್ಪ

• ಉದಯವಾಹಿನಿ, ಬೆಂಗಳೂರು



ಆಸ್ಪತ್ರೆಗಳಿಗೆ, ವಿದ್ಯಾರ್ಥಿ ನಿಲಯಗಳಿಗೆ ವಾಣಿಜ್ಯ ಬಳಕೆಯ ಅನಿಲದ ಸಿಲಿಂಡರ್‌ಗಳನ್ನು ಒದಗಿಸಲಾಗುವುದು. ಹೋಟೆಲ್‌ನವರು ಇನ್ನೂ ಒಂದು ವಾರ ತಾಳ್ಮೆಯಿಂದ ಇರಬೇಕಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ವಿಧಾನಪರಿಷತ್ ನಲ್ಲಿಂದು ತಿಳಿಸಿದರು.

ಶೂನ್ಯ ವೇಳೆಯಲ್ಲಿ ಆಡಳಿತ ಪಕ್ಷದ ಶಾಸಕರಾದ ಐವಾನ್ ಡಿಸೋಜ ಹಾಗೂ ಎಂ.ನಾಗರಾಜ ಯಾದವ್ ಅವರು ಮಾಡಿದ ಪ್ರಸ್ತಾಪಕ್ಕೆ ಸಚಿವರು ಶುಕ್ರವರ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ತೈಲ ಕಂಪನಿಗಳ ಅಧಿಕಾರಿಗಳ ಜೊತೆ ಸಭೆ ನಡೆಸಿ ಸಲಹೆ ಸೂಚನೆಗಳನ್ನು ನೀಡಲಾಗಿದೆ. ತಕ್ಷಣಕ್ಕೆ ವಾಣಿಜ್ಯ ಬಳಕೆ ಅನಿಲದ ಪೂರೈಕೆ ಸಮಸ್ಯೆಯಿದ್ದು, ಒಂದು ವಾರದ ಬಳಿಕ ಬಗೆಹರಿಯಲಿದೆ.

ಹೀಗಾಗಿ ಅಗತ್ಯವಿರುವಷ್ಟು ಅಡುಗೆ ತಯಾರು ಮಾಡಬೇಕು. ಉಳಿದಂತೆ ಎಲೆಕ್ಟ್ರಿಕ್ ಒಲೆ ಬಳಕೆ ಮಾಡಿಕೊಳ್ಳಬೇಕು ಎಂದರು ಈಗಾಗಲೇ 2 ಹಡಗುಗಳು ಬಂದಿದ್ದು, ಇನ್ನೂ 10 ಹಡಗುಗಳು ಬರುತ್ತಿವೆ. ಕಾಳಸಂತೆಯಲ್ಲಿ ಅನಿಲದ ಸಿಲಿಂಡರ್‌ಗಳು ಮಾರಾಟವಾಗದಂತೆ ಎಚ್ಚರಿಕೆ ವಹಿಸಲು, ತಕ್ಷಣ ಕ್ರಮ ಕೈಗೊಳ್ಳಲು ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ. ಸದ್ಯಕ್ಕೆ ವಾಣಿಜ್ಯ ಬಳಕೆಯ ಅನಿಲದ ಸಿಲಿಂಡರ್ ದಾಸ್ತಾನು ಇಲ್ಲ. ತುರ್ತು ಕಾರ್ಯಗಳಿಗೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಒದಗಿಸುತ್ತೇವೆ. ಆಟೋ ರಿಕ್ಷಾಗಳಿಗೆ ಬೆಂಗಳೂರಿನಲ್ಲಿ ಗ್ಯಾಸ್‌ಒದಗಿಸಲು, ಮಂಗಳೂರಿನಲ್ಲೂ ಗ್ಯಾಸ್‌ಸಮಸ್ಯೆ ಬಗೆಹರಿಸಲು ಸೂಚಿಸಲಾಗಿದೆ ಎಂದರು.

**ಎಲ್‌ಪಿಜಿ ದಾಸ್ತಾನು ಕೊರತೆ ಇಲ್ಲ ವದಂತಿಗೆ ಕಿವಿ ಗೊಡಬೇಡಿ:** ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದು ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡ ಬಾರದೆಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ.ಜಿ ತಿಳಿಸಿದ್ದಾರೆ.

## ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ ವರದಿ ಶೀಘ್ರವೇ ಸಲ್ಲಿಕೆ : ಸಚಿವ

• ಉದಯವಾಹಿನಿ, ಬೆಂಗಳೂರು



ಹಿಂದುಳಿದ ಆಯೋಗದ ವತಿಯಿಂದ ನಡೆಸಲಾಗಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಶೀಘ್ರವೇ ಸರ್ಕಾರಕ್ಕೆ ಸಲ್ಲಿಕೆಯಾಗಲಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ವಿಧಾನಪರಿಷತ್‌ನಲ್ಲಿಂದು ತಿಳಿಸಿದರು. ಶಾಸಕ ಪೂಜಾರ್ ಅವರ ಪರವಾಗಿ ಶಾಸಕ ರವಿಕುಮಾರ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ನೇತೃತ್ವದಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ಆ ವರದಿ ದೊರೆತ ನಂತರ ಯಾವ ಸಮುದಾಯದ ಜನರು ಎಷ್ಟು ಜನಸಂಖ್ಯೆ ಹೊಂದಿದ್ದಾರೆ ಎಂಬುದು ಗೊತ್ತಾಗಲಿದೆ.ಆನಂತರ ಆಯಾ ಸಮುದಾಯದ ಜನಸಂಖ್ಯೆ ಆಧಾರದ ಮೇಲೆ ವಿಶೇಷ ಸವಲತ್ತುಗಳನ್ನು ಕೊಡಲಾಗುವುದು ಎಂದರು. ಬಾಗಲಕೋಟೆ ಜಿಲ್ಲೆಯಲ್ಲಿ ಅಲೆಮಾರಿಗಳಿಗೆ ಮುಂದಿನ ದಿನಗಳಲ್ಲಿ ಮನೆ ನಿರ್ಮಿಸಿ ಕೊಡಲಾಗುವುದು. ರಾಜೀವ್ ಗಾಂಧಿ ವಸತಿ ನಿಗಮದಡಿ ಮನೆ ನಿರ್ಮಿಸಲು ಅವಕಾಶವಿದೆ. ತುಮಕೂರು, ಕೊಪ್ಪಳ, ಚಿತ್ರದುರ್ಗ ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಒಂದೊಂದು ಹಳ್ಳಿಯಲ್ಲಿ ಅಲೆಮಾರಿಗಳಿಗೆ ಮನೆ ನಿರ್ಮಿಸಿಕೊಡುವ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು.

**ಹೊಲಿಗೆ ಯಂತ್ರ:** ಡಾ.ಯತೀಂದ್ರ ಅವರ ಪರವಾಗಿ ಶಾಸಕ ಐವಾನ್ ಡಿಸೋಜ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ ತಂಗಡಗಿ ಅವರು, 28 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದು, ಅಷ್ಟೂ ಮಂದಿಗೆ ಹೊಲಿಗೆ ಯಂತ್ರವನ್ನು ನೀಡಬೇಕು ಎಂದರು. 2025-26 ನೇ ಸಾಲಿನಲ್ಲಿ ದೇವರಾಜ ಅರಸು ಹಿಂದುಳಿದ ಅಭಿವೃದ್ಧಿ ನಿಗಮದ ವತಿಯಿಂದ 21,562 ಹಾಗೂ ಮರಾಠ ಸಮುದಾಯದ ಅಭಿವೃದ್ಧಿ ನಿಗಮದ ವತಿಯಿಂದ 2307 ಅರ್ಜಿಗಳು ಸ್ವೀಕಾರವಾಗಿವೆ ಎಂದು ಹೇಳಿದರು.

2023-24ನೇ ಸಾಲಿನಲ್ಲಿ ಕ್ರಿಯಾ ಯೋಜನೆ ಮಾಡದ ಹಿನ್ನೆಲೆಯಲ್ಲಿ ಹೊಲಿಗೆ ಯಂತ್ರ ಕೊಟ್ಟಿಲ್ಲ. ಈಗಾಗಲೇ ಹೊಲಿಗೆ ಯಂತ್ರಗಳ್ನು ಫಲಾನುಭವಿಗಳಿಗೆ ನೀಡುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಫಲಾನುಭವಿಗಳ ಆಯ್ಕೆ ಪಟ್ಟಿ ನೀಡುವುದು ತಡವಾಗಿರುವ ಹಿನ್ನೆಲೆಯಲ್ಲಿ ಹೊಲಿಗೆ ಯಂತ್ರ ನೀಡುವುದು ವಿಳಂಬವಾಗಿದೆ. ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಶೀಘ್ರವೇ ಹೊಲಿಗೆ ಯಂತ್ರಗಳನ್ನು ನೀಡಲಾಗುವುದು ಎಂದರು.

**ವಿದ್ಯಾರ್ಥಿನಿಲಯ ಮಂಜೂರು :** ಬೀದರ್ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 38 ಮೆಟ್ರಿಕ್ ಪೂರ್ವ, 40 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಶಾಸಕ ಎಂ.ಜಿ.ಮುಳೆ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು. 2026-27ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ 100 ಸಂಖ್ಯಾಬಲದ ಒಂದು ಬಾಲಕರ ಹಾಗೂ ಒಂದು ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದರು.

## ಅಕ್ರಮ ಲೇಔಟ್ ನಿರ್ಮಾಣ ಮಾಡಿದರೆ ನಿರ್ದಾಕ್ಷಿಣ್ಯ ಕ್ರಮ : ಸಚಿವ

• ಉದಯವಾಹಿನಿ, ಬೆಂಗಳೂರು

ಕಾನೂನು ಬಾಹಿರವಾಗಿ ಅಕ್ರಮ ಬಡಾವಣೆ ನಿರ್ಮಾಣ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾನಪರಿಷತ್‌ನಲ್ಲಿಂದು ತಿಳಿಸಿದರು. ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಎಚ್.ಗೋಪಿನಾಥ್ ಅವರ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸುವಾಗ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ಅಕ್ರಮ ಬಡಾವಣೆಯ ನಿವೇಶನ ನೋಂದಣಿ ಮಾಡುವುದನ್ನು ನಿಲ್ಲಿಸಲಾಗಿದೆ. ಬಡಾವಣೆ ನಿರ್ಮಾಣ ಮಾಡಿದವರು ಕಾನೂನು ಪ್ರಕಾರ ನಿಯಮ ಪಾಲನೆ ಮಾಡುತ್ತಿರಲಿಲ್ಲ. ಆದರೆ ಅಂತಹ ಬಡಾವಣೆಗಳಲ್ಲಿ ನಿವೇಶನ ಖರೀದಿ ಮಾಡಿದವರು ಸಂತ್ರಸ್ತರಾಗುತ್ತಿದ್ದಾರೆ. ಆ ಕಾರಣಕ್ಕಾಗಿ ಅಕ್ರಮ ಬಡಾವಣೆ ನಿವೇಶನ ನೋಂದಣಿಯನ್ನು ನಿಲ್ಲಿಸಿದ್ದೇವೆ ಎಂದರು.

**ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಅಧಿನಿಯಮದ ಪ್ರಕಾರ, 1993, 190 ಎ ಪ್ರಕರಣದ ತರುವಾಯ 190 ಬಿ, 199 ಸಿ ಹೊಸ ಪ್ರಕರಣಗಳನ್ನು ಸೇರ್ಪಡೆ ಮಾಡಿದೆ.**

**- ಕೃಷ್ಣಭೈರೇಗೌಡ, ಕಂದಾಯ ಸಚಿವ**



ಬಡಾವಣೆಯಲ್ಲಿ ಅರ್ಧ ಉಳಿದಿರುವ ನಿವೇಶನಗಳಿಗೆ ನೋಂದಣಿ ಮಾಡಬೇಕಾದರೆ ನಿಯಮಗಳನ್ನು ಪಾಲಿಸಬೇಕು ಬಡಾವಣೆ ವಿನ್ಯಾಸ ಯೋಜನೆಗೆ ಅನುಮೋದನೆ ಪಡೆದುಕೊಂಡರೆ ಅವಕಾಶ ಕೊಡಬಹುದಾಗಿದೆ ಎಂದು ಸ್ಪಷ್ಟಪಡಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಅನಧಿಕೃತ ಬಡಾವಣೆಗಳಿಂದ ತೆರಿಗೆ ಬರುತ್ತಿಲ್ಲ. ನಿಯಮ ಮೀರಿ ಬಡಾವಣೆ ನಿರ್ಮಿಸಿದರೆ ಸಕ್ರಮ ಮಾಡುವುದಾದರೂ ಹೇಗೆ? ಬಿ ಖಾತಾ ನೀಡುವ ವಿಚಾರದಲ್ಲೂ ನಿಯಮ ತರಬೇಕಾಗುತ್ತದೆ ಎಂದು ಹೇಳಿದರು. ಕಂದಾಯ ಭೂಮಿಯಲ್ಲಿ ವಿನ್ಯಾಸ ಅನುಮೋದನೆ ಇಲ್ಲದ ಬಡಾವಣೆಗಳಲ್ಲಿ ನೋಂದಣಿಯಾಗದ ನಿವೇಶನಗಳ ಬಗ್ಗೆ ಕ್ರಮ ವಹಿಸಬಹುದಾಗಿದೆ.

ಅಧಿಸೂಚಿತ ದಿನಾಂಕಕ್ಕೆ ಪೂರ್ವದಲ್ಲಿ ತೆರಿಗೆ ವ್ಯಾಪ್ತಿಗೆ ಒಳಪಡದ ಖಾಲಿ ನಿವೇಶನಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾದ ಬಡಾವಣೆಗಳಲ್ಲಿ ಮೂಲ ಮಾಲೀಕರ ಹೆಸರಿನಲ್ಲಿರುವ ಕಂದಾಯ ಜಮೀನಿನಲ್ಲಿ ನಿವೇಶನಗಳೆಂಬ ಕಾರಣಕ್ಕಾಗಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಅವಕಾಶವಿಲ್ಲ ಎಂದು 2025ರ ಅ.15 ರಂದು ಅಧಿಸೂಚಿಸಲಾಗಿದೆ. ಈಗಾಗಲೇ ಭೂ ಪರಿವರ್ತನೆ ವರ್ಗಾವಣೆಗೆ ಒಳಪಟ್ಟಿರುವ ನಿವೇಶನಗಳನ್ನು ಹೊರತುಪಡಿಸಿ ಉಳಿಕೆ ಜಾಗವನ್ನು ಮಾಲೀಕನ ಹೆಸರಿನಲ್ಲಿ ಏಕ ನಿವೇಶನವೆಂದು ಪರಿಗಣಿಸಬಹುದು ಎಂದರು.

## ವಿಧಾನಪರಿಷತ್‌ನಲ್ಲಿ ಸಾಲಗಾರರ ರಕ್ಷಣಾ ವಿಧೇಯಕ

• ಉದಯವಾಹಿನಿ, ಬೆಂಗಳೂರು



ಸಾರ್ವಜನಿಕ ಹಿತದೃಷ್ಟಿಯಿಂದ ಕಷ್ಟ ಸಂದರ್ಭದಲ್ಲಿ ಚಿನ್ನ ಅಡವಿಟ್ಟು ಸಾಲ ಪಡೆಯುವವರ ಹಿತರಕ್ಷಣೆ ಉದ್ದೇಶದ ಕರ್ನಾಟಕ ಚಿನ್ನ ಅಡಮಾನವಿಟ್ಟ ಸಾಲಗಾರರ ರಕ್ಷಣಾ ವಿಧೇಯಕ-2025 ಎಂಬ ಖಾಸಗಿ ಸದಸ್ಯರ ವಿಧೇಯಕವನ್ನು ಶಾಸಕ ರಮೇಶ್‌ಬಾಬು ವಿಧಾನಪರಿಷತ್‌ನಲ್ಲಿಂದು ಮಂಡಿಸಿದರು.

ವಿಧೇಯಕ ಮಂಡಿಸಿ ಮಾತನಾಡಿದ ಶಾಸಕರು, ಖಾಸಗಿ ಹಣಕಾಸು ಸಂಸ್ಥೆಗಳು ಚಿನ್ನವನ್ನು ಅಡವಿಟ್ಟುಕೊಂಡು ಸಾಲ ನೀಡುವಾಗ ಮೋಸ ಮಾಡುವ ನಿದರ್ಶನವಿದೆ. ಚಿನ್ನದ ಮಾರುಕಟ್ಟೆ ಮೌಲ್ಯದಲ್ಲಿ ಅರ್ಧಕ್ಕಿಂತಲೂ ಕಡಿಮೆ ಕೊಡಲಾಗುತ್ತದೆ ಸಾಲಗಾರರಿಗೆ ಸರಿಯಾದ ಮಾಹಿತಿ ದೊರೆಯದೆ ವಂಚನೆಗೊಳಗಾಗುತ್ತಾರೆ. ಸಾಲ ಮರು ಪಾವತಿಸದ ಸಾಲಗಾರರ ಚಿನ್ನವನ್ನು ಮುಟ್ಟುಗೋಲು ಹಾಕಲಾಗುತ್ತದೆ ಚಿನ್ನ ಅಡವಿಟ್ಟವರಿಗೆ ಮಾರುಕಟ್ಟೆ ಮೌಲ್ಯದ ಶೇ.25ರಷ್ಟು ಸಿಗುತ್ತದೆ. ಅಡವಿಟ್ಟ ಚಿನ್ನ ಹರಾಜು ಹಾಕುವ ಪ್ರಕ್ರಿಯೆಯು ಪಾರದರ್ಶಕವಾಗಿರುವುದಿಲ್ಲ. ಬಡ್ಡಿ ವಿಧಿಸುವುದು ಸರಿಯಿರುವುದಿಲ್ಲ, ತೂಕದಲ್ಲಿ ಮೋಸವಾಗುತ್ತದೆ. ಸಾಲಗಾರರ ಶೋಷಣೆ ಮಾಡಲಾಗುತ್ತದೆ ಎಂದು ವಿವರಿಸಿದರು. ಅಡಮಾನವಿಟ್ಟ ಚಿನ್ನ ಹರಾಜು ಹಾಕುವ ಮೊದಲು 180 ದಿನಗಳ ಕನಿಷ್ಠ ನೋಟಿಸಿನ ಅವಧಿಯನ್ನು ಖಚಿತಪಡಿಸಿಕೊಳ್ಳಬೇಕು.

ಪಾರದರ್ಶಕ ಮೌಲ್ಯಮಾಪನ ಸೂಕ್ತವಾದ ಸಂವಹನ, ಬಿಡಿಸಿಕೊಳ್ಳುವಿಕೆಗೆ ಅವಕಾಶವನ್ನು ಕಡ್ಡಾಯಗೊಳಿಸುವ ಉದ್ದೇಶವನ್ನು ಈ ವಿಧೇಯಕ ಒಳಗೊಂಡಿದೆ. ಪರವಾನಗಿ ಪಡೆದವರಿಂದ, ಮೇಲ್ವಿಚಾರಣೆಯ ಕಾರ್ಯವಿಧಾನಗಳ ಮೂಲಕ ಹರಾಜು ಪ್ರಕ್ರಿಯೆಯನ್ನು ನಿಯಂತ್ರಿಸಬೇಕು.ಸಾಲಗಾರರ ರಕ್ಷಣಾ ಮಾನದಂಡಗಳ ಉಲ್ಲಂಘನೆಗಾಗಿ ದಂಡ ವಿಧಿಸಬೇಕು.

ಸಾಲ ನೀಡುವ ಕ್ಷೇತ್ರದಲ್ಲಿ ನ್ಯಾಯಯುತ ವಾಣಿಜ್ಯ ಪದ್ಧತಿಗಳನ್ನು ಖಚಿತಪಡಿಸಿಕೊಳ್ಳುವಾಗ ಖಾಸಗಿ ಹಣಕಾಸು ಸಂಸ್ಥೆಗಳಿಂದ, ಬ್ಯಾಂಕೇತರ ಹಣಕಾಸು ಕಂಪನಿಗಳಿಂದ ಆಗುವ ಶೋಷಣೆಯಿಂದ ಬಡ, ಮಧ್ಯಮ ವರ್ಗದ ಸಾಲಗಾರರ ಹಿತಾಸಕ್ತಿಗಳನ್ನು ರಕ್ಷಿಸುವ ಗುರಿಗಳನ್ನು ಈ ವಿಧೇಯಕ ಒಳಗೊಂಡಿದೆ ಎಂದರು.

ಎಚ್‌ಡಿ ಕುಮಾರಸ್ವಾಮಿ – ಹಿರಿಯ ಐಪಿಎಸ್ ಅಧಿಕಾರಿ ಚಂದ್ರಶೇಖರ್ ನಡುವಿನ ಜಗಳ ಪ್ರಕರಣವನ್ನು ಇತ್ಯರ್ಥಕ್ಕೆ ಮಧ್ಯಸ್ಥಿಕೆದಾರರ ನೇಮಿಸಲು ಹೈಕೋರ್ಟ್ ಇಂಗಿತ ಪಟ್ಟಿದೆ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರ ಪೀಠವು ಕೇಸ್ ವಿಚಾರಣೆ ನಡೆಸಿ ವೃತ್ತಿಪರ ಮಧ್ಯಸ್ಥಿಕೆದಾರರನ್ನು ನೇಮಿಸುವ ಸಲಹೆಯನ್ನು ಪರಿಗಣಿಸಬೇಕು ಎಂದು ಪೀಠ ಹೇಳಿಕೆ.

# ಎಚ್‌ಡಿ ಕುಮಾರಸ್ವಾಮಿ-ಚಂದ್ರಶೇಖರ್ ಜಟಾಪಟಿ

### ಉಭಯ ಪಕ್ಷಕಾರರು ನಿರ್ಧರಿಸಿದ ಬಳಿಕ ಮುಂದಿನ ಪ್ರಕ್ರಿಯೆ ನಡೆಯಲಿದೆ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಮತ್ತು ಹಿರಿಯ ಐಪಿಎಸ್ ಅಧಿಕಾರಿ ಎಂ ಚಂದ್ರಶೇಖರ್ ನಡುವಿನ ಜಟಾಪಟಿ ಪ್ರಕರಣ ಇತ್ಯರ್ಥಕ್ಕೆ ವೃತ್ತಿಪರ ಮಧ್ಯಸ್ಥಿಕೆದಾರರನ್ನು ನೇಮಿಸುವ ಇಂಗಿತವನ್ನು ಹೈಕೋರ್ಟ್ ವ್ಯಕ್ತಪಡಿಸಿದೆ. ಲೋಕಾಯುಕ್ತ ವಿಶೇಷ ಪೊಲೀಸ್ ತನಿಖಾ ದಳದ ಮುಖ್ಯಸ್ಥ ಎಂ.ಚಂದ್ರಶೇಖರ್‌ಗೆ ಬೆದರಿಕೆ ಹಾಕಿದ ಸಂಬಂಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಕುಮಾರಸ್ವಾಮಿ ಸಲ್ಲಿಸಿರುವ ಅರ್ಜಿಯ ಕುರಿತು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಉಭಯ ಪಕ್ಷಕಾರರು ವೃತ್ತಿಪರ ಮಧ್ಯಸ್ಥಿಕೆದಾರರನ್ನು ನೇಮಿಸುವ ಸಲಹೆ ಪರಿಗಣಿಸಬೇಕು. ಮಧ್ಯಸ್ಥಿಕೆದಾರರನ್ನು ನೇಮಿಸಲು ಉಭಯ ಪಕ್ಷಕಾರರು ಒಪ್ಪಿದರೆ, ಯಾರು ಮಧ್ಯಸ್ಥಿಕೆದಾರರಾಗಬೇಕೆಂಬುದನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬಹುದು.



ಉಭಯ ಪಕ್ಷಕಾರರು ನಿರ್ಧರಿಸಿದ ಬಳಿಕ ಮುಂದಿನ ಪ್ರಕ್ರಿಯೆ ನಡೆಯಲಿದೆ ಎಂದು ನ್ಯಾಯಾಲಯ ಹೇಳಿದೆ. ಎಚ್‌ಡಿಕೆ ಪರ ಹಿರಿಯ ವಕೀಲ ಹಷ್ಮತ್ ಪಾಷಾ, ಚಂದ್ರಶೇಖರ್‌ಗೆ ಬೆದರಿಕೆ ಹಾಕಿಲ್ಲ, ಅವರ ವಿರುದ್ಧ ಯಾವುದೇ ಪದ ಬಳಕೆ ಮಾಡಿಲ್ಲ. ಆದರೆ, ಚಂದ್ರಶೇಖರ್‌ಅವರೇ ಕುಮಾರಸ್ವಾಮಿ ವಿರುದ್ಧ ಹಲವು ಮಾನಹಾನಿ ಪದ ಬಳಸಿದ್ದಾರೆ. ಎಚ್‌ಡಿಕೆ ಬೆದರಿಕೆ ಹಾಕಿಲ್ಲ. ಹಾಗಾಗಿ ಅಫಿಡವಿಟ್ ಸಲ್ಲಿಸುವಂತೆ ಕುಮಾರಸ್ವಾಮಿಗೆ ಹೇಳಿರುವುದು ಅನಗತ್ಯ. ದೂರುದಾರರು ಹಾಗೆ ಒತ್ತಾಯ ಮಾಡಲಾಗದು. ಕುಮಾರಸ್ವಾಮಿ ಕ್ಷಮೆ ಕೋರುವುದಿಲ್ಲ, ಅಫಿಡವಿಟ್ ಸಲ್ಲಿಸುವುದಿಲ್ಲ, ಎಂದರು.

ಚಂದ್ರಶೇಖರ್ ಪರ ವಕೀಲರು, ಚಂದ್ರಶೇಖರ್ ಸಂತ್ರಸ್ತರಾಗಿದ್ದಾರೆ. ನ್ಯಾಯಾಲಯದ ಮುಂದೆ ಅಫಿಡವಿಟ್ ಹಾಕಿ ಎಂದು ಹೇಳುವುದರಲ್ಲಿ ತಪ್ಪೇನಿದೆ? ಮಧ್ಯಸ್ಥಿಕೆದಾರರ ನೇಮಕಾತಿ ಕುರಿತು ತಮ್ಮ ಕಕ್ಷಿದಾರರ ಸಲಹೆ ಪಡೆದು ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗುವುದು, ಎಂದರು.

**ವಿಚಾರಣೆಯನ್ನು ಮಾ.26ಕ್ಕೆ ಮುಂದೂಡಿಕೆ**

**ಎರಡೂ ಕಡೆಯ ಅಭಿಪ್ರಾಯ ದಾಖಲಿಸಿದ ನ್ಯಾಯಾಲಯ ಅರ್ಜಿ ವಿಚಾರಣೆಯನ್ನು ಮಾ.26ಕ್ಕೆ ಮುಂದೂಡಿ, ಅಲ್ಲಿಯವರೆಗೆ ಮಧ್ಯಂತರ ತಡೆಯಾಜ್ಞೆ ವಿಸ್ತರಣೆ ಮಾಡಿ ಆದೇಶ ಹೊರಡಿಸಿತು.**

### ಮಧ್ಯಸ್ಥಿಕೆದಾರರು ಇಬ್ಬರ ಜೊತೆ ಚರ್ಚಿಸಿ ಸಲಹೆ ನೀಡಲಿ

ಉಭಯ ಪಕ್ಷಕಾರರು ಒಪ್ಪಿದರೆ ಮಧ್ಯಸ್ಥಿಕೆದಾರರನ್ನು ನೇಮಿಸಲಾಗುವುದು. ಇಬ್ಬರಿಗೂ ಒಪ್ಪಿತವಾದ ವ್ಯಕ್ತಿ ಮಧ್ಯಸ್ಥಿಕೆದಾರರಾಗಬೇಕು. ಈ ಪ್ರಕರಣ ಇತ್ಯರ್ಥಪಡಿಸುವುದಕ್ಕೆ ಮುಂದಾಗುವ ವ್ಯವಸ್ಥೆ ನೋಡಬೇಕಿದೆ. ಇಬ್ಬರಿಗೂ ಅಹವಾಲುಗಳಿರುವುದರಿಂದ ಸಾಧ್ಯತೆಗಳನ್ನು ಹುಡುಕುವ ಮೂರನೇ ವ್ಯಕ್ತಿ ಇರಬೇಕು. ಮಧ್ಯಸ್ಥಿಕೆದಾರರು ಇಬ್ಬರ ಜೊತೆ ಚರ್ಚಿಸಿ ಸಲಹೆ ನೀಡಲಿ. ಆನಂತರ ನಿರ್ಧರಿಸೋಣ' ಎಂದು ಹೇಳಿತು.

## ಮಾ.15 ರಂದು ಕೆಂಗಲ್ ಹನುಮಂತಯ್ಯ ನೆನಪು ಕಾರ್ಯಕ್ರಮ : ಕೆ.ಶೇಷಾದ್ರಿ

• ಉದಯವಾಹಿನಿ, ರಾಮನಗರ

ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಸವಿ ನೆನಪಿನ ಕಾರ್ಯಕ್ರಮವನ್ನು ಮಾ.15 ರಂದು ಭಾನುವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಹೇಳಿದರು. ನಗಸಭೆ ಕಚೇರಿಯಲ್ಲಿ ಶುಕ್ರವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮನಗರದ ಪುಣ್ಯ ನೆಲದಲ್ಲಿ ಜನಿಸಿ ಇಡಿ ರಾಷ್ಟ್ರ ಮೆಚ್ಚುವ ಆಡಳಿತ ನೀಡುವ ಮೂಲಕ ಇಂದಿನ ರಾಜಕಾರಣಿಗಳಿಗೆ ಕೆಂಗಲ ಹನುಮಂತಯ್ಯ ಅವರು ಮಾದರಿಯಾಗಿದ್ದಾರೆ. ಇಂತಹ ಮಹಾನ್ ನಾಯಕ ನಮ್ಮ ನೆಲದವರು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.



ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಅಧ್ಯಕ್ಷತೆ ವಹಿಸಲಿದ್ದಾರೆ, ಕೆಂಗಲ್ ರಾಜಕಾರಣ, ಬದುಕು ಮತ್ತು ಸಾಧನೆ ಬಗ್ಗೆ ಇತಿಹಾಸ ತಜ್ಞ ಡಾ.ತಲಕಾಡು ಚಿಕ್ಕರಂಗೇಗೌಡ ಅವರು ಮಾತನಾಡಲಿದ್ದಾರೆ. ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಉಪಸ್ಥಿತರಿರಲಿದ್ದಾರೆ. ಸಾಹಿತಿ ಡಾ. ಬೈರಮಂಗಲ ರಾಮೇಗೌಡ, ಚಿಂತಕ ಡಾ. ದೊಡ್ಡ ಬೋರಯ್ಯ, ಲೇಖಕ ಸು.ಚಿ.ಗಂಗಾಧರಯ್ಯ, ಸಾಹಿತಿ ಡಾ. ರವಿಕುಮಾರ್ ಬಾಗಿ, ರೈತಪರ ಹೋರಾಟಗಾರ್ತಿ ಅನುಸೂಯಮ್ಮ ಅವರುಗಳು ಮಾತನಾಡಲಿದ್ದು, ಜಿಲ್ಲೆಯ ಮತ್ತು ರಾಮನಗರ ತಾಲ್ಲೂಕಿನ ವಿವಿಧ ಸಂಘಟನೆಗಳು, ಎಲ್ಲಾ ಪಕ್ಷದ ರಾಜಕೀಯ ಮುಖಂಡರುಗಳು, ಹೋರಾಟಗಾರರು, ಚಿಂತಕರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

ಮುಂದಿನ ಪೀಳಿಗೆಗೆ ಕೆಂಗಲ್ ಹನುಮಂತಯ್ಯನವರ ಆಡಳಿತ ಮತ್ತು ಸಾಧನೆಯನ್ನು ಕೊಂಡೊಯ್ಯ ಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹೀಗಾಗಿ ಕೆಂಗಲ್ ಹನುಮಂತ ಅವರ ಜೀವನ ಮತ್ತು ಸಾಧನೆ ಕುರಿತ 20 ನಿಮಿಷಗಳ ಕಿರು ಚಿತ್ರವನ್ನು ಕಾರ್ಯಕ್ರಮದ ದಿನ ಪ್ರದರ್ಶನ ಮಾಡಲಾಗುವುದು ಹಾಗೂ ನಗರಸಭೆ ವ್ಯಾಪ್ತಿಗೆ ಬರುವ ಎಲ್ಲಾ ಶಾಲಾ ಮತ್ತು ಕಾಲೇಜುಗಳಲ್ಲಿ ಈ ಕಿರುಚಿತ್ರವನ್ನು ಮಕ್ಕಳಿಗೆ ಪ್ರದರ್ಶಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಇದಕ್ಕೆ ಸಾರ್ವಜನಿಕರ ಮತ್ತು ಪೋಷಕರ ಸಹಕಾರ ಅಗತ್ಯ ಎಂದು ಮನವಿ ಮಾಡಿದರು.

# ಗೊಂಬೆ ಉದ್ಯಮಕ್ಕೂ ತಟ್ಟಿದ ವಾರ್ ಎಫೆಕ್ಟ್

## ರಫ್ತಾಗದೆ ಕಾರ್ಖಾನೆಯಲ್ಲೇ ಉಳಿದ ಗೊಂಬೆಗಳು, ಸಂಕಷ್ಟದಲ್ಲಿ ಉದ್ಯಮಿಗಳು!

• ಉದಯವಾಹಿನಿ, ಚನ್ನಪಟ್ಟಣ

ಇರಾನ್ ಮೇಲೆ ಅಮೆರಿಕಾ-ಇಸ್ರೇಲ್ ಜಂಟಿಯಾಗಿ ದಾಳಿ ನಡೆಸಿದ್ದು, ಇದರಿಂದ ಮಧ್ಯಪ್ರಾಚ್ಯದಲ್ಲಿ ಯುದ್ಧ ತಾರಕಕ್ಕೇರಿದೆ. ಹೀಗೆ 14 ದಿವಸದಿಂದ ನಡೆಯುತ್ತಿರುವ ಇರಾನ್ ಮತ್ತು ಇಸ್ರೇಲ್ ನಡುವಣ ಯುದ್ಧದ ಪರಿಣಾಮ ಭಾರತದ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಬೀರುತ್ತಿದೆ ಈಗಾಗಲೇ ಜಾಗತಿಕ ಮಟ್ಟದಲ್ಲಿ ಗ್ಯಾಸ್, ಪೆಟ್ರೋಲಿಯಂ ಉತ್ಪನ್ನ ಸೇರಿ ಹಲವು ಉದ್ಯಮಕ್ಕೆ ದೊಡ್ಡ ಹೊಡೆತ ನೀಡಿರುವ ಈ ಯುದ್ಧ ಇದೀಗ ನಮ್ಮ ಗೊಂಬೆ ಉದ್ಯಮಕ್ಕೂ ಸಂಕಷ್ಟ ತಂದೊಡ್ಡಿದ್ದು, ಅಂತಾರಾಷ್ಟ್ರೀಯ ಮಟ್ಟದ ಪ್ರಸಿದ್ಧ ಚನ್ನಪಟ್ಟಣ ಗೊಂಬೆಗಳ ರಫ್ತಿಗೆ ಅಡ್ಡಿಯುಂಟಾಗಿದ್ದು, ಉದ್ಯಮಿಗಳನ್ನು ಸಂಕಷ್ಟಕ್ಕೆ ಗುರಿ ಮಾಡಿದೆ.

**ರಫ್ತಾಗದೆ ಕಾರ್ಖಾನೆಯಲ್ಲೇ ಉಳಿದ ಗೊಂಬೆಗಳು:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ದೇಶದ ಹಲವು ಉದ್ಯಮಗಳಿಗೆ ಸಂಕಷ್ಟ ಎದುರಾಗಿದ್ದು, ವಿಶ್ವಪ್ರಸಿದ್ಧ ಗೊಂಬೆ ಉದ್ಯಮಕ್ಕೆ ಇದರಿಂದ ತೊಂದರೆ ಉಂಟಾಗಿದೆ. ಅಮೆರಿಕಾ ಸೇರಿ ಹಲವು ಗಲ್ಫ್ ದೇಶಗಳಿಗೆ ಹಡಗುಗಳ ಮೂಲಕ ರಫ್ತಾಗುತ್ತಿದ್ದ ಗೊಂಬೆಗಳು, ಮರದ ಆಟಿಕೆಗಳು ಯುದ್ಧದ ಕಾರಣ ಕಾರ್ಖಾನೆಯಲ್ಲೇ ಉಳಿಯುವಂತಾಗಿದೆ. ಚನ್ನಪಟ್ಟಣದ ಕ್ರಾಫ್ಟ್ ಪಾರ್ಕ್ ನಲ್ಲಿ ತಯಾರಾಗುವ ಶೇ.30ರಷ್ಟು ಮರದ ಗೊಂಬೆಗಳು, ಆಟಿಕೆಗಳು, ಇನ್ನಿತರ ಅಲಂಕಾರಿಕ ಕಲಾಕೃತಿಗಳು ವಿದೇಶಕ್ಕೆ ರಫ್ತಾಗುತ್ತವೆ. ಚನ್ನಪಟ್ಟಣದ ಗೊಂಬೆಗಳಿಗೆ ವಿದೇಶದಲ್ಲಿ ಭಾರಿ ಬೇಡಿಕೆ ಇದ್ದು, ಬೇಡಿಕೆಗೆ ತಕ್ಕಂತೆ ತಯಾರಿಕಾ ಕಾರ್ಯ ಕೂಡ ನಡೆಯುತ್ತದೆ.

**ಯುದ್ದದಿಂದಾಗಿ ಆರ್ಡರ್ ಹೋಲ್ಡ್ ಮಾಡುತ್ತಿರುವ ವಿದೇಶಿ ಗ್ರಾಹಕರು:** ಆದರೆ, ಕಳೆದ 2 ವಾರಗಳಿಂದ ನಡೆಯುತ್ತಿರೋ ಇಸ್ರೇಲ್-ಇರಾನ್ ಯುದ್ಧದಿಂದ ಬೊಂಬೆ ಆರ್ಡರ್‌ಗಳ ಸಂಖ್ಯೆ ಇಳಿಕೆಯಾಗಿದೆ. ಇನ್ನೂ ಗೊಂಬೆ ಉದ್ಯಮಿಗಳಿಗೆ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬರಬೇಕಿದ್ದ ವಿದೇಶಿ ಆರ್ಡರ್‌ಗಳು ಬಂದಿಲ್ಲ. ಈಸ್ಟರ್, ದಸರಾ, ಕ್ರಿಸ್ಮಸ್ ಹಬ್ಬಗಳಿಗೆ ಇಷ್ಟೊತ್ತಿಗಾಗಲೇ ವಿದೇಶಿ ಗ್ರಾಹಕರು ತಮಗೆ ಬೇಕಾಗುವ ಗೊಂಬೆಗಳು ಹಾಗೂ ಮರದ ಆಕೃತಿಗಳನ್ನು ಆರ್ಡರ್ ಮಾಡ್ತಿದ್ರು. ಆದರೆ, ಯುದ್ಧದ ಆತಂಕ ಹಿನ್ನೆಲೆ ಆರ್ಡರ್ ವಿಳಂಬ ಆಗ್ತಿದೆ. ಈಗಾಗಲೇ ಆರ್ಡರ್ ಮಾಡಿರುವ ಗ್ರಾಹಕರು ತಮ್ಮ ಆರ್ಡರ್ ಹೋಲ್ಡ್ ಮಾಡುವಂತೆ ತಿಳಿಸಿದ್ದಾರೆ. ಆರ್ಡರ್ ಹೋಲ್ಡ್ ಆದ್ರೆ ನಾವು ಪ್ರೊಡಕ್ಷನ್ ಕೂಡಾ ನಿಲ್ಲಿಸಬೇಕಾಗುತ್ತೆ. ಅಲ್ಲದೇ ಹಡಗುಗಳ ಮೂಲಕ ನಮ್ಮ ವಸ್ತುಗಳು ರಫ್ತಾಗೊ ಕಾರಣ ಸಮುದ್ರದಲ್ಲಿ ಸಿಲುಕುವ ಆತಂಕ ಕೂಡಾ ಇದೆ.

ಹಾಗಾಗಿ ತಾತ್ಕಾಲಿಕವಾಗಿ ರಫ್ತು ನಿಲ್ಲಿಸಿದ್ದೇವೆ ಎಂದು ಗೊಂಬೆ ಉದ್ಯಮಿ ತಿಳಿಸಿದ್ದಾರೆ.ಒಟ್ಟಾರೆ ಇಸ್ರೇಲ್-ಇರಾನ್ ಯುದ್ಧದ ಪರಿಣಾಮ ಭಾರತದ ಹಲವು ಉದ್ಯಮಗಳಿಗೆ ಸಂಕಷ್ಟ ತಂದೊಡ್ಡಿದ್ದು, ಯುದ್ಧ ಮುಗಿಯುವವರೆಗೂ ಬೇರೆ ವಲಯಗಳಂತೆ ಬೊಂಬೆ ಉದ್ಯಮ ಕೂಡ ಸಾಕಷ್ಟು ಅಡಚಣೆಗಳನ್ನು ಎದುರಿಸಬೇಕಿದೆ.



### ಭಾರಿ ನಷ್ಟದ ಆತಂಕದ ಸೃಷ್ಟಿ

**ಮಧ್ಯಪ್ರಾಚ್ಯದಲ್ಲಿ ಯುದ್ಧ ತಾರಕಕ್ಕೇರಿದ್ದು, ಇದರ ಎಫೆಕ್ಟ್ ಸದ್ಯ ಭಾರತದ ಬಹುತೇಕ ಎಲ್ಲಾ ಉದ್ಯಮಗಳ ಮೇಲೂ ಒಂದಲ್ಲ ಒಂದು ರೀತಿಯಾಗಿ ತಟ್ಟುತ್ತಿದೆ. ಈಗಾಗಲೇ ಇಂಧನ ವಲಯದಲ್ಲಿ ಸಾಕಷ್ಟು ವ್ಯತ್ಯಯಗಳು ಉಂಟಾಗಿ ತೊಂದರೆ ಎದುರಿಸುತ್ತಿದ್ದು, ಈ ಮಧ್ಯೆ ವಿಶ್ವವಿಖ್ಯಾತ ಚನ್ನಪಟ್ಟಣದ ಗೊಂಬೆ ಉದ್ಯಮ ತಟ್ಟಿದ್ದು, ಯುದ್ದದಿಂದಾಗಿ ವಿದೇಶಗಳಿಗೆ ರಫ್ತಾಗಬೇಕಿದ್ದ ಗೊಂಬೆಗಳು ಕಾರ್ಖಾನೆಗಳಲ್ಲೇ ಉಳಿಯುವಂತೆ ಆಗಿದೆ. ಇದರಿಂದ ಗೊಂಬೆ ಕಾರ್ಮಿಕರು ಹಾಗು ಉದ್ಯಮಿಗಳಲ್ಲಿ ಭಾರಿ ನಷ್ಟದ ಆತಂಕದ ಸೃಷ್ಟಿಯಾಗಿದೆ.**

**ಹಿಂದೆಲ್ಲಾ ಈ ಸಮಯಕ್ಕೆ ವಿದೇಶದಿಂದ ಬಂದ ಆರ್ಡರ್‌ಗಳು ರಫ್ತಾಗುವ ಜೊತೆಗೆ ಹೊಸ ಆರ್ಡರ್‌ಗಳು ಸಹ ಬರುತ್ತಿದ್ದವು,ಈ ಎರಡು ದೇಶಗಳ ಯುದ್ಧದ ಕಾರಣದಿಂದ ಆರ್ಡರ್‌ಗಳು ಬರುವುದಿರಲಿ ಬುಕ್ ಮಾಡಿರುವ ಆರ್ಡರ್‌ಗಳನ್ನು ಹೋಲ್ಡ್ ಮಾಡುವಂತೆ ಕರೆಗಳು ಬರುತ್ತಿರುವುದರಿಂದ ನಾವು ಮತ್ತು ಈ ಉದ್ಯಮವನ್ನೇ ನಂಬಿಕೊಂಡಿರುವ ಕಾರ್ಮಿಕರು ನಷ್ಟ ಅನುಭವಿಸುವಂತಾಗಿದೆ.**


**-ಸೋಹೇಲ್, ಗೊಂಬೆ ಉದ್ಯಮಿ**

## ಭಾಷೆಯ ಬಗ್ಗೆ ಕನ್ನಡಿಗರಿಗೆ ಅಭಿಮಾನ ಶೂನ್ಯತೆ

• ಉದಯವಾಹಿನಿ, ರಾಮನಗರ

‘ನಮ್ಮ ನೆಲ, ಜಲ, ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯದ ಬಗ್ಗೆ ಸ್ವತಃ ಕನ್ನಡಿಗರೇ ಅಭಿಮಾನ ಶೂನ್ಯರಾಗಿದ್ದಾರೆ. ನಮ್ಮ ನಾಡಿನ ಹಿರಿಮೆ ಬಗ್ಗೆ ನಮಗೆ ಅಭಿಮಾನ ಇರಬೇಕೇ ಹೊರತು ಬೇರೆಯವರಿಗಲ್ಲ’ ಎಂದು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜು ಹೇಳಿದರು. ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್ ಸಹಯೋಗದಲ್ಲಿ ತಾಲ್ಲೂಕಿನ ಕೆರೆಮೇಗಳದೊಡ್ಡಿಯಲ್ಲಿರುವ ಮುದ್ದುಶ್ರೀ ದಿಬ್ಬದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ‘ಕನ್ನಡ ಸಾಹಿತ್ಯ ಮತ್ತು ಬೇಸಾಯದ ಬದುಕು’ ಕುರಿತ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ‘ಕನ್ನಡಕ್ಕೆ ಬಂದಿರುವ ಎಂಟು ಜ್ಞಾನಪೀಠ ಪ್ರಶಸ್ತಿಗಳು ಹಾಗೂ ಬೂಕರ್ ಪ್ರಶಸ್ತಿ ಬಂದಿರುವುದು ಈ ನಾಡಿನ ಸಾಹಿತ್ಯದ ಹಿರಿಮೆಗೆ ಸಾಕ್ಷಿ. ಅದರ ಬಗ್ಗೆ ಎಲ್ಲರೂ ಅಭಿಮಾನಪಟ್ಟುಕೊಂಡು ನಮ್ಮ ಸಾಹಿತ್ಯದ ಕಂಪನ್ನು ಪಸರಿಸಬೇಕು. ಸಾಹಿತ್ಯವು ನಮ್ಮನ್ನು ಜಾತಿ, ಧರ್ಮ ಸೇರಿದಂತೆ ಮನುಷ್ಯ ವಿರೋಧಿ ಸಂಕೋಲೆಗಳಿಂದ ಬಿಡುಗಡೆಗೊಳಿಸುತ್ತದೆ’ ಎಂದು ಅಭಿಪ್ರಾಯಪಟ್ಟರು.

ಶಿಬಿರ ಉದ್ಘಾಟಿಸಿದ ರೈತ ಹೋರಾಟಗಾರ್ತಿ ಅನಸೂಯಮ್ಮ ಮಾತನಾಡಿ, ‘ರೈತರ ಬದುಕಿಗೆ ಸಾಹಿತ್ಯ ಆಹ್ಲಾದಕರವಾಗಿ ಬಂದಿರಬಹುದೇ ಹೊರತು ಅನುಕೂಲಕರವಾಗಿ ಅಲ್ಲ. ಕುವೆಂಪು ಅವರ ಕಾಲಘಟ್ಟದಲ್ಲಿ ಸಾಹಿತ್ಯದಲ್ಲಿ ಕೃಷಿಯು ಆದ್ಯತೆಯಾಗಿ ಕಂಡಿತು. ಮುಂದೆ ಅದರ ಜಾಡಿನಲ್ಲಿ ಮತ್ತಷ್ಟು ಕೃತಿಗಳು ಬಂದಿವೆ’ ಎಂದು ಹೇಳಿದರು.



ಉದಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣವು ದೇಶದ ಕೃಷಿ ಮತ್ತು ಕೃಷಿಕರ ಬದುಕಿನ ಚಿತ್ರಣವನ್ನೇ ಬದಲಿಸಿವೆ. ಅಭಿವೃದ್ಧಿ ಹೆಸರಿನಲ್ಲಿ ಫಲವತ್ತಾದ ಕೃಷಿ ಭೂಮಿಯನ್ನು ಪ್ರಭುತ್ವವೇ ಕಸಿದುಕೊಂಡು ರೈತರನ್ನು ಬೀದಿಗೆ ತಳ್ಳುತ್ತಿದೆ. ‘ಕುವೆಂಪು ಅವರು ರೈತನನ್ನು ನೇಗಿಲಯೋಗಿ ಎಂದು ಕರೆದು ರಚಿಸಿದ ಕವಿತೆ ರೈತಗೀತೆ ಎಂದೇ ಜನಪ್ರಿಯವಾಗಿದೆ. ರೈತ ಈ ದೇಶದ ಚೊಚ್ಚಿಲಮಗ ಎಂದು ದ.ರಾ. ಬೇಂದ್ರೆ ಕರೆದರು. ಕುವೆಂಪು ಪುತ್ರ ಪೂರ್ಣಚಂದ್ರ ತೇಜಸ್ವಿ ಅವರು ಬೇಸಾಯದಲ್ಲೇ ಬದುಕು ಕಟ್ಟಿಕೊಂಡು ಸಾಹಿತ್ಯ ರಚಿಸಿದರು. ಇದೆಲ್ಲವೂ ಸಾಹಿತ್ಯ ಮತ್ತು ಕೃಷಿ ನಡುವೆ ಪರಸ್ಪರ ಸಂಬಂಧ ಬೆಸೆದಿವೆ’ ಎಂದು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ. ಮಂಜುನಾಥಸ್ವಾಮಿ ಮಾತನಾಡಿ, ‘ಅನಾಗರಿಕನಾಗಿದ್ದ ಮನುಷ್ಯ ಬೇಸಾಯ ಕಂಡುಕೊಂಡ ಬಳಿಕ ನಾಗರಿಕನಾದ. ಹಿಂದಿನ, ಇಂದಿನ, ಭವಿಷ್ಯದ ಬೇಸಾಯದ ಬದುಕನ್ನು ಅರಿಯಲು ಈ ಕಾರ್ಯಾಗಾರ ಏಣಿಯಾಗಬೇಕು. ಶಿಬಿರಾರ್ಥಿಗಳಿಗೆ ಹೊಸ ಅನುಭವ ಸಿಗುವಂತಾಗಬೇಕು’ ಎಂದರು. ‘ಕನ್ನಡ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಕೃಷಿಯ ಸ್ವರೂಪ’ ವಿಷಯ ಕುರಿತು ಡಾ. ಚಂದ್ರಶೇಖರ ನಂಗಲಿ, ‘ಕನ್ನಡ ಜಾನಪದ ಸಾಹಿತ್ಯ ಮತ್ತು ಉ ಕೃಷಿ ಸಂಸ್ಕೃತಿ’ ಕುರಿತು ಡಾ. ಟಿ. ಗೋವಿಂದರಾಜು, ‘ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಕೃಷಿ ಸಂಸ್ಕೃತಿ’ ಕುರಿತು ಚನ್ನಪ್ಪ ಅಂಗಡಿ ಉಪನ್ಯಾಸ ನೀಡಿದರು.

ಕೃಷಿಯಲ್ಲಿ ಖುಷಿಪಡಬೇಕು. ದೇಶ ಕಟ್ಟುವ ಪ್ರಕ್ರಿಯೆಯ ಮುಖ್ಯ ಭಾಗವಾಗಿ ಕೃಷಿಯನ್ನು ನೋಡಬೇಕು. ಈ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಸವಾಲುಗಳನ್ನು ಬಗೆಹರಿಸಿ, ರೈತರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು ಎಂದು ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿದ್ದ ಸಾಹಿತಿ ಪ್ರೊ. ಶಿವರಾಮಯ್ಯ ಹೇಳಿದರು.

ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್. ಅತಿಥಿಗಳನ್ನು ಸ್ವಾಗತಿಸಿದರು. ಅಕಾಡೆಮಿ ಸದಸ್ಯ ರವಿಕುಮಾರ್ ಬಾಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ಡಾ. ಎಂ. ಬೈರೇಗೌಡ, ಬೆಂಗಳೂರು ದಕ್ಷಿಣ ಜಿಲ್ಲೆಯ ಸಹಾಯಕ ನಿರ್ದೇಶಕ ಕೆ. ಸತೀಶ್, ಲೇಖಕ ಡಾ. ನೂರ್ ಸಮದ್ ಅಬ್ಬಲಗೆರೆ ಹಾಗೂ ಇತರರು ಇದ್ದರು. ಸಂಜೆ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

## ಮಲೆ ಮಹದೇಶ್ವರ ಶತಕೋಟಿ ಒಡೆಯ : ಶಿವರಾತ್ರಿ ಜಾತ್ರೆಗೆ 28 ದಿನಗಳಲ್ಲೇ 3.41 ಕೋಟಿ ರೂ.ಸಂಗ್ರಹ


• ಉದಯವಾಹಿನಿ, ಚಾಮರಾಜ ನಗರ

ಲಕ್ಷಾಂತರ ಭಕ್ತರ ಆರಾಧ್ಯ ದೈವ ಮಲೆ ಮಹದೇಶ್ವರಬೆಟ್ಟ ದೇವಾಲಯದ ಆದಾಯ ವಾರ್ಷಿಕ 100 ಕೋಟಿ ರೂ. ದಾಟುವ ಮೂಲಕ ದಾಖಲೆ ಬರೆದಿದೆ. ಅಂದಾಜು 700 ವರ್ಷಗಳ ಇತಿಹಾಸ ಇರುವ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರಸ್ವಾಮಿ ಬೆಟ್ಟವು ಪ್ರತ್ಯೇಕ ಅಭಿವೃದ್ಧಿ ಪ್ರಾಧಿಕಾರ ರಚನೆಯಾದ ಬಳಿಕ ಅಭಿವೃದ್ಧಿಯತ್ತ ಮುಖ ಮಾಡಿದೆ.

ರಾಜ್ಯದ ಮುಜರಾಯಿ ದೇವಾಲಯಗಳ ಪೈಕಿ ಅತಿಹೆಚ್ಚು ಆದಾಯ ಬರುವ ದೇವಾಲಯಗಳ ಪೈಕಿ ಮಲೆ ಮಹದೇಶ್ವರ ದೇವಾಲಯ ಎರಡನೆಯದು. ಮೊದಲ ಸ್ಥಾನದಲ್ಲಿಕುಕ್ಕೆ ಸುಬ್ರಹ್ಮಣ್ಯ ದೇವಳ ಇದೆ.

**ಜಾತ್ರೆಗಳ ವೇಳೆ ಮುಪ್ಪಟ್ಟು ಕಾಣಿಕೆ:** ಮಲೆ ಮಹದೇಶ್ವರಬೆಟ್ಟದಲ್ಲಿ ಶಿವರಾತ್ರಿ, ಯುಗಾದಿ, ದೀಪಾವಳಿ ಸಂದರ್ಭಗಳಲ್ಲಿ ಮಹಾ ರಥೋತ್ಸವ ನಡೆಯುತ್ತದೆ. ಈ ಸಂದರ್ಭಗಳಲ್ಲಿ ಒಂದು ವಾರ ಮಾದಪ್ಪನ ದರ್ಶನಕ್ಕೆ ಲಕ್ಷಾಂತರ ಭಕ್ತಾದಿಗಳು ಆಗಮಿಸುತ್ತಾರೆ. ಹೀಗಾಗಿ ಈ ಸಂದರ್ಭದಲ್ಲಿ ಹುಂಡಿಯಲ್ಲಿ ಸಂಗ್ರಹವಾಗುವ ಹಣವೂ ಅಧಿಕ. ಕಳೆದ ತಿಂಗಳು ಶಿವರಾತ್ರಿ ಜಾತ್ರೆ ಹಿನ್ನೆಲೆಯಲ್ಲಿ ಮಾದಪ್ಪನ ಹುಂಡಿಗೆ 28 ದಿನಗಳಲ್ಲೇ 3.41 ಕೋಟಿ ರೂ.ಸಂಗ್ರಹವಾಗಿತ್ತು.

**ಸೇವೆಗಳಿಂದ ಬರುವ ಆದಾಯ:** ಮಲೆ ಮಹದೇಶ್ವರ ದೇಗುಲಕ್ಕೆ ಸೇವಾ ಶುಲ್ಕದಿಂದ 10 ಕೋಟಿ ರೂ. ಆದಾಯ ಬರುತ್ತದೆ. ಲಾಡು ಪ್ರಸಾದ ಮಾರಾಟದಿಂದ ಪ್ರತಿ ವರ್ಷ 18 ಕೋಟಿ ರೂ. ಆದಾಯ ಇದ್ದು, ಈ ಪೈಕಿ 12 ಕೋಟಿ ರೂ. ಲಾಡು ತಯಾರಿಕೆಗೆ ಖರ್ಚಾದರೆ, 6 ಕೋಟಿ ರೂ. ಲಾಭಾಂಶವಾಗಿ ಉಳಿಯುತ್ತದೆ.



**ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಹುಂಡಿ, ಪೂಜೆ, ಸೇವೆಗಳಿಂದ ಆದಾಯ ಬರುತ್ತಿದೆ. ದೇವಾಲಯಕ್ಕೆ ಬೇಕಾದ ಖರ್ಚು ಕಳೆದು, ಈ ಆದಾಯವನ್ನೆಲ್ಲ ಭಕ್ತಾದಿಗಳ ಅನುಕೂಲಕ್ಕೆ, ನಾನಾ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತಿದೆ.**

**-ಎಇ ರಘು, ಕಾರ್ಯದರ್ಶಿ, ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ**

ಮಹದೇಶ್ವರ ಬೆಟ್ಟದಲ್ಲಿ ನಿರ್ಮಿಸಿರುವ ಅಂಗಡಿ ಮಳಿಗೆ, ಪೆಟ್ರೋಲ್ ಬಂಕ್, ವಸತಿ ಗೃಹಗಳಿಂದ ವರ್ಷಕ್ಕೆ 10ರಿಂದ 15 ಕೋಟಿ ರೂ. ವಾಣಿಜ್ಯಾತ್ಮಕ ಆದಾಯ ಇದೆ.

## ಮಿನಿ ನ್ಯೂಸ್

### ಗ್ಯಾಸ್ ಸಮಸ್ಯೆ : ಕಾಂಗ್ರೆಸ್ ಪ್ರತಿಭಟನೆ

• ಉದಯವಾಹಿನಿ, ತುಮಕೂರು

ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಬೆಲೆ ಏರಿಕೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ನಗರದ ಟೌನ್‌ಹಾಲ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಅಡುಗೆ ಅನಿಲ ಪೂರೈಕೆ ಸ್ಥಗಿತಗೊಳ್ಳಲು ಕೇಂದ್ರ ಸರ್ಕಾರವೇ ನೇರ ಹೊಣೆ ಎಂದು ಆರೋಪಿಸಿದರು. ಕೇಂದ್ರದ ವಿರುದ್ಧ ಘೋಷಣೆ ಕೂಗಿದರು. ಪ್ರಧಾನಿ ನರೇಂದ್ರ ಮೋದಿ ರಾಜೀನಾಮೆಗೆ ಆಗ್ರಹಿಸಿದರು. ಇನ್ನಷ್ಟು ದಿನಗಳ ಕಾಲ ಯುದ್ಧ ಮುಂದುವರಿದರೆ ಪೆಟ್ರೋಲ್, ಡೀಸೆಲ್ ಬೆಲೆಯೂ ಏರಿಕೆಯಾಗಲಿದೆ. ಇಂಧನ ಬೆಲೆ ಹೆಚ್ಚಳವಾದರೆ ಸರಕು ಸಾಗಣೆ ವೆಚ್ಚ ಅಧಿಕವಾಗಿ ಎಲ್ಲಾ ಪದಾರ್ಥಗಳು ದುಬಾರಿಯಾಗಲಿವೆ. ಇದು ಜನಸಾಮಾನ್ಯರಿಗೆ ಹೊರೆಯಾಗಲಿದೆ ಎಂದು ಟೀಕಿಸಿದರು. ಯುದ್ಧ ಆರಂಭವಾದರೆ ಪೆಟ್ರೋಲಿಯಂ ಉತ್ಪಗಳ ಕೊರತೆ ಉಂಟಾಗಲಿದೆ ಎಂಬುದು ಗೊತ್ತಿದ್ದರೂ ಪ್ರಧಾನಿ ನರೇಂದ್ರ ಮೋದಿ ಯಾವುದೇ ಮುನ್ನೆಚ್ಚರಿಕೆ ವಹಿಸಲಿಲ್ಲ. ಆಡಳಿತ ವೈಫಲ್ಯದಿಂದ ಸಾರ್ವಜನಿಕರು ಸಮಸ್ಯೆ ಎದುರಿಸಬೇಕಾಗಿದೆ ಆಡಳಿತ ನಡೆಸಲು ವಿಫಲರಾಗಿರುವ ಮೋದಿ ತಮ್ಮ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

### ಪೆಟ್ರೋಲ್ ಅಭಾವದ ಸುದ್ದಿ: ತೈಲಕ್ಕಾಗಿ ಮುಗಿಬಿದ್ದ ಸವಾರರು

• ಉದಯವಾಹಿನಿ, ಕೆಜಿಎಫ್

ನಗರದ ಪೆಟ್ರೋಲ್ ಬಂಕ್‌ವೊಂದರಲ್ಲಿ ದಿಢೀರನೆ ಪೆಟ್ರೋಲ್ ಖಾಲಿಯಾದ ಹಿನ್ನೆಲೆ, ನಗರದ ವಿವಿಧ ಬಂಕ್‌ಗೆ ಗ್ರಾಹಕರು ಮುಗಿಬಿದಿದ್ದಾರೆ. ರಾಬರ್ಟಸನ್‌ಪೇಟೆಯ ಮೊಯ್ದು ಪೆಟ್ರೋಲ್ ಬಂಕ್‌ನಲ್ಲಿ ಬೆಳಗ್ಗೆ 10.30ಕ್ಕೆ ಪೆಟ್ರೋಲ್ ಖಾಲಿ ಎಂದು ಬಂಕ್ ಸಿಬ್ಬಂದಿ ಬೋರ್ಡ್ ಪ್ರದರ್ಶಿಸಿದ್ದರು.

ಇದರಿಂದಾಗಿ ಗಾಬರಿಯಾದ ಜನತೆ ನಗರದ ಬೇರೆ ಬೇರೆ ಪೆಟ್ರೋಲ್ ಬಂಕ್‌ಗೆ ಮುಗಿಬಿದ್ದು, ತೈಲ ಖರೀದಿಸಿದ್ದಾರೆ. ಜ್ವಾಲಾ ಪೆಟ್ರೋಲ್ ಬಂಕ್ ಮಾಲೀಕ ಮೊಹಮ್ಮದ್ ಬುಕಾರಿ ಮೊಯ್ದು ಮಾತನಾಡಿ, ಯುದ್ಧದ ಸಂಬಂಧ ಅನಗತ್ಯ ಗೊಂದಲ ಉಂಟಾಗುತ್ತಿದೆ. ಕೆಲವರು ಉದ್ದೇಶಪೂರ್ವಕವಾಗಿ ಸುಳ್ಳು ಸುದ್ದಿ ಹರಡುತ್ತಿದ್ದಾರೆ. ಇದರಿಂದಾಗಿ ಕೃತಕ ದಟ್ಟಣೆ ಉಂಟಾಗಿದೆ. ಮೂರು ದಿನಗಳಲ್ಲಿ ಮಾರಾಟ ಮಾಡುವ ಪೆಟ್ರೋಲ್ ಒಂದೇ ದಿನದಲ್ಲಿ ಖಾಲಿಯಾಗಿದೆ.

ಆದ್ದರಿಂದ ಪೆಟ್ರೋಲ್ ಖಾಲಿಯಾಯಿತು. ಕೆಲವೇ ಗಂಟೆಗಳಲ್ಲಿ ಪುನಃ ಟ್ಯಾಂಕರ್ ಬಂದಿದ್ದು, ಮಾರಾಟ ಎಂದಿನಂತೆ ಮುಂದುವರೆದಿದೆ. ಪೆಟ್ರೋಲ್ ಸಿಗಲ್ಲ ಎಂದು ನಂಬಿ ಬಾಟಲ್, ಡಬ್ಬ, ಕ್ಯಾನ್‌ಗಳಲ್ಲಿ ಪೆಟ್ರೋಲ್ ತೆಗೆದುಕೊಂಡು ಹೋಗಿ ಮನೆಗಳಲ್ಲಿ ದಾಸ್ತಾನು ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ತಾಲ್ಲೂಕಿನಲ್ಲಿ ಎಲ್ಲಿಯೂ ಪೆಟ್ರೋಲ್, ಡೀಸಲ್ ಕೊರತೆ ಉಂಟಾಗಿಲ್ಲ. ಕೆಲವರು ಕೃತಕ ಅಭಾವ ಸೃಷ್ಟಿಸಿದ್ದಾರೆ. ಅಕ್ರಮವಾಗಿ ತೈಲವನ್ನು ಸಂಗ್ರಹ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಹಶೀಲ್ದಾರ್ ಎಚ್.ಜೆ.ಭರತ್ ತಿಳಿಸಿದ್ದಾರೆ.

### ಮಂಡ್ಯ ನ್ಯಾಯಾಲಯಕ್ಕೆ ಮತ್ತೆ ಹುಸಿ ಬಾಂಬ್ ಬೆದರಿಕೆ



• ಉದಯವಾಹಿನಿ, ಮಂಡ್ಯ

ಜಿಲ್ಲಾ ನ್ಯಾಯಾಲಯದಲ್ಲಿ ಬಾಂಬ್ ಇಟ್ಟಿದ್ದೇವೆ ಎಂದು ಇ-ಮೇಲ್ ಮೂಲಕ ಬೆದರಿಕೆ ಸಂದೇಶ ಬಂದ ಕಾರಣ ನಗರದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು. ನ್ಯಾಯಾಲಯದ ಕಲಾಪಗಳು ಆರಂಭವಾದ ಸ್ವಲ್ಪ ಹೊತ್ತಿನಲ್ಲೇ ಇ-ಮೇಲ್ ಮೂಲಕ ಬಂದ ಬೆದರಿಕೆಯ ಮಾಹಿತಿ ಎಲ್ಲೆಡೆ ಹಬ್ಬಿತು. ವಕೀಲರು, ಕಕ್ಷಿದಾರರು ಆತಂಕಗೊಂಡರು. ಫೆಬ್ರುವರಿ 16ರಂದು ಕೂಡ ಇದೇ ರೀತಿ ‘ಹುಸಿ ಬಾಂಬ್ ಬೆದರಿಕೆ’ ಬಂದಿದ್ದರಿಂದ. ಈ ಬಾರಿ ಕಲಾಪಗಳನ್ನು ಮುಂದುವರಿಸಲಾಯಿತು. ಪೊಲೀಸರು, ಅಗ್ನಿಶಾಮಕ ದಳ, ಬಾಂಬ್ ನಿಷ್ಕ್ರಿಯ ದಳ ಮತ್ತು ಶ್ವಾನದಳದ ಸಿಬ್ಬಂದಿ ಎಲ್ಲೆಡೆ ಪರಿಶೀಲಿಸಿದರು. ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಲಿಲ್ಲ. ‘ನ್ಯಾಯಾಲಯ ಸಂಕೀರ್ಣದಲ್ಲಿ ಒಟ್ಟು 16 ನ್ಯಾಯಾಲಯಗಳಿದ್ದು, ಸಾವಿರಾರು ಮಂದಿ ಬರುತ್ತಾರೆ. ಕ್ರಿಮಿನಲ್ ಹಿನ್ನೆಲೆಯ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ. ಹೀಗಾಗಿ ‘ಮೆಟಲ್ ಡಿಟೆಕ್ಟರ್’ ಅಳವಡಿಸಬೇಕು. ಪೊಲೀಸ್ ಹೊರಠಾಣೆ ತೆರೆಯಬೇಕು’ ಎಂದು ಮಂಡ್ಯ ವಕೀಲರ ಸಂಘದ ಅಧ್ಯಕ್ಷ ಟಿ.ಎಸ್.ಸತ್ಯಾನಂದ ಒತ್ತಾಯಿಸಿದ್ದಾರೆ.

## ಪ್ರಾಯೋಗಿಕ ಉಪನ್ಯಾಸ ಕಾರ್ಯಕ್ರಮ



• ಉದಯವಾಹಿನಿ, ಕೆ ಆರ್ ಪೇಟೆ

ಕರ್ನಾಟಕ ಸರ್ಕಾರ ಕಾಲೇಜು ಶಿಕ್ಷಣ ಇಲಾಖೆ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೆ ಆರ್ ಪೇಟೆ ಇಲ್ಲಿ ಭೂಗೋಳಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಘಟಕದ ಸಹಯೋಗದೊಂದಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ವೆಬ್ ಜಿಐಎಸ್‌ಅಂಡ್ ಡಿಜಿಟಲ್ ಮ್ಯಾಪಿಂಗ್ ವಿಷಯದ ಮೇಲೆ ಪ್ರಾಯೋಗಿಕ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಅನುರಾಧ ಅವರು ವಹಿಸಿಕೊಂಡಿದ್ದರು, ಸಂಪನ್ಮೂಲ ವ್ಯಕ್ತಿಯಾಗಿ ಡಾ. ಹನುಮಂತರಾಜು ಆರ್, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ, ದಿ ರೂರಲ್ ಕಾಲೇಜ್ ಕನಕಪುರ, ಡಾ. ದೀಪು ಬಿಪಿ ಮುಖ್ಯಸ್ಥರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಾಂಡವಪುರ ಇವರು ಆಗಮಿಸಿದ್ದರು. ಇವರು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು, ಅದರ ತಂತ್ರಾಂಶಗಳನ್ನು ಉಪಯೋಗಿಸಿಕೊಂಡು ನಕ್ಷೆಗಳ ತಯಾರಿಕೆ, ವಿವಿಧ ಇಲಾಖೆಗಳಲ್ಲಿ ಅವುಗಳ ಬಳಕೆಯನ್ನು ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಸುದೀರ್ಘಕಾಲ ನಡೆಸಿಕೊಟ್ಟಿದ್ದಾರೆ. ಕಾರ್ಯಕ್ರಮವನ್ನು ಭೂಗೋಳಶಾಸ್ತ್ರ ವಿಭಾಗದ ವಿದ್ಯಾರ್ಥಿಗಳು ಯಶಸ್ವಿಯಾಗಿ ನಡೆಸಿಕೊಟ್ಟಿದ್ದು ವಿಭಾಗದ ಮುಖ್ಯಸ್ಥರಾದ ನಫೀಸಾ ನಾಯಕವಾಡಿ, ಚಂದ್ರು ಕೆ ಟಿ, ಘಮನಶ್ರೀ ಎಪಿ, ಕಾರ್ಯಕ್ರಮದಲ್ಲಿ ಹಾಜರಿದ್ದರು

## ತೆರಕಣಾಂಬಿ ಭಾಗದ ರೈತರ ಅಹವಾಲು ಸ್ವೀಕರಿಸಿದ ಡಿಸಿ ಶ್ರೀರೂಪ

• ಉದಯವಾಹಿನಿ, ಗುಂಡ್ಲುಪೇಟೆ

ಕೆರೆಗಳಿಗೆ ನೀರು ತುಂಬಿಸುವಂತೆ ಒತ್ತಾಯಿಸಿ ರೈತರು ನೀಡಿದ್ದ ಮನವಿಗೆ ಸ್ಪಂದಿಸಿದ ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀ ರೂಪ ಶುಕ್ರವಾರ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಟ್ಟಿಗೆ ತಮ್ಮಡಹಳ್ಳಿ, ಶ್ಯಾನಾಡ್ರಳ್ಳಿ ಕೆರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ತೆರಕಣಾಂಬಿಯ ಕಿಲಗೆರೆ ಗೇಟ್ ಬಳಿ ಆಗಮಿಸಿದ ಕೂಡಲೇ ಸುತ್ತಲಿನ ಗ್ರಾಮಸ್ಥರು ಸ್ವಾಗತಿಸಿದರು. ಜಲಕ್ಷಾಮದ ಕುರಿತು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದ ಕಿಲಗರೆ ಗ್ರಾಮದ ರೈತ ಶ್ರೀಕಂಠಪ್ಪ ಆಲಂಬೂರು ಏತ ನೀರಾವರಿ ಯೋಜನೆ ಆರಂಭವಾದಾಗಿನಿಂದ ಇಲ್ಲಿಯತನಕ ನಾಲ್ಕನೇ ಹಂತದ ಕೆರೆಗಳಿಗೆ ನೀರು ಹರಿಸಲು ಆಸಕ್ತಿ ತೋರುತ್ತಿಲ್ಲ, ದಿನಕ್ಕೊಂದು ಸಿದ್ಧತಾ ಸಬೂಬು ನೀಡುವ ಜೊತೆಗೆ ರೈತರ ಕಣ್ಣೀರಿಗೆ ಮೂಲ ಕಾರಣರಾಗಿದ್ದಾರೆ ಎಂದು ಬೇಸರ ಹೊರಹಾಕಿದರು. ಕೆರೆಗಳಿಗೆ ನೀರು ತುಂಬಿಸುವಂತೆ ವಿನಂತಿಸಿ ಶಾಸಕರಿಗೆ ಪ್ರತಿ ವರ್ಷವೂ ಮನವಿ ಮಾಡುತ್ತಲಿದ್ದರೂ ಯಾವುದೇ ಪ್ರಯೋಜನವಾಗಿಲ್ಲ, ಶಾಸಕರ ಮಲತಾಯಿ ಧೋರಣೆ ನೀತಿಯಿಂದ ಅನ್ನದಾತ ತಲೆ ಮೇಲೆ ಕೈ ಹೊತ್ತು ಕೂರುವಂತಾಗಿದೆ. ನೀರು ಕೇಳಿದಾಗಲೆಲ್ಲಾ ಪ್ರತಿಭಟನೆ ನಡೆಸುವಂತೆ ಸೂಚಿಸುತ್ತಿರುವುದು ಬೇಸರದ ಸಂಗತಿ ಆಗಿದೆ, ಜೀವಜಲಕ್ಕಾಗಿ ಅನ್ನದಾತ ಧರಣಿ ಹಾದಿ ಹಿಡಿಯಬೇಕಾಗಿದೆ ಎಂದು ಜಿಲ್ಲಾಧಿಕಾರಿಗಳ ಎದುರೇ ಆಕ್ರೋಶ ಹೊರಹಾಕಿದರು.



### ಕೆರೆಗಳಿಗೆ ನೀರು ತುಂಬಿಸಲು ಕ್ರಮದ ಭರವಸೆ

**ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯಕ್ಕೆ ಹಳ್ಳಹಿಡಿದ ಯೋಜನೆ:** ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ರೈತರ ಕೃಷಿ ಬಾಳಿಗೆ ಬೆಳಕು ಚೆಲ್ಲಬೇಕಿದ್ದ ಯೋಜನೆ ಸಂಪೂರ್ಣವಾಗಿ ಹಳ್ಳಹಿಡಿದಿದೆ, ಯೋಜನೆಯ ಆಶೋತ್ತರ ಈಡೇರದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ, ಒಮ್ಮೆ ಚಾಲುವಾದ ನೀರೆತ್ತುವ ಯಂತ್ರಗಳು ರಾತ್ರಿ ಆಗುತ್ತಿದ್ದಂತೆ ಸದ್ದು ನಿಲ್ಲಿಸುತ್ತಿವೆ ಅಧಿಕಾರಿಗಳ ಇಂತಹ ಕಣ್ಣಾಮುಚ್ಚಾಲೆ ಆಟದಿಂದ ಯಾವ ಕೆರೆಗಳು ಭರ್ತಿ ಆಗುತ್ತಿಲ್ಲ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಜಿಲ್ಲಾಡಳಿತಕ್ಕೆ, ರೈತರಿಗೆ ತಪ್ಪು ಮಾಹಿತಿ ನೀಡುವ ಮೂಲಕ ದಿಕ್ಕುತಪ್ಪಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ, ಮುಂಬರುವ ದಿನಗಳಲ್ಲಾದರು ಮೂರು ಮತ್ತು ನಾಲ್ಕನೇ ಹಂತದ ಕೆರೆಗಳಿಗೆ ನೀರು ತುಂಬಿಸಲು ದೃಢ ಸಂಕಲ್ಪ ಮಾಡಬೇಕು ಇಲ್ಲವಾದಲ್ಲಿ ಚಳುವಳಿಗೆ ಮುಂದಾಗಬೇಕಾಗುತ್ತದೆ ಎಂದು ರೈತ ಸಂಘ ಚಾಮರಾಜನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಂದಕೆರೆ ಸಂಪತ್ತು ಎಚ್ಚರಿಕೆ ನೀಡಿದರು.

ರೈತರ ಅಹವಾಲು ಸ್ವೀಕರಿಸಿ ರೈತರ ಬೇಡಿಕೆ ಈಡೇರಿಸುವ ಭರವಸೆ ನೀಡಿದ ಜಿಲಾಧಿಕಾರಿ ಶ್ರೀ ರೂಪ ಕಿಲಗೆರೆ ಹಾಗೂ ಮೇಲೂರು ಕೆರೆಗಳ ವೀಕ್ಷಣೆಗೆ ತೆರಳಿದರು. ಈ ವೇಳೆ ತೆರಕಣಾಂಬಿ ಕಂದಾಯದಾಧಿಕಾರಿ ನಾಗೇಂದ್ರಪ್ಪ, ರೈತ ಮುಖಂಡರಾದ ಬೆಳ್ಳಪ್ಪ, ಸಿದ್ಧಮಲ್ಲಪ್ಪ, ಗುರುಸಿದ್ದಪ್ಪ, ನಾಗಭೂಷಣ ಹಲವರು ಇದ್ದರು.

# ಬಾಣಂತಿ, ಮಗುವನ್ನು ಊರಿಂದ ಹೊರಗಿಡುವ ಮೌಢ್ಯಾಚರಣೆ

## ಮಹಿಳಾ ಆಯೋಗ ಚಾಟಿ ; ಜಿಲ್ಲಾಧಿಕಾರಿ ಗೈರು: ಹೆಚ್ಚುವರಿ ಜಿಲ್ಲಾಧಿಕಾರಿಗೆ ತರಾಟೆ

• ಉದಯವಾಹಿನಿ, ತುಮಕೂರು

ಜಿಲ್ಲೆಯಲ್ಲಿ ಬಾಣಂತಿ, ಮಗುವನ್ನು ಊರಿಂದ ಹೊರಗಿಡುವ ಮೌಢ್ಯಾಚರಣೆ ಇನ್ನೂ ಜೀವಂತವಾಗಿದೆ. ಯಾಕೆ ಅನಿಷ್ಟ ಪದ್ಧತಿ ತಡೆಯಲು ಆಗಿಲ್ಲ. ವೈಫಲ್ಯ ಆಗಿದ್ದು ಎಲ್ಲಿ, ಜಿಲ್ಲಾ ಆಡಳಿತವೇ ಕೈಕಟ್ಟಿ ಕೂತರೆ ಹೇಗೆ? ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅಧಿಕಾರಿಗಳಿಗೆ ಚಾಟಿ ಬೀಸಿದರು. ನಗರದಲ್ಲಿ ರಾಜ್ಯ ಮಹಿಳಾ ಆಯೋಗ, ಜಿಲ್ಲಾ ಆಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ‘ಮಹಿಳಾ ಆಯೋಗ ನಿಮ್ಮ ಮನೆ ಬಾಗಿಲಿಗೆ’ ಕಾರ್ಯಕ್ರಮದಡಿ ಹಮ್ಮಿಕೊಂಡಿದ್ದ ಮಹಿಳೆಯರಿಂದ ಅಹವಾಲು ಸ್ವೀಕಾರ ಸಭೆಯಲ್ಲಿ ಮಾತನಾಡಿದರು. ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ.ಅಶ್ವಿಜ ಸೇರಿದಂತೆ ಪ್ರಮುಖ ಅಧಿಕಾರಿಗಳು ಸಭೆಗೆ ಗೈರಾಗಿದ್ದರು. ‘ಅಧಿಕಾರಿಗಳೇ ಇಲ್ಲದಿದ್ದರೆ ಸಭೆ ನಡೆಸುವುದು ಹೇಗೆ’ ಎಂದು ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದರು. ಎರಡು ವರ್ಷಗಳಿಂದ ವರದಿ ಸಲ್ಲಿಸುವಂತೆ ಸೂಚಿಸಿದರೂ ಜಿಲ್ಲಾ ಆಡಳಿತದಿಂದ ಸರಿಯಾದ ಸ್ಪಂದನೆ ಸಿಕ್ಕಿಲ್ಲ ಎಂದು ಹೊರ ಹಾಕಿದರು. ತಾಯಂದಿರು, ಮಕ್ಕಳನ್ನು ಉಳಿಸುವುದು ಹೇಗೆ? ಪುಟ್ಟ ಮಗುವನ್ನು ಕರಡಿ ಹೊತ್ತುಕೊಂಡು ಹೋಗಿದ್ದನ್ನು ಯಾರೂ ಮರೆಯಬೇಡಿ. ಜಿಲ್ಲಾಧಿಕಾರಿ, ಹೆಚ್ಚುವರಿ ಜಿಲ್ಲಾಧಿಕಾರಿ ಹಟ್ಟಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಮೌಢ್ಯ ಆಚರಿಸಿದರೆ ಕಾನೂನಿನ ಕ್ರಮ ಆಗುತ್ತದೆ ಎಂಬ ಭಯ ಹುಟ್ಟಿಸಬೇಕು. ಇಲ್ಲದಿದ್ದರೆ ಸಮಾಜದಲ್ಲಿ ಬದಲಾವಣೆ ತರುವುದು ಹೇಗೆ? ಎಂದು ಪ್ರಶ್ನಿಸಿದರು.

’ಚಿಕ್ಕನಾಯಕನಹಳ್ಳಿ ಹೊರವಲಯದ ಕೆರೆ ದಂಡೆಯಲ್ಲಿ ಹಲವು ವರ್ಷಗಳಿಂದ ಕೆಲ ಕುಟುಂಬಗಳು ವಾಸಿಸುತ್ತಿವೆ. ಅವರಿಗೆ ಶಾಶ್ವತ ನೆಲೆ ಕಲ್ಪಿಸಲು ಆಗಿಲ್ಲ. ಕೋಡಿ ಹರಿದಾಗ ಅವರನ್ನು ಸ್ಥಳಾಂತರ ಮಾಡಿ, ಮಳೆಗಾಲ ಮುಗಿದ ಮೇಲೆ ಮತ್ತೆ ಅಲ್ಲಿಗೆ ಕರೆದುಕೊಂಡು ಹೋಗಿ ಬಿಡುತ್ತಾರೆ. ನಾನೇ ಖುದ್ದಾಗಿ 10 ಸಲ ಅಧಿಕಾರಿಗಳ ಜತೆ ಮಾತನಾಡಿದ್ದೇನೆ. ಜಿಲ್ಲಾಧಿಕಾರಿ ಏನು ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ’ ಎಂದು ತರಾಟೆಗೆ ತೆಗೆದುಕೊಂಡರು. ಗುಡಿಸಲುಗಳಲ್ಲಿ ಹಾವುಗಳು ನೇತಾಡುತ್ತಿರುತ್ತವೆ. ಚೇಳು, ಹುಳು ಮಕ್ಕಳಿಗೆ ಕಚ್ಚುತ್ತಿವೆ. ಎರಡು ವರ್ಷದಿಂದ ಯಾವುದೇ ಬದಲಾವಣೆ ಆಗಿಲ್ಲ. ಇಂತಹ ಜಾಗದಲ್ಲಿ ನೀವು ವಾಸ ಮಾಡುತ್ತೀರಾ? ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಎನ್.ತಿಪ್ಪೇಸ್ವಾಮಿ ಅವರನ್ನು ಪ್ರಶ್ನಿಸಿದರು. ಯಾವುದಕ್ಕೂ ಉತ್ತರಿಸಿದೆ ಮೌನವಾಗಿ ಕೂತಿದ್ದರು. ಪ್ರತಿ ಗ್ರಾಮದಲ್ಲಿ ಕಡ್ಡಾಯವಾಗಿ ಮಹಿಳಾ ಗ್ರಾಮ ಸಭೆ ನಡೆಸಬೇಕು. ಸಭೆ ಮಾಡಿದರೆ ಅಲ್ಲಿಯೇ ಹಲವಾರು ಸಮಸ್ಯೆ ಬಗೆಹರಿಯುತ್ತವೆ. ಜಿಲ್ಲಾ ಹಂತದ ವರೆಗೆ ಬರುವುದಿಲ್ಲ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚಿಸಿದರು.



### ಸಖಿ ಕೇಂದ್ರ ಮುಚ್ಚದಂತೆ ಪತ್ರ

**ಸಾಂತ್ವನ ಕೇಂದ್ರ, ಸಖಿ ಕೇಂದ್ರಗಳಿಂದ ಮಹಿಳೆಯರಿಗೆ ತಾಯಂದಿರಿಗೆ ಸಹಾಯವಾಗುತ್ತಿದೆ. ಈ ಕೇಂದ್ರಗಳನ್ನು ಮುಚ್ಚದಂತೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಹೇಳಿದರು. ಸಭೆಯ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸಭೆಯಲ್ಲಿ ಹನುಮಂತಪುರದ ನಾಗಮಣಿ ಎಂಬುವರ 3 ತಿಂಗಳ ಮಗುವಿಗೆ ಚಿರಾಗ್ ಎಂದು ಆಯೋಗದ ಅಧ್ಯಕ್ಷರು ನಾಮಕರಣ ಮಾಡಿದರು.**


### ಪೊಲೀಸ್ ಇಲಾಖೆ ವಿಫಲ

**ಗಂಡನ ಮನೆಯ ಕಿರುಕುಳದಿಂದ ಮಗಳು ಇಬ್ಬರು ಮೊಮ್ಮಕ್ಕಳು ಕಳೆದ ಸೆಪ್ಟೆಂಬರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಈವರೆಗೆ ಮರಣೋತ್ತರ ಪರೀಕ್ಷೆಯ ವರದಿ ನಮಗೆ ಸಿಕ್ಕಿಲ್ಲ. ಪೊಲೀಸರು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಪಾವಗಡದ ಕಾಂತಮ್ಮ ತಮ್ಮ ಸಮಸ್ಯೆ ಹೇಳಿಕೊಂಡರು. ಘಟನೆ ನಡೆದು 6 ತಿಂಗಳು ಕಳೆದರೂ ನೊಂದ ಕುಟುಂಬಕ್ಕೆ ಮರಣೋತ್ತರ ಪರೀಕ್ಷೆಯ ವರದಿ ಕೊಟ್ಟಿಲ್ಲ ಯಾಕೆ ಪೊಲೀಸ್ ಇಲಾಖೆ ವಿಫಲವಾಗುತ್ತಿದೆ. ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯುತ್ತೇನೆ’ ಎಂದು ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಎಚ್ಚರಿಸಿದರು. ಅಗತ್ಯ ಇರುವ ಮಹಿಳೆಯರಿಗೆ ಪೊಲೀಸರು ರಕ್ಷಣೆ ಕಲ್ಪಿಸಬೇಕು. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ತೋರಬಾರದು. ಪ್ರಕರಣ ಮುಂದುವರಿಸುವ ಕುರಿತು ಮಾರ್ಗದರ್ಶನ ನೀಡಬೇಕು. ಪ್ರಕರಣ ದಾಖಲಾದ ನಂತರವೂ ಆರೋಪಿಗಳು ಸಂತ್ರಸ್ತರಿಗೆ ಕಿರುಕುಳ ಕೊಟ್ಟರೆ ಪೊಲೀಸರು ಕ್ರಮಕೈಗೊಳ್ಳಬೇಕು ಎಂದು ನಿರ್ದೇಶಿಸಿದರು.**

## ಕರ್ನಾಟಕದ ಮೊದಲ ಜಿಟಿಸಿ ಕೇಂದ್ರ ಮೈಸೂರಲ್ಲಿ ಶೀಘ್ರ ಆರಂಭ

• ಉದಯವಾಹಿನಿ, ಮೈಸೂರು

ಕಂಪೆನಿಗಳನ್ನು 2ನೇ ಹಂತದ ನಗರಗಳತ್ತ ಸೆಳೆಯುವ ರಾಜ್ಯದ ಮೊದಲ ಗ್ಲೋಬಲ್ ಟೆಕ್ನಾಲಜಿ ಸೆಂಟರ್ (ಜಿಟಿಸಿ) ಅನ್ನು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ಹಿಂಭಾಗದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಆರಂಭಿಸಲಾಗುತ್ತಿದೆ. ಏಪ್ರಿಲ್‌ನಿಂದ ಚಟುವಟಿಕೆ ಆರಂಭವಾಗಲಿದೆ. ಇದರಿಂದ ಜಿಲ್ಲೆಯಲ್ಲಿ 10 ಸಾವಿರ ಉದ್ಯೋಗ ಸೃಷ್ಟಿಯಾಗಲಿವೆ. ಈ ಕಟ್ಟಡದಲ್ಲಿ ಸಣ್ಣ ಕಂಪೆನಿಯಂದ ದೊಡ್ಡ ಕಂಪೆನಿಗಳನ್ನು ಆರಂಭಿಸಲು ಬೇಕಾದ ಎಲ್ಲಾ ರೀತಿಯ ಸೌಲಭ್ಯ ಒದಗಿಸಲಾಗುತ್ತದೆ. 120 ಆಸಗಳುಳ್ಳ ಆಫೀಸ್ ಸ್ಪೇಸ್‌ಗಳನ್ನು ಸ್ಟಾರ್ಟ್ ಅಪ್‌ಗಳನ್ನು ಆರಂಭಿಸಲು ನೀಡಲಾಗುತ್ತದೆ. ಸಣ್ಣ ಕಂಪೆನಿ ಮಾಡುವವರಿಗೆ ಆಸನಗಳ ಆಧಾರದಲ್ಲಿ (ಇನ್‌ಕ್ಯೂಬೇಷನ್)ಕೆಲಸ ಮಾಡಲು ಅವಕಾಶ ನೀಡಲಾಗುವುದು. 1200ರಿಂದ 1500 ಚದರ ಅಡಿಯ ದೊಡ್ಡ ಸ್ಪೇಸ್ ಕೂಡ ಇಲ್ಲಿದೆ. ಅದನ್ನು ದೊಡ್ಡ ಕಂಪೆನಿಗಳು ಪಡೆದುಕೊಂಡು ಅವರಿಗೆ ಬೇಕಾದ ರೀತಿಯಲ್ಲಿ ಪರಿವರ್ತನೆ ಮಾಡಿಕೊಳ್ಳಬಹುದಾಗಿದೆ.



30 ಕೋಟಿ ರೂ. ಅನುದಾನದಲ್ಲಿ ಈ ಕಟ್ಟಡವನ್ನು ನವೀಕರಣಗೊಳಿಸುವ ಕೆಲಸ ಭರದಿಂದ ಸಾಗುತ್ತಿದೆ. ಏಪ್ರಿಲ್ ವೇಳೆಗೆ ಕೆಲಸ ಪೂರ್ಣಗೊಳ್ಳಲಿದೆ. ವರ್ಷಕ್ಕೆ ಕನಿಷ್ಠ 10 ಸಾವಿರ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದು ಕರ್ನಾಟಕ ಡಿಜಿಟಲ್ ಎಕನಾಮಿ ಮಿಷನ್ ಮೈಸೂರು ಕ್ಲಸ್ಟರ್ ಹೆಡ್ ಸುಧೀರ್ ತಿಳಿಸಿದರು.

**ಜಿಲ್ಲೆಯ ಆರ್ಥಿಕತೆ ವೃದ್ಧಿ:** ಒಂದು ನೇರ ಉದ್ಯೋಗ 17 ಪರೋಕ್ಷ ಉದ್ಯೋಗಗಳನ್ನು ಹುಟ್ಟುಹಾಕುತ್ತದೆ. 10 ಸಾವಿರ ಉದ್ಯೋಗ ಸೃಷ್ಟಿಯಿಂದ 1.70 ಲಕ್ಷ ಜನರಿಗೆ ಪರೋಕ್ಷ ಕೆಲಸ ಸಿಗುತ್ತದೆ. ಇದರಿಂದ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿ ಜಿಲ್ಲೆಯ ಆರ್ಥಿಕತೆಯೂ ವೃದ್ಧಿಸುತ್ತದೆ.

# ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಎಚ್‌ಪಿವಿ ಲಸಿಕೆ ಇಂದಿನಿಂದಲೇ ಲಭ್ಯ

• ಉದಯವಾಹಿನಿ ದಾವಣಗೆರೆ

ಮಹಿಳೆಯರಿಗೆ ಗರ್ಭಕಂಠದ ಕ್ಯಾನ್ಸರ್ ತಗುಲದಂತೆ ತಡೆಯುವಲ್ಲಿ ಪರಿಣಾಮಕಾರಿ ಎಂದು ಪರಿಗಣಿಸಲಾಗಿರುವ ಎಚ್‌ಪಿವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆಯನ್ನು ನೀಡಲು ಜಿಲ್ಲಾ ಆರೋಗ್ಯ ಇಲಾಖೆ ಸಜ್ಜಾಗಿದ್ದು, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಾಗಲಿದೆ.

14ರಿಂದ 15 ವರ್ಷ ವಯೋಮಾನದ ಬಾಲಕಿಯರಿಗೆ ಉಚಿತವಾಗಿ ಲಸಿಕೆ ನೀಡಲು ಸರ್ಕಾರ ನಿರ್ಧರಿಸಿದೆ. ಜಿಲ್ಲೆಯಲ್ಲಿ ಈ ವಯೋಮಾನದ ಅಂದಾಜು 18,706 ಬಾಲಕಿಯರಿದ್ದಾರೆ ಎಂದು ಅಂದಾಜಿಸಲಾಗಿದೆ. ಅಮೆರಿಕದ ಗಾರ್ಡಿಸಿಲ್ ಕಂಪನಿ ಉತ್ಪಾದಿಸಿರುವ ಎಚ್‌ಪಿವಿ ಲಸಿಕೆಯ ಒಂದು ಡೋಸ್ ಮಾತ್ರ ಪ್ರತಿ ಬಾಲಕಿಗೆ ನೀಡಲಾಗುತ್ತದೆ. ಜಿಲ್ಲೆಗೆ ಮೊದಲ ಹಂತದಲ್ಲಿ 7,535 ಡೋಸ್ ಪೂರೈಕೆಯಾಗಿದ್ದು, ಜಿಲ್ಲಾ ಆಸ್ಪತ್ರೆ, ತಾಲ್ಲೂಕು


ಉದಯವಾಹಿನಿ ಚಿತ್ರ

ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಲಸಿಕೆ ಲಭ್ಯವಿದೆ. ಶುಶ್ರೂಕರಿಗೆ ಈಗಾಗಲೇ ತರಬೇತಿ ನೀಡಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಷಣ್ಮುಖಪ್ಪ ತಿಳಿಸಿದರು.

ಈ ಬಗ್ಗೆ ಬಿಇಒಗಳ ಜೊತೆ ಸಭೆ ನಡೆಸಿ ಮಾಹಿತಿ ನೀಡಲಾಗಿದೆ. ಆರೋಗ್ಯ ಕಾರ್ಯಕರ್ತರು ಶಾಲೆ, ಕಾಲೇಜುಗಳಿಗೆ ತೆರಳಿ ಅರಿವು ಮೂಡಿಸಲಿದ್ದಾರೆ ಎಂದು ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ರೇಣುಕಾರಾಧ್ಯ ಎ.ಎಂ. ತಿಳಿಸಿದರು. ರಜಾ ದಿನ ಹೊರತುಪಡಿಸಿ ಬೆಳಿಗ್ಗೆ 9ರಿಂದ ಮಧ್ಯಾಹ್ನ 1 ಗಂಟೆ ನಡುವೆ ಲಸಿಕೆ ಪಡೆಯಬಹುದು. ಬಾಲಕಿಯ ಜೊತೆ ಪಾಲಕರು ಆಸ್ಪತ್ರೆಗೆ ಬಂದರೆ ಮಾತ್ರ ಚುಚ್ಚುಮದ್ದು ಹಾಕಲಾಗುವುದು. ಅವರ ಮೊಬೈಲ್ ಸಂಖ್ಯೆಗೆ ಒಟಿಪಿ ಕಳುಹಿಸುವ ವ್ಯವಸ್ಥೆಯಿದೆ. ಈ ಮಾಹಿತಿಯನ್ನು ಯು-ವಿನ್ ಆ್ಯಪ್‌ನಲ್ಲಿ ನಮೂದಿಸಲಾಗುತ್ತದೆ. ಬೇಡ ಎಂದು ತಿರಸ್ಕರಿಸುವ ಆಯ್ಕೆಯೂ ಇದೆ ಎಂದು ಮಾಹಿತಿ ನೀಡಿದರು.

ಒಂದು ಅಂದಾಜಿನ ಪ್ರಕಾರ, ಭಾರತದ ಮಹಿಳೆಯರನ್ನು ಕಾಡುವ ವಿವಿಧ ರೀತಿಯ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಎರಡನೇ ಸ್ಥಾನದಲ್ಲಿದೆ. 2024ರಲ್ಲಿ 78,000ಕ್ಕೂ ಅಧಿಕ ಮಹಿಳೆಯರಲ್ಲಿ ಸೋಂಕು ಕಂಡುಬಂದಿತ್ತು. ಅಂದಾಜು 48,000 ಮಹಿಳೆಯರ ಸಾವಿಗೆ ಗರ್ಭಕಂಠದ ಕ್ಯಾನ್ಸರ್ ಕಾರಣವಾಗಿತ್ತು ಎಂದು ಆರೋಗ್ಯ ಇಲಾಖೆಯ ದತ್ತಾಂಶಗಳು ತಿಳಿಸಿವೆ.

## 300 ಬೆಡ್ ಆಸ್ಪತ್ರೆ ವಿಚಾರದಲ್ಲಿ ಅನಗತ್ಯ ಗೊಂದಲ ಸೃಷ್ಟಿ: ಹೇಮನಾಥ ಶೆಟ್ಟಿ ಆರೋಪ

• ಉದಯವಾಹಿನಿ ಪುತ್ತೂರು

ಇಲ್ಲಿನ ಹೊರವಲಯದ ಸೇಡಿಯಾಪು ಜಾಗದಲ್ಲೇ ನಿರ್ಮಿಸಲು ಉದ್ದೇಶಿಸಿರುವ ಸರ್ಕಾರಿ ಮೆಡಿಕಲ್ ಕಾಲೇಜು ಬಳಿಯೇ 300 ಹಾಸಿಗೆಗಳ ನೂತನ ಆಸ್ಪತ್ರೆಯೂ ನಿರ್ಮಾಣವಾಗಲಿದೆ. ಇದರಲ್ಲಿ ಯಾವುದೇ ಗೊಂದಲಗಳಿಲ್ಲ. ಈಗಿರುವ ಸರ್ಕಾರಿ ಆಸ್ಪತ್ರೆಯ ಜಾಗದಲ್ಲಿ 300 ಹಾಸಿಗೆಗಳ ಆಸ್ಪತ್ರೆ ನಿರ್ಮಿಸಲು ಸಾಧ್ಯವಿಲ್ಲ ಎಂದು ಈ ಹಿಂದೆಯೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಿಳಿಸಿದೆ. ಇದೆಲ್ಲ ಗೊತ್ತಿದ್ದೂ ಬಿಜೆಪಿಗರು ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಕೆಪಿಸಿಸಿ ಸಂಯೋಜಕ ಕಾವು ಹೇಮನಾಥ ಶೆಟ್ಟಿ ಆರೋಪಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪುತ್ತೂರಿನಲ್ಲಿ ಮೆಡಿಕಲ್ ಕಾಲೇಜು ಆಗುವುದಿಲ್ಲ ಎಂದು ಈ ಹಿಂದೆ ಹೇಳುತ್ತಿದ್ದ ಬಿಜೆಪಿಗರು, ಇದೀಗ ಪ್ರಸ್ತಾವಿತ ಆಸ್ಪತ್ರೆಯನ್ನು ಮೆಡಿಕಲ್ ಕಾಲೇಜಿಗೆ ಮೀಸಲಿಟ್ಟಿರುವ ಜಾಗದಲ್ಲಿ ನಿರ್ಮಿಸುವ ಬದಲಿಗೆ ಸರ್ಕಾರಿ ಆಸ್ಪತ್ರೆ ಇರುವ ಜಾಗದಲ್ಲಿಯೇ ನಿರ್ಮಿಸಬೇಕು ಎಂದು ಹೇಳುತ್ತಿರುವುದು ನಾಚಿಕೆಗೇಡಿನ ವಿಚಾರ ಎಂದು ವ್ಯಂಗ್ಯವಾಡಿದರು.


ಉದಯವಾಹಿನಿ ಚಿತ್ರ

ಮಡಿಕೇರಿಯಲ್ಲಿ ಆಸ್ಪತ್ರೆ ಒಂದೆಡೆ ಮತ್ತು ಮೆಡಿಕಲ್ ಕಾಲೇಜು ಇನ್ನೊಂದೆಡೆ ಇರುವುದರಿಂದ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಅದನ್ನು ಮನಗಂಡು ಪುತ್ತೂರಿನಲ್ಲಿ ಆ ಸಮಸ್ಯೆ ಉಂಟಾಗಬಾರದು ಎಂಬ ನಿಟ್ಟಿನಲ್ಲಿ ಶಾಸಕರು ಈ ಕ್ರಮ ಕೈಗೊಂಡಿದ್ದಾರೆ. ಸೇಡಿಯಾಪು ಪ್ರದೇಶಕ್ಕೆ ಹೋಗಲು ಕಷ್ಟವೇನೂ ಇಲ್ಲ. ಪುತ್ತೂರು– ಉಪ್ಪಿನಂಗಡಿ ಚತುಷ್ಪಥ ರಸ್ತೆಯಿದೆ. ಮೂಲ ಸೌಕರ್ಯ ಒದಗಿಸಲಾಗುತ್ತದೆ. ಬಿಜೆಪಿಯ ಕೇವಲ ನಾಲ್ಕೈದು ಮಂದಿ ಮಾತ್ರ ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಪುತ್ತೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೆಂಟರ್ ಕಟ್ಟಡ ಕಾಮಗಾರಿ ನಡೆಯುತ್ತಿದ್ದ ವೇಳೆ ಕುಮ್ಮಕ್ಕು ನೀಡಿ ಪಕ್ಕದಲ್ಲಿನ ಮಹಿಳಾ ಕಾಲೇಜು ವಿದ್ಯಾರ್ಥಿಗಳಿಂದ ಪ್ರತಿಭಟನೆ ನಡೆಸಿದ ಬಿಜೆಪಿಗರು, ಅಲ್ಲಿನ ಪ್ರಾಂಶುಪಾಲರು ಅಮಾನತಿಗೆ ಕಾರಣರಾಗಿದ್ದಾರೆ. ಅಂತಹವರು ಇದೀಗ ಆಸ್ಪತ್ರೆ ಇಲ್ಲೇ ಆಗಬೇಕು ಎಂಬ ಹೇಳಿಕೆ ನೀಡುತ್ತಿರುವುದು ಹಾಸ್ಯಾಸ್ಪದ ಎಂದು ಟೀಕಿಸಿದರು. ಪುತ್ತೂರು ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರವಿಪ್ರಸಾದ್ ಶೆಟ್ಟಿ ಬನ್ನೂರು, ಪುಡಾ ಸದಸ್ಯ ಲ್ಯಾನ್ಸಿ ಮಸ್ಕರೇನ್ಹಸ್, ಬ್ಲಾಕ್ ಕಾಂಗ್ರೆಸ್ ಸಾಮಾಜಿಕ ಜಾಲತಾಣ ಸಮಿತಿ ಪ್ರಮುಖ ಸುಪ್ರೀತ್ ಕಣ್ಣಾರಾಯ, ವಲಯ ಕಾಂಗ್ರೆಸ್ ಅಧ್ಯಕ್ಷರಾದ ಮೋನು ಬಪ್ಪಳಿಗೆ, ಗಂಗಾಧರ ಶೆಟ್ಟಿ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

## ಬೇಸಿಗೆ ಆರಂಭದಲ್ಲಿಯೇ ಬರಿದಾದ ಕುಮದ್ವತಿ ನದಿ ಒಡಲು

# ಹೂಳು ತುಂಬಿದ ನದಿ: ನೀರಿನ ಅಭಾವ

• ಉದಯವಾಹಿನಿ ರಾಣೆಬೆನ್ನೂರು

ತಾಲ್ಲೂಕಿನ ಕೆರೆ ಕಟ್ಟೆಗಳು ಬತ್ತುತ್ತಿದ್ದು, ಈ ಭಾಗದಲ್ಲಿ ಹರಿದಿರುವ ಕುಮದ್ವತಿ ನದಿಯೂ ಸಂಪೂರ್ಣ ಬತ್ತಿದೆ. ಕೂಲಿ, ಮಲಕನಹಳ್ಳಿ, ಚಿಕ್ಕಮಾಗನೂರು, ಹಿರೇಮಾಗನೂರು, ಕುಪ್ಪೇಲೂರ, ಲಿಂದಹಳ್ಳಿ, ನಂದೀಹಳ್ಳಿ, ಮುನ್ನೂರು, ಮಣಕೂರ, ಹೊಳೆಆನ್ವೇರಿ ಗ್ರಾಮದ ಬಳಿ ಹರಿದುಹೋಗಿರುವ ಕುಮದ್ವತಿ ನದಿಯಲ್ಲಿ ನೀರು ಖಾಲಿಯಾಗಿದೆ.

ಈ ಭಾಗದ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗುವ ಆತಂಕ ನಿವಾಸಿಗಳಲ್ಲಿ ಮನೆಮಾಡಿದೆ. ಈಗ ಬೋರ್‌ವೆಲ್ ನೀರು ಇರುವುದರಿಂದ ಅಷ್ಟಾಗಿ ಸಮಸ್ಯೆ ಇಲ್ಲ. ಆದರೆ ಏಪ್ರಿಲ್, ಮೇ ತಿಂಗಳಲ್ಲಿ ಬೋರ್‌ವೆಲ್ ಬತ್ತುವ ಸಾಧ್ಯತೆ ಇದ್ದು, ನೀರಿನ ಸಮಸ್ಯೆ ಎದುರಾಗಬಹುದೆಂಬ ಚಿಂತೆ ಈ ಭಾಗದ ಜನರದ್ದು.

ರೈತರ ಅನುಕೂಲಕ್ಕಾಗಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಕುಮದ್ವತಿ ನದಿಗೆ ಅಡ್ಡಲಾಗಿ ಒಟ್ಟು 7 ಬ್ರಿಡ್ಜ್ ಕಂ ಬ್ಯಾರೇಜ್ (ಬಾಂದಾರು) ನಿರ್ಮಿಸಲಾಗಿದೆ. ಎಲ್ಲಾ ಬ್ಯಾರೇಜುಗಳಲ್ಲಿ ಹೂಳು ತುಂಬಿಕೊಂಡಿದ್ದು, ಹೆಚ್ಚಿನ ನೀರು ನಿಲ್ಲದಂತಾಗಿದೆ. ಪ್ರತಿ ವರ್ಷ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲೇ ಏಳೂ ಬ್ಯಾರೇಜ್ ಬಳಿ ನದಿ ನೀರು ಖಾಲಿಯಾತ್ತದೆ.

ಕುಮದ್ವತಿ ನದಿಯು ತಾಲ್ಲೂಕಿನ ಸಂಗಮೇಶ್ವರ ದೇವಸ್ಥಾನದ ಬಳಿ ತುಂಗಭದ್ರಾ ನದಿ ಸೇರುತ್ತದೆ. ಕುಮದ್ವತಿ ನದಿಯು ಮಾಸೂರಿನ ಮದಗದ ಕೆರೆ ತುಂಬಿದರೆ ಮಾತ್ರ ಮಳೆಗಾಲದಲ್ಲಿ ನಾಲ್ಕೈದು ತಿಂಗಳು ಹರಿಯುತ್ತದೆ. ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್ ಹಾಕಿದಾಗ ನೀರು ನಿಲ್ಲುತ್ತದೆಯಾದರೂ, ಸೇತುವೆ ಎತ್ತರ ಕಡಿಮೆಯಿದ್ದರಿಂದ ಹೆಚ್ಚಿನ ನೀರು ನಿಲ್ಲುವುದಿಲ್ಲ.

ಕುಮದ್ವತಿ ನದಿಗೆ ಅಡ್ಡಲಾಗಿರುವ ಬ್ರಿಡ್ಜ್ ಕಂ ಬ್ಯಾರೇಜ್‌ನ ಎರಡೂ ಬದಿಗೆ ಹತ್ತಾರು ಅಡಿ ಹೂಳು ತುಂಬಿಕೊಂಡಿದೆ. ಹೂಳನ್ನು ತೆಗೆಸಿ ನದಿಯಲ್ಲಿ ನೀರು ನಿಲ್ಲುವಂತೆ ಕ್ರಮ ಕೈಗೊಳ್ಳಬೇಕೆಂದು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳ ಮತ್ತು ಶಾಸಕರ ಗಮನಕ್ಕೂ ತರಲಾಗಿದೆ ಎನ್ನುತ್ತಾರೆ ಮುನ್ನೂರಿನ ಹರಿಹರಗೌಡ ಪಾಟೀಲ.

ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ರವೀಶ ಆರಾಧ್ಯ, ಎಂ.ಜೆ ಅವರನ್ನು ಸಂಪರ್ಕಿಸಿ ಲಿಂಗದಹಳ್ಳಿ ಬಳಿ ಕುಮದ್ವತಿ ನದಿ ತೀರಕ್ಕೆ ಖುದ್ದಾಗಿ ಕರೆಸಿ ಹೂಳು ತುಂಬಿದ್ದನ್ನು ತೋರಿಸಿಲಾಗಿದೆ. ಈ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲಾಗವುದು ಎಂದು ಭರವಸೆ ನೀಡಿದ್ದರು.


ಉದಯವಾಹಿನಿ ಚಿತ್ರ

**ಕುಮದ್ವತಿ ನದಿಯ 7 ಬ್ಯಾರೇಜುಗಳಲ್ಲಿ ಸಾಕಷ್ಟು ಹೂಳು ತುಂಬಿಕೊಂಡಿದ್ದರಿಂದ ಹೆಚ್ಚಿನ ನೀರು ಶೇಖರಣೆಯಾಗುವುದಿಲ್ಲ. ಹೂಳು ತೆಗೆಸುವ ಬಗ್ಗೆ ಇಲ್ಲಿನ ರೈತರು ಗಮನಕ್ಕೆ ತಂದಿದ್ದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.**
**-ರವೀಶ ಆರಾಧ್ಯ, ಎಂ.ಜೆ ಎಇಇ ಸಣ್ಣ ನೀರಾವರಿ ಇಲಾಖೆ**

**ನದಿಯಲ್ಲಿ ನೀರು ನಿಲ್ಲುವಂತೆ ಕ್ರಮ**

ಅದು ಇದುವರೆಗೂ ಈಡೇರಿಲ್ಲ ಎಂಬುದು ಇಲ್ಲಿನ ರೈತರ ದೂರಾಗಿದೆ.

ತಾಲ್ಲೂಕಿನ ಉಕ್ಕಡಗಾತ್ರಿ ಸಮೀಪದ ತುಂಗಭದ್ರಾ ನದಿಯಿಂದ ಹಿರೇಕೆರೂರು ತಾಲ್ಲೂಕಿನ 58 ಕೆರೆಗಳನ್ನು ತುಂಬಿಸುವ ಸರ್ವಜ್ಞ ಏತ ನೀರಾವರಿ ಯೋಜನೆಯು ಚಿಕ್ಕಮಾಗನೂರ ಗ್ರಾಮದ ಬಳಿ ಇರುವ ಬ್ರಿಡ್ಜ್ ಕಂ ಬ್ಯಾರೇಜ್ ಬಳಿ ಕುಮದ್ವತಿ ನದಿಯಲ್ಲಿಯೇ ಹಾದು ಹೋಗಿದೆ. ಇದೇ ಪೈಲ್‌ಲೈನ್‌ಗೆ ಒಂದು ಹೆಚ್ಚುವರಿ ವಾಲ್ ಜೋಡಿಸಿ ಬಾಂದಾರ್‌ಗೆ ನೀರು ಹರಿಸಿದರೆ ಈ ಭಾಗದ ಜನತೆಗೆ ಅನುಕೂಲವಾಗುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳವರೆಗೂ ನೀರು ಸಿಗುತ್ತದೆ ಎಂದು ಚಿಕ್ಕಮಾಗನೂರು ರೈತ ಜಗದೀಶ ಮಂಜನಗೌಡ ಪಾಟೀಲ ಒತ್ತಾಯಿಸಿದರು.

ರಾಣೆಬೆನ್ನೂರು ಶಾಸಕರು ಸರ್ಕಾದರಿಂದ ಒಂದು ಹೊಸ ಯೋಜನೆಯ ಮೂಲಕ ಮಾಸೂರು ಸುಪ್ರಸಿದ್ಧ ಮದಗ ಮಾಸೂರು ಕೆರೆಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸಿದರೆ ಕುಮದ್ವತಿ ನದಿ ವರ್ಷವಿಡಿ ಹರಿಯುತ್ತದೆ. ಇದರಿಂದ ರಾಣೆಬೆನ್ನೂರು ತಾಲ್ಲೂಕಿನ ಗ್ರಾಮಗಳಿಗೆ ನೀರಿನ ಅಭಾವ ಕಡಿಮೆಯಾಗುತ್ತದೆ. ಅಂತರ್ಜಲ ಮಟ್ಟ ಹೆಚ್ಚಿ ನಮ್ಮ ಭಾಗದ ರೈತರಿಗೂ ವರದಾನವಾಗುತ್ತದೆ.

**ಬೆಳೆ ಹಾನಿ**

**ಹೂಳು ತೆರುವಿಗೆ ಒತ್ತಾಯ ಸೇವಂತಿಗೆ ನಾಡು ಎಂದೇ ಪ್ರಖ್ಯಾತಿ ಪಡೆದಿರುವ ತಾಲ್ಲೂಕಿನ ಲಿಂಗದಹಳ್ಳಿ ಮಣಕೂರು ಮುನ್ನೂರು ಗ್ರಾಮದ ಬಳಿ ಕುಮದ್ವತಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಬ್ರಿಡ್ಜ್ ಕಂ ಬ್ಯಾರೇಜಿನಲ್ಲಿ ಹೂಳು ತುಂಬಿಕೊಂಡಿದ್ದರಿಂದ ನದಿ ನೀರು ಮಳೆಗಾಲದಲ್ಲಿ ಕೃಷಿ ಭೂಮಿಗೆ ಹರಿದು ಬೆಳೆ ಹಾನಿಗೊಳ್ಳುತ್ತದೆ. ಬೇಸಿಗೆಯಲ್ಲಿ ನದಿ ನೀರು ಬರಿದಾಗಿ ನೀರು ಸಿಗದೇ ಬೆಳೆ ಹಾನಿಯಾಗುತ್ತದೆ. ಸೇತುವೆಗಳನ್ನು ನಿರ್ಮಿಸಿ ಅನೇಕ ದಶಕಗಳು ಗತಿಸಿವೆ. ಇದರಿಂದ ಬ್ರಿಡ್ಜ್ ಕಂ ಬ್ಯಾರೇಜಿನಲ್ಲಿ ಸಾಕಷ್ಟು ಹೂಳು ತುಂಬಿಕೊಂಡಿದೆ. ನವೆಂಬರ್ ತಿಂಗಳ ಅಂತ್ಯದಲ್ಲಿ ನದಿ ನೀರು ಬರಿದಾಗುತ್ತದೆ. ಸುತ್ತಮುತ್ತಲಿನ ಬೋರ್‌ವೆಲ್‌ಗಳ ಅಂತರ್‌ಜಲ ಮಟ್ಟ ಕುಸಿಯುತ್ತದೆ. ಚುನಾಯಿತ ಪ್ರತಿನಿಧಿಗಳು ನದಿಯಲ್ಲಿನ ಹೂಳು ತೆರವುಗೊಳಿಸಿ ಹೆಚ್ಚು ನೀರು ನಿಲ್ಲುವಂತೆ ಕ್ರಮ ಕೈಗೊಳ್ಳಬೇಕೆಂಬುದು ಇಲ್ಲಿನ ಗ್ರಾಮಸ್ಥರ ಒತ್ತಾಸೆಯಾಗಿದೆ.**

## ದಲಿತ ವ್ಯಕ್ತಿಗೆ ಹಲ್ಲೆ, ಜಾತಿ ನಿಂದನೆ ಆರೋಪ

• ಉದಯವಾಹಿನಿ ಚಡಚಣ


ಉದಯವಾಹಿನಿ ಚಿತ್ರ

ಸಮೀಪದ ದೇವರ ನಿಂಬರಗಿ ಗ್ರಾಮದ ದಲಿತ ವ್ಯಕ್ತಿಯ ಮೇಲೆ ಮಾರ್ಚ್ 11 ರಂದು ಸಾರ್ವಜನಿಕವಾಗಿ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿರುವ ಚಡಚಣ ಪೊಲೀಸ್ ಠಾಣೆಯ ಎಎಸ್‌ಐ ಎಲ್.ಎಸ್. ರಾಠೋಡ್ ಅವರನ್ನು ಅಮಾನತ್ತುಗೊಳಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ದಲಿತ ಮುಖಂಡರು ತಹಶೀಲ್ದಾರ ಹಾಗು ಪಿಎಸ್‌ಐ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದಲಿತ ಮುಖಂಡ ದಶರಥ ಬನಸೋಡೆ, ಆರೋಪಿತ ಅಧಿಕಾರಿ ಕಾನುನು ಅರಿವು ಮೂಡಿವವರು ಹಾಗೂ ಪಾಲಿಸುವವರಾಗಿದ್ದು, ಅವರೇ ಕಾನುನನ್ನು ಗಾಳಿಗೆ ತೂರಿ ಅಮಾಯಕ ದಲಿತ ವ್ಯಕ್ತಿಯ ಮೇಲೆ ಹಲ್ಲೆ ಮಾಡಿದ್ದಾರೆ.

**ಎಎಸ್‌ಐ ವಿರುದ್ಧ ಕ್ರಮಕ್ಕೆ ದಲಿತ ಮುಖಂಡರ ಆಗ್ರಹ**

ಇವರ ಮೇಲೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ. ಮುಖಂಡ ಪರಮೇಶ್ವರ ಸಿಂಗೆ ಮಾತನಾಡಿ, ಇಂತಹ ಘಟನೆಗಳು ಸಮಾಜದಲ್ಲಿ ಅಸಮಾಧಾನ ಮತ್ತು ಭಯದ ವಾತಾವರಣವನ್ನು ಸೃಷ್ಟಿಸುತ್ತವೆ ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ ನ್ಯಾಯ ಒದಗಿಸಬೇಕು ಎಂದ ಅವರು, ಕೂಡಲೇ ಆಪಾದಿತ ಅಧಿಕಾರಿಯ ಮೇಲೆ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ಮಾಡುವದು ಅನಿವಾರ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ದಲಿತ ಮುಖಂಡರಾದ ಧರ್ಮಣ್ಣ ಬನಸೊಡೆ, ನಾರಾಯಣ ವಾಘಮೋರೆ, ಪ್ರಕಾಶ ಬನಸೋಡೆ, ಶಶಿಕುಮಾರ ಸಿಂಗೆ, ರಾವಲ ಬನಸೋಡೆ, ಸಿದ್ದರಾಯ ಬನಸೋಡೆ, ನೀತಿನ ಬನಸೋಡೆ, ಚೆನ್ನು ಗಾಡಿವಡ್ಡರ ಉಪಸ್ಥಿತರಿದ್ದರು.

## ಸಮಾಜದಿಂದ ಪ್ರಜಾಪ್ರಭುತ್ವ ಸಬಲ: ಪ್ರೊ.ಬಿ.ಡಿ. ಕುಂಬಾರ

• ಉದಯವಾಹಿನಿ ದಾವಣಗೆರೆ

ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ನಾಗರಿಕ ಸಮಾಜವು ಪ್ರಮುಖ ಪಾತ್ರವಹಿಸುತ್ತದೆ ಎಂದು ಕುಲಪತಿ ಪ್ರೊ.ಬಿ.ಡಿ. ಕುಂಬಾರ ಅಭಿಪ್ರಾಯಪಟ್ಟರು. ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನೆ ವಿಭಾಗದ ವತಿಯಿಂದ ನಾಗರಿಕ ಸಮಾಜ, ಉತ್ತಮ ಆಳ್ವಿಕೆ ಕುರಿತು ಹಮ್ಮಿಕೊಂಡಿರುವ 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಾಗರಿಕರು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುತ್ತಾರೆ ಎಂದು ಪ್ರೊ.ಚಂಬಿ ಪುರಾಣಿಕ್ ಪ್ರತಿಪಾದನೆ ಮಾಡಿದರು. ನಾಗರಿಕ ಸಮಾಜ ಎಚ್ಚೆತ್ತುಕೊಂಡಾಗ ಮಾತ್ರ ಉತ್ತಮ ಆಳ್ವಿಕೆಯನ್ನು ಕಂಡುಕೊಳ್ಳಲು ಸಾಧ್ಯ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಎಸ್. ಪಟಗುಂಡಿ ಹೇಳಿದರು.

## ಕೆರೆಗಳಲಲ್ಲಿ ಬಹಳಷ್ಟು ನೀರುಯಿವೆ ಕಾಲುವೆಗಳಲ್ಲಿ ನೀರಿಲ್ಲ ರೈತರ ಜಮಿನುಗಳಿಗೆ ನೀರು ಮುಟ್ಟುತ್ತಿಲ್ಲ; ಭೀಮಶೇಟ್ಟಿ ಮುಕ್ಕಾ ಆರೋಪ

• ಉದಯವಾಹಿನಿ ಚಿಂಚೋಳಿ

ತಾಲ್ಲೂಕಿನಲ್ಲಿ ರೈತರು ಆರ್ಥಿಕವಾಗಿ ಸಬಲರಾಗಲು 1973ರಲ್ಲಿ ನಿರ್ಮಿಸಿದ ಚಂದ್ರಂಪಳ್ಳಿ ಜಲಾಶಯ ಮತ್ತು ನಾಗರಾಳನ ಕೆಳದಂಡೆ ಮುಲ್ಲಾಮಾರಿ ಜಲಾಶಯ 2001ರಲ್ಲಿ ನಿರ್ಮಾಣವಾಗಿವೆ, ಆದರೆ ಸಾಕಷ್ಟು ಪ್ರಮಾಣದ ನೀರು ಜಲಾಶಯಗಳಲ್ಲಿ ಸಂಗ್ರಹವಿದ್ದರು ಕಾಲುವೆಗಳಲ್ಲಿ ನೀರು ಸಾಗದೆ ರೈತರ ಜಮೀನುಗಳಿಗೆ ನೀರು ಹೋಗದೆ ಇರುವುದರಿಂದ ರೈತರು ಪ್ರತಿವರ್ಷ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಭೀಮಾ ಮೀಷನ್ ಅಧ್ಯಕ್ಷ ಭೀಮಶೇಟ್ಟಿ ಮುಕ್ಕಾ ಆರೋಪಿಸಿದ್ದಾರೆ.

ತಾಲ್ಲೂಕಿನ ಚಂದ್ರಂಪಳ್ಳಿ ಜಲಾಶಯಕ್ಕೆ ಭೀಮಾ ಮೀಷನ್ ಮತ್ತು ಕಲಬುರ್ಗಿ, ಬೀದರ, ಯಾದಗಿರಿ, ಶಾಶ್ವತ ನೀರಾವರಿ ಹೋರಾಟ ಸಮಿತಿ ವತಿಯಿಂದ ಮುಖ್ಯ ಕಾಲುವೆ ಮತು ಕೆರೆಗಳ ಮೇಲೆ ವಿಕ್ಷಿಸಿ ಅಧ್ಯಯನ ನಡೆಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಲುವೆ ಪೂರ್ಣಗೊಳಿಸಬೇಕು ನೀರು ಹೊಲಕ್ಕೆ ಬರಬೇಕು ರೈತರ ಬದುಕು ಹಸನಾಗಬೇಕೆಂದು ಭೀಮಾ ಏತ ನೀರಾವರಿ, ಅಮರ್ಜ, ಚುಳಕಿ ನಾಲಾ, ಕಾರಂಜಾ, ಚಂದ್ರಂಪಳ್ಳಿ, ನಾಗರಾಳ ಕೆಳದಂಡೆ ಮುಲ್ಲಾಮಾರಿ, ಹತ್ತಿಕೂಣಿ, ಸೌದಾಗರ, ಮುಲ್ಲಾಮಾರಿ ಮೇಲ್ದಂಡೆ, ಗಂಡೂರಿ ನಾಲಾ, ಬೆಣ್ಣೆತೋರಾ, ಸೇರಿ ಮೂರು ಜಿಲ್ಲೆಗಳಲ್ಲಿ ಸ್ಥಾಪಿಸಾಲಾದ ಮಧ್ಯಮ ಕೆರೆಗಳು ನೀರಾವರಿ


ಉದಯವಾಹಿನಿ ಚಿತ್ರ

ಯೋಜನೆಗಳಿವೆ, ಮುಖ್ಯ ಕಾಲುವೆಗಳಿವೆ, ಮರಿ ಕಾಲುವೆಗಳಿವೆ ಆದರೆ ರೈತರ ಹೊಲಗಳಿಗೆ ನೀರು ಮುಟ್ಟುತ್ತಿಲ್ಲಯಾಕೆ, ನೀರಾವರಿ ಸೌಲಭ್ಯ ಒದಗಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ, ರಾಜಕೀಯ ನಾಯಕರ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆ ಎದ್ದುಕಾಣುತ್ತಿದೆ.

ರೈತರು ಎಚ್ಚೇತುಕೋಂಡು ಸಂಗ್ರಹವಾಗಿದ ನೀರನ್ನು ಸದುಪಯೊಗ ಪಡಿಸಿಕೋಳ್ಳಲು ಮುಂದಾಗಬೇಕು, ಜವಾಬ್ದಾರಿ ಹೊಂದಿದ ಅಧಿಕಾರಿಗಳಿಗೆ ಎಚ್ಚರಿಸಬೇಕಾಗಿದೆ, ಹಿಂದಿನ ರಾಜಕಾರಣಿಗಳು ರೈತರ ಅನುಕೂಲಕ್ಕಾಗಿ ಕೆರೆಗಳು ನಿರ್ಮಿಸಿದ್ದಾರೆ ಈಗಿನ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ನಿರ್ವಹಣೆ ಮಾಡಿ ರೈತರ ಜಮೀನುಗಳಿಗೆ ನೀರು ಹರಿಸಲು ಆಗುತ್ತಿಲ್ಲ, ಹಾಗಾಗಿ ನಾವೆಲ್ಲರೂ ಎಚ್ಚೇತ್ತುಕೋಂಡು ಕೆರೆಯ ನೀರು ಹೋಲಗಳಿಗೆ ಮುಟ್ಟುವವರೆಗೆ ಅಧಿಕಾರಿಗಳ, ಜನಪ್ರತಿನಿಧಿಗಳ, ಸರ್ಕಾರದ ವಿರುದ್ಧ ಹೋರಾಟ ಮಾಡಿ ನಮ್ಮ ನೀರು ನಮ್ಮ ಹೊಲಗಳಿಗೆ ಬರುವವರೆಗೆ ನಿಲ್ಲದೆ ನಿರಂತರವಾಗಿ ಒತ್ತಾಯ ಮಾಡುವುದಾದರೆ ಎಲ್ಲಾ ರೈತರ ಹೊಲಗಳಿಗೆ ಕೆರೆಯ ನೀರು ಬರುತ್ತವೆ, ಆಗ ರೈತರು ಸಬಲರಾಗಲು ಸಾಧ್ಯವಾಗುತ್ತದೆ ಎಂದರು.

ಜನಪ್ರತಿನಿಧಿಗಳ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಮುಖ್ಯಕಾಲುವೆ ಮತ್ತು ಮರಿ ಕಾಲುವೆಗಳಲ್ಲಿ ಮಣ್ಣು, ಗಿಡಮರಗಳು ಬೆಳೆದಿವೆ, ಕಾಲುವೆಗಲು ಒಡೆದಿವೆ, ಇದರಿಂದ ರೈತರ ಜಮೀನುಗಳಿಗೆ ನೀರು ಬರುತ್ತಿಲ್ಲ, ರೈತರು ಬೇಳೆ ಬೇಳೆಯುತ್ತಿಲ್ಲ, ಎಲ್ಲಾ ನೀರಾವರಿ ಯೋಜನೆಗಳು ತ್ವರಿತವಾಗಿ ಪೂರ್ಣಗೊಳಿಸಿ, ಕಾಲುವೆಗಳು ದುರಸ್ತಿಗೋಳಿಸಬೇಕು, ಕೆರೆಗಳ ಸಂಗ್ರಹ ನೀರು ಪ್ರತಿಶತಃ 100ರಷ್ಟು ರೈತರಿಗೆ ಸದುಪಯೋಗವಾಗಬೇಕು, ಕಾಲುವೆ ವಿನ್ಯಾಸ ದೋಷ ತಿದ್ದುಪಡಿಸಬೇಕು, ರೈತರಿಗೆ ಶಾಶ್ವತ ನೀರು ದೋರಕಬೇಕು ಸದಾ ರೈತರು ಕೃಷಿಗೆ ಒತ್ತು ನೀಡುತ್ತಾರೆ, ಎಲ್ಲಾ ಕೆರೆಗಳ ಅಧ್ಯಯನ ನಡೆಸಿದ ವರದಿಯನ್ನು ಸರ್ಕಾರಕ್ಕೆ ಮತ್ತು ಜಿಲ್ಲಾ ನೀರಾವರಿ ಇಲಾಖೆಗೆ ವರದಿ ಸಲ್ಲಿಸಿ ಗಡುವು ನೀಡುತ್ತೆವೆ ಗಡುವಿನ ಒಳಗೆ ನೀರಾವರಿ ಸಮಸ್ಯೆಗಳು ಈಡೇರಿಸದೆ ಇದ್ದಲ್ಲಿ ಸಾವಿರಾರು ರೈತರ ಜೋತೆಯಲ್ಲಿ ನಿರಂತರ ಉಗ್ರ ಹೋರಾಟ ಹಮ್ಮಿಕೋಳ್ಳುತ್ತೇವೆ ಎಂದರು.

ಶಾಶ್ವತ ನೀರಾವರಿ ಹೋರಾಟ ಸಮಿತಿ ಸದಸ್ಯರಾದ ಪ್ರೋ.ಬಸವರಾಜ ಕುನೂರ, ಗಿರೀಶಗೌಡ ಇನಾಂದಾರ, ಶಿವಲಿಂಗಪ್ಪಾ ಪಾಟೀಲ, ಶಿವರಾಜ

# ಕಲಬುರಗಿ-ಬೆಂಗಳೂರು ವಂದೇ ಭಾರತಕ್ಕೆ ಭರ್ಜರಿ ಆದಾಯ

## ಪ್ರಯಾಣಿಕರಿಂದ ಭರ್ಜರಿ ಸ್ಪಂದನೆ , ಎರಡು ವರ್ಷಗಳಲ್ಲಿ 67.89 ಕೋಟಿ ಆದಾಯ ಬಂದಿರುವುದು ಹೊಸ ಹುರುಪು

• ಉದಯವಾಹಿನಿ ಕಲಬುರಗಿ

ಕಲಬುರಗಿಯಿಂದ ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಸೇವೆ ನೀಡುತ್ತಿರುವ ವಂದೇ ಭಾರತ್ ರೈಲಿಗೆ ಪ್ರಯಾಣಿಕರಿಂದ ಭರ್ಜರಿ ಸ್ಪಂದನೆ ಸಿಕ್ಕಿದೆ. ಎರಡು ವರ್ಷಗಳಲ್ಲಿ 67.89 ಕೋಟಿ ಆದಾಯ ಬಂದಿರುವುದು ಹೊಸ ಹುರುಪು ನೀಡಿದೆ.

ಕಲ್ಯಾಣ ಕರ್ನಾಟಕದಿಂದ ಹಗಲಿನಲ್ಲಿ ಶೀಘ್ರ ಬೆಂಗಳೂರಿಗೆ ತಲುಪುವ ಆಶಯದೊಂದಿಗೆ 2024ರ ಮಾ.12ರಂದು ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಮೂಲಕ ಚಾಲನೆ ನೀಡಿದ್ದರು. ಅಲ್ಲಿಂದ ಕಳೆದ ಫೆ.28ರವರೆಗೆ ಸುಮಾರು 5.72 ಲಕ್ಷ ಪ್ರಯಾಣಿಕರು ವಂದೇ ಭಾರತ್ ರೈಲಿನ ಸೇವೆ ಪಡೆದುಕೊಂಡಿದ್ದಾರೆ.

ಕಲಬುರಗಿ–ಬೆಂಗಳೂರು ನಡುವಿನ ವೇಗದ ಸಂಪರ್ಕ ಒದಗಿಸಿರುವ ವಂದೇ ಭಾರತ್ ಎಕ್ಸ್‌ಪ್ರೆಸ್‌ನಿಂದ ಉದ್ಯೋಗಿಗಳು, ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು, ಆರೋಗ್ಯ ಸೇವೆಗಾಗಿ ರಾಜಧಾನಿಗೆ ತೆರಳುವವರು ಹಾಗೂ ವ್ಯಾಪಾರಿಗಳಿಗೆ ಅತ್ಯಂತ ಅನುಕೂಲಕರವಾಗಿದೆ. ಉಳಿದ ರೈಲುಗಳಿಗೆ ಹೋಲಿಸಿದರೆ ಅತಿ ಕಡಿಮೆ ಸಮಯದಲ್ಲಿ ಬೆಂಗಳೂರಿಗೆ ತಲುಪುವ ವ್ಯವಸ್ಥೆ ಇರುವುದರಿಂದ ಇದು ಎಲ್ಲರಿಗೂ ಅಚ್ಚುಮೆಚ್ಚಿನ ರೈಲಾಗಿ ಪರಿವರ್ತನೆಯಾಗಿದೆ.

**ಶೇ.100ಕ್ಕಿಂತ ಹೆಚ್ಚಿನ ಭರ್ತಿ:** ವಂದೇ ಭಾರತ್ ರೈಲು ಆರಂಭದ ವರ್ಷದಲ್ಲಿಯೇ ಶೇ.100ರ ಸಮೀಪದ ಭರ್ತಿಯೊಂದಿಗೆ ಓಡಾಡುತ್ತಿತ್ತು. ಆದರೆ, ಕಳೆದ ಒಂದು ವರ್ಷದಿಂದ ಇದರ ಪ್ರಮಾಣ ಶೇ.100ನ್ನು ದಾಟಿರುವುದು ವಿಶೇಷವಾಗಿದೆ. ಈ ವರ್ಷ ಕಲಬುರಗಿ

- **ಕಲ್ಯಾಣ ಕರ್ನಾಟಕದಿಂದ ಹಗಲಿನಲ್ಲಿ ಶೀಘ್ರ ಬೆಂಗಳೂರಿಗೆ ತಲುಪುವ ಆಶಯದೊಂದಿಗೆ 2024ರ ಮಾ.12ರಂದು ಆರಂಭ**
- **ವಂದೇ ಭಾರತ್ ಎಕ್ಸ್‌ಪ್ರೆಸ್‌ನಿಂದ ಉದ್ಯೋಗಿಗಳು, ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು, ಆರೋಗ್ಯ ಸೇವೆಗಾಗಿ ರಾಜಧಾನಿಗೆ ತೆರಳುವವರು ಹಾಗೂ ವ್ಯಾಪಾರಿಗಳಿಗೆ ಅತ್ಯಂತ ಅನುಕೂಲಕರವಾಗಿದೆ**
- **ಈ ವರ್ಷ ಕಲಬುರಗಿ-ಎಸ್‌ಎಂವಿಬಿ ಬೆಂಗಳೂರು-ಕಲಬುರಗಿ ನಡುವೆ ಸಂಚರಿಸುವ ರೈಲಿನಲ್ಲಿ ಶೇ.103.52ರಷ್ಟು ಭರ್ತಿಯಾಗುವ ಮೂಲಕ ದಾಖಲೆ ಬರೆದಿದೆ.**

-ಎಸ್‌ಎಂವಿಬಿ ಬೆಂಗಳೂರು-ಕಲಬುರಗಿ ನಡುವೆ ಸಂಚರಿಸುವ ರೈಲಿನಲ್ಲಿ ಶೇ.103.52ರಷ್ಟು ಭರ್ತಿಯಾಗುವ ಮೂಲಕ ದಾಖಲೆ ಬರೆದಿದೆ. ಇದು ಕಲ್ಯಾಣ ಕರ್ನಾಟಕದ ಪ್ರಮುಖ ನಗರವಾದ ಕಲಬುರಗಿಯಿಂದ ರಾಜಧಾನಿ ಬೆಂಗಳೂರಿಗೆ ಪ್ರಯಾಣಿಸಲು ಜನರ ಬೇಡಿಕೆ ಹೇಗಿದೆ ಎಂಬುದನ್ನು ತೋರಿಸುತ್ತದೆ.

**ಕಲಬುರಗಿ ರೈಲ್ವೆ ಡಿವಿಷನ್‌ಗೆ ಎಳ್ಳುನೀರು:** 2014ರ ರೈಲ್ವೆ ಮಂಜೂರಾಗಿದ್ದ ಕಲಬುರಗಿ ರೈಲ್ವೆ ಡಿವಿಷನ್‌ಗೆ ಕೇಂದ್ರ ಸರಕಾರ ಈಗ ಎಳ್ಳು ನೀರು ಬಿಟ್ಟಿರುವುದು ಕಲ್ಯಾಣ ಕರ್ನಾಟಕ ಭಾಗದಲ್ಲಿ ವ್ಯಾಪಕ ಜನಾಕ್ರೋಶಕ್ಕೆ ಕಾರಣವಾಗಿದೆ. ಕಲಬುರಗಿ ರೈಲ್ವೆ ಡಿವಿಷನ್ ರಚಿಸುವಂತೆ 1984ರಲ್ಲಿ ರೈಲ್ವೆ ಇಲಾಖೆಯ ಸರೀನ್ ಕಮಿಟಿ ಶಿಫಾರಸು ಮಾಡಿತ್ತು. ಅದರನ್ವಯ 2014ರ ಬಜೆಟ್‌ನಲ್ಲಿ ಆಗ ರೈಲ್ವೆ ಸಚಿವರೂ ಆಗಿದ್ದ ಕಲಬುರಗಿ ಸಂಸದ ಮಲ್ಲಿಕಾರ್ಜುನ ಖರ್ಗೆ ಘೋಷಿಸಿದ್ದರು.

ಫೆಬ್ರವರಿಯಲ್ಲಿ ಶಂಕುಸ್ಥಾಪನೆಯೂ ನೆರವೇರಿಸಲಾಗಿತ್ತು. ಕಟ್ಟಡ ನಿರ್ಮಾಣಕ್ಕೆ ಸಹ ಟೆಂಡರ್ ಕರೆಯಲಾಗಿತ್ತು. ಮಹತ್ವಾಕಾಂಕ್ಷಿ ಯೋಜನೆಗೆ ನಗರದಲ್ಲಿ 42 ಎಕರೆ ಜಮೀನು ಸಹ ನೀಡಲಾಗಿತ್ತು. ಆದರೆ ಈಗ ಎಲ್ಲವೂ ಹೊಳೆಯಲ್ಲಿ ಹುಣಸೆಕಾಯಿ ತೊಳೆದಂತಾಗಿದೆ. ಮಹತ್ವದ ಯೋಜನೆ ಕೈ ಬಿಟ್ಟಿರುವುದಕ್ಕೆ ಅಸಮಾಧಾನ ಉಂಟು ಮಾಡಿದೆ.

### 5.72 ಲಕ್ಷ ಜನರ ಪ್ರಯಾಣ

**ಸ್ವಾತಂತ್ರ್ಯ ನಂತರ ಕಲಬುರಗಿಯಿಂದ ಬೆಂಗಳೂರಿಗೆ ಪ್ರಾರಂಭವಾದ ಮೊದಲ ವಂದೇ ಭಾರತ್ ರೈಲು ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡಿರುವ ಈ ಎಕ್ಸ್‌ಪ್ರೆಸ್ ನಿತ್ಯವೂ ಭರ್ತಿಯಾಗಿ ಪಯಣಿಸುತ್ತಿದೆ. ಎರಡು ವರ್ಷಗಳಲ್ಲಿ 5,72,566 (ಫೆ.28ರವರೆಗೆ) ಜನರು ಪ್ರಯಾಣಿಸಿದ್ದಾರೆ. ಸಂಪೂರ್ಣ ಹವಾನಿಯಂತ್ರಿತ ಕೋಚ್‌ಗಳು, ದೊಡ್ಡ ಗ್ಲಾಸ್‌ನ ಕಿಟಕಿಗಳು ಹಾಗೂ ಉತ್ತಮ ಸೌಲಭ್ಯಗಳು ಪ್ರಯಾಣಿಕರಿಗೆ ಮುದ ನೀಡುತ್ತವೆ ಎಂದು ಪ್ರಯಾಣಿಕ ಮಲ್ಲಿಕಾರ್ಜುನ ತಿಳಿಸಿದ್ದಾರೆ.**



## ಮಿನಿ ನ್ಯೂಸ್

### ಕಬ್ಬಿನ ಬಾಕಿ ಬಿಲ್ ಪಾವತಿಗೆ ಆಗ್ರಹಿಸಿ ರೈತರ ಪ್ರತಿಭಟನೆ

• ಉದಯವಾಹಿನಿ ಬೆಳಗಾವಿ

ರಾಜ್ಯದ ಸಕ್ಕರೆ ಕಾರ್ಖಾನೆಗಳು ಬಾಕಿ ಉಳಿಸಿಕೊಂಡಿರುವ ರೂ.4,700 ಕೋಟಿ ಬಿಲ್ ತಕ್ಷಣವೇ ಪಾವತಿಸಬೇಕು ಎಂದು ಒತ್ತಾಯಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ರೈತರು ಇಲ್ಲಿನ ಸಕ್ಕರೆ ಆಯುಕ್ತರ ಕಚೇರಿಗೆ ಶುಕ್ರವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಮುಖಂಡ ಚೂನಪ್ಪ ಪೂಜೇರಿ, ರೈತರು ಕಬ್ಬು ಪೂರೈಸಿದ ರೂ.4,700 ಕೋಟಿ ಬಿಲ್ ಅನ್ನು ಸಕ್ಕರೆ ಕಾರ್ಖಾನೆಗಳು ನೀಡಬೇಕಿದೆ. ಆದರೆ, ದಿನಕ್ಕೊಂದು ನೆಪ ಹೇಳುತ್ತ ಅಲೆದಾಡಿಸುತ್ತಿವೆ ಎಂದು ದೂರಿದರು.

ಪ್ರತಿ ಟನ್ ಕಬ್ಬಿಗೆ ಸರ್ಕಾರ ರೂ.3,300 ದರ ನಿಗದಿಪಡಿಸಿತ್ತು. ಆದರೆ, ಕಾರ್ಖಾನೆಗಳು ನಿಗದಿಯಂತೆ ದರ ಕೊಟ್ಟಿಲ್ಲ. ಸರ್ಕಾರ ರೂ. 300 ಕೋಟಿ ಸಬ್ಸಿಡಿ ನೀಡಿದ್ದರೂ, ಕಾರ್ಖಾನೆಗಳು ರೈತರಿಗೆ ನೀಡದೆ ಮೋಸ ಮಾಡುತ್ತಿವೆ ಎಂದು ಆಪಾದಿಸಿದರು. ತ್ವರಿತವಾಗಿ ನಮ್ಮ ಬೇಡಿಕೆ ಈಡೇರದಿದ್ದರೆ, ಸಕ್ಕರೆ ಕಾರ್ಖಾನೆಗಳ ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ಕೊಟ್ಟರು.

### ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತ: ಮತ್ತಷ್ಟು ಹೋಟೆಲ್‌ಗಳು ಬಂದ್

• ಉದಯವಾಹಿನಿ ಉಡುಪಿ

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಸರಬರಾಜು ಸ್ಥಗಿತಗೊಂಡಿರುವುದು ಜಿಲ್ಲೆಯಲ್ಲೂ ಹೋಟೆಲ್ ಉದ್ಯಮಕ್ಕೆ ಭಾರಿ ಹೊಡೆತ ನೀಡಿದ್ದು, ಉಡುಪಿ ನಗರ ವ್ಯಾಪ್ತಿಯಲ್ಲಿ ಹಲವು ಹೋಟೆಲ್‌ಗಳು ಬಾಗಿಲು ಮುಚ್ಚಿವೆ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಬಹುತೇಕ ಹೋಟೆಲ್‌ಗಳು ಬಾಗಿಲು ಮುಚ್ಚಬೇಕಾದ ಅನಿವಾರ್ಯತೆ ಎದುರಾಗಬಹುದು ಎಂದು ಹೋಟೆಲ್ ಮಾಲಕರು ತಿಳಿಸಿದ್ದಾರೆ. ಸಣ್ಣಸಣ್ಣ ಹೋಟೆಲ್, ಫಾಸ್ಟ್ ಫುಡ್ ಸೆಂಟರ್ ನಡೆಸುವವರ ಮೇಲೆ ಹೆಚ್ಚಿನ ಪರಿಣಾಮ ಬೀರಿದ್ದು. ಕೆಲವು ಫಾಸ್ಟ್ ಫುಡ್ ಸೆಂಟರ್‌ಗಳು ಈಗಾಗಲೇ ಬಾಗಿಲು ಮುಚ್ಚಿವೆ. ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿರುವುದರಿಂದ ಹೋಟೆಲ್ ನಡೆಸುವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಮಸ್ಯೆಗಳ ಬಗ್ಗೆ ಚರ್ಚಿಸಲು ತುರ್ತು ಸಭೆ ಕರೆಯಲಾಗಿದೆ ಎಂದು ಉಡುಪಿ ಜಿಲ್ಲಾ ಹೋಟೆಲ್ ಮಾಲಕರ ಸಂಘದ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ಹೇಳಿದ್ದಾರೆ.

### ಮಹಿಳೆಯರು ಕಾನೂನು ಸದ್ಬಳಕೆ ಮಾಡಿಕೊಳ್ಳಿ

• ಉದಯವಾಹಿನಿ ಬೀಳಗಿ

ಮಹಿಳೆಯ ರಕ್ಷಣೆಗಾಗಿ ಸಾಕಷ್ಟು ಕಾನೂನುಗಳಿದ್ದರೂ ಭ್ರೂಣ ಹತ್ಯೆ, ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ದೌರ್ಜನ್ಯದಂತಹ ಘಟನೆಗಳು ನಡೆಯುತ್ತಿರುವುದು ಇಂದಿನ ದುರಂತ ಎಂದು ಸೆಷನ್ಸ್ ನ್ಯಾಯಾಧೀಶೆ ಪುಷ್ಪಾ ಜೋಗೋಜಿ ಹೇಳಿದರು. ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಕಾನೂನು ಸೇವಾ ಸಮಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬಾಗಲಕೋಟೆ, ಶಿಶು ಅಭಿವೃದ್ಧಿ ಯೋಜನೆ ಬೀಳಗಿ ಸಹಯೋಗದೊಂದಿಗೆ ಬೇಟಿ ಪಡಾವೋ ಬೇಟಿ ಬಚಾವೋ ಯೋಜನೆಯಡಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕಾನೂನುಗಳು ಹೆಣ್ಣುಮಕ್ಕಳು ಪರವಾಗಿವೆ. ಅವುಗಳ ಸದ್ಬಳಕೆ ಮಾಡಿಕೊಳ್ಳಿ. ತವರು ಮನೆಯಂತೆ ಗಂಡನ ಮನೆಯನ್ನು ಪ್ರೀತಿ, ಗೌರವದಿಂದ ಕಾಣಿರಿ ಎಂದರು. ತಹಶೀಲ್ದಾರ್ ವಿನೋದ ಹತ್ತಳ್ಳಿ ಮಾತನಾಡಿ, ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗಿರದೆ ಸಮಾಜದ ಮುಖ್ಯ ವಾಹಿನಿಯಲ್ಲಿ ಭಾಗವಹಿಸಿ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಎಸ್.ಸಿ.ಕರಬಾನಿ ಉಪನ್ಯಾಸ ನೀಡಿದರು. ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ದೇವಿಂದ್ರ ಧನಪಾಲ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಬಿ.ಜಿ.ಕವಟೇಕರ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ ಪಾಟೀಲ, ಸಹಾಯಕ ಸರ್ಕಾರಿ ಅಭಿಯೋಜಕಿ ಶಿಲ್ಪಾ ಜೋಶಿ, ವಕೀಲ ಅಶೋಕ ಜಲಗೇರಿ, ಇನ್ನರವಿಲ್ ಅಧ್ಯಕ್ಷೆ ಶ್ರೀದೇವಿ ಪ್ಯಾಟಿಮಠ ಇದ್ದರು. ಸಿಡಿಪಿಒ ಇಲಾಖೆಯ ಮೇಲ್ವಿಚಾರಕರಾದ ಸುಜಾತ ರಜಪೂತ, ಚಂದ್ರಕಲಾ ಚನಾಳ ಇದ್ದರು. ಗೀತಾ ನಾಯ್ಕ ನಿರೂಪಿಸಿದರು. ಸುಶೀಲಾ ಹಂಚಿನಾಳ ಸ್ವಾಗತಿಸಿದರು.

### ಸಿಲಿಂಡರ್ ಅಭಾವದ ವದಂತಿ: ಮುಗಿಬಿದ್ದ ಜನ

• ಉದಯವಾಹಿನಿ ಹಾಸನ

ನಗರದಲ್ಲಿ ಅಡುಗೆ ಅನಿಲ ಸಿಲಿಂಡರ್ ಕೊರತೆ ಉಂಟಾಗಿದೆ ಎಂಬ ವದಂತಿಗಳ ಹಿನ್ನೆಲೆಯಲ್ಲಿ ಗ್ರಾಹಕರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಹಲವರು ಗ್ಯಾಸ್ ವಿತರಣಾ ಕೇಂದ್ರಗಳಿಗೆ ಮುಗಿಬಿದ್ದು ಹೆಚ್ಚುವರಿ ಸಿಲಿಂಡರ್‌ಗಳನ್ನು ಬುಕ್ ಮಾಡುತ್ತಿರುವ ಘಟನೆ ಕಂಡುಬಂದವು.

ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಸಿಗುವುದಿಲ್ಲ ಎಂಬ ಭೀತಿಯಿಂದ ಹಲವಾರು ಗ್ರಾಹಕರು ಹೆಚ್ಚುವರಿಯಾಗಿ ಸಿಲಿಂಡರ್ ಬುಕ್ಕಿಂಗ್ ಮಾಡುತ್ತಿದ್ದಾರೆ. ಗೃಹ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಬಹುದು ಎಂಬ ಆತಂಕದಿಂದ ಮುಂಚಿತವಾಗಿ ಬುಕ್ಕಿಂಗ್ ಮಾಡುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದು ವಿತರಕರು ತಿಳಿಸಿದ್ದಾರೆ. ಗೃಹ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಿಲ್ಲ. ನಿತ್ಯದ ಗೃಹ ಬಳಕೆಯ ಸಿಲಿಂಡರ್ ನಿಯಮಿತವಾಗಿ ಪೂರೈಕೆ ಆಗುತ್ತಿದ್ದು, ಸಾರ್ವಜನಿಕರು ಆತಂಕ ಪಡಬೇಕಾದ ಪರಿಸ್ಥಿತಿ ಇಲ್ಲ ಎಂದು ಹೇಳಿದ್ದಾರೆ.

ಆದರೆ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆಯಲ್ಲಿ ಮಾತ್ರ ಸ್ವಲ್ಪ ವ್ಯತ್ಯಯ ಉಂಟಾಗಿದ್ದು. ಕೆಲವು ಕಡೆ ಕೊರತೆ ಕಾಣಿಸಿಕೊಂಡಿದೆ. ಹೋಟೆಲ್‌ಗಳು, ಸಿಹಿತಿಂಡಿ ತಯಾರಿಕಾ ಅಂಗಡಿಗಳು ಹಾಗೂ ಇತರೆ ವಾಣಿಜ್ಯ ಬಳಕೆದಾರರಿಗೆ ಸರಬರಾಜಿನಲ್ಲಿ ತಾತ್ಕಾಲಿಕ ತೊಂದರೆ ಉಂಟಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಸರ್ಕಾರದ ನಿರ್ದೇಶನದಂತೆ ಸಿಲಿಂಡರ್ ಪೂರೈಕೆ ಕ್ರಮಬದ್ಧವಾಗಿ ಮುಂದುವರಿಯುತ್ತಿದೆ. ಆದ್ದರಿಂದ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡದೇ ಅನಗತ್ಯವಾಗಿ ಹೆಚ್ಚುವರಿ ಸಿಲಿಂಡರ್ ಬುಕ್ ಮಾಡಬಾರದು ಎಂದು ವಿತರಕರು ಮನವಿ ಮಾಡಿದ್ದಾರೆ.

ಸಾರ್ವಜನಿಕರು ಗೊಂದಲಕ್ಕೆ ಒಳಗಾಗದೇ ಅಗತ್ಯವಿರುವಷ್ಟೇ ಸಿಲಿಂಡರ್ ಬುಕ್ ಮಾಡುವುದು ಸೂಕ್ತ ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನೀವು ವಿರಾಮದ ಸಂತೋಷವನ್ನು ಅನುಭವಿಸಲಿದ್ದೀರಿ. ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ.

**ವೃಷಭ** ನೀವು ಆರೋಗ್ಯ ಸಮಸ್ಯೆಯಿಂದಾಗಿ ಒಂದು ಪ್ರಮುಖ ಕೆಲಸಕ್ಕೆ ಹೋಗಲು ಸಾಧ್ಯವಾಗದಿರುವುದರಿಂದ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಆದರೆ ನಿಮ್ಮನ್ನು ಮೇಲೆತ್ತಲು ನಿಮ್ಮ ತಾರ್ಕಿಕತೆಯನ್ನು ಬಳಸಿ.

**ಮಿಥುನ** ನೀವು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ನಿಮಗೆ ಹಣವನ್ನು ನೀಡಬಹುದು. ಕುಟುಂಬದ ಕಾರ್ಯಕ್ರಮದಲ್ಲಿ ಹೊಸ ಸ್ನೇಹಿತರು ಕಾಣುತ್ತಾರೆ.

**ಕರ್ಕಾಟಕ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ಪ್ರೀತಿ ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ.

**ಸಿಂಹ** ನೀವು ಭಾವಿಸಿದ್ದಕ್ಕಿಂತ ಹೆಚ್ಚಾಗಿ ನಿಮ್ಮ ಸಹೋದರರು ನಿಮ್ಮ ಅಗತ್ಯಗಳಿಗೆ ಬೆಂಬಲ ನೀಡುತ್ತಾರೆ. ನಿಮ್ಮ ಪ್ರೀತಿಯ ಸಂಗಾತಿ ಏನಾದರೂ ಸುಂದರವಾದದ್ದನ್ನು ಮಾಡಿ ನಿಮಗೆ ಆಶ್ಚರ್ಯವನ್ನುಂಟು ಮಾಡುತ್ತಾರೆ.

**ಕನ್ಯಾ** ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು.

**ತುಲಾ** ನಿಮ್ಮ ಸಂಗಾತಿ ನಿಮ್ಮ ಜೊತೆಗಿರುವ ಬಗ್ಗೆ ನಿಮಗೆ ಕೆಲವು ಅಷ್ಟೇನೂ ಒಳ್ಳೆಯದಲ್ಲದ ವಿಷಯಗಳನ್ನು ಹೇಳಬಹುದು. ಜೀವನದಲ್ಲಿ ನೀರಿನ ಮೌಲ್ಯದ ಬಗ್ಗೆ ನೀವು ಮನೆಯ ಕಿರಿಯರಿಗೆ ಉಪನ್ಯಾಸ ನೀಡಬಹುದು.

**ವೃಶ್ಚಿಕ** ಒತ್ತಡದ ಅವಧಿಯಿದ್ದರೂ ಕುಟುಂಬದ ಬೆಂಬಲ ನಿಮಗೆ ಸಹಾಯ ಮಾಡುತ್ತದೆ. ಭಾವಪೂರ್ಣ ಪ್ರೀತಿಯ ಭಾವಪರವಶತೆಯನ್ನು ಇಂದು ಅನುಭವಿಸಬಹುದು. ಅದಕ್ಕಾಗಿ ಸ್ವಲ್ಪ ಸಮಯ ತೆಗೆದಿಡಿ.

**ಧನಸ್ಸು** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ, ವಿಶ್ವಾಸ ಮೂಡುತ್ತದೆ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ.

**ಮಕರ** ನಿಮ್ಮ ಪ್ರಚಂಡ ಪ್ರಯತ್ನ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ.

**ಕುಂಭ** ಇಂದು ನೀವು ಯಾತ್ರೆಯಲ್ಲಿ ಹೋಗುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ಗಮನ ಹರಿಸಿ ಅವುಗಳನ್ನು ಕಡಿಯುವ ಸಧ್ಯತೆ ಇದೆ. ವಿಶೇಷವಾಗಿ ನಿಮ್ಮ ಹಣದಚೀಲವನ್ನು ಎಚ್ಚರಿಕೆಯಿಂದಿಡಿ.

**ಮೀನ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ದಿನದ ಆರಂಭದಲ್ಲಿ ಇಂದು ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು. ಇದರಿಂದ ನಿಮ್ಮ ಪೂರ್ತಿ ದಿನ ಹದಗೆಡಬಹುದು.

### ಎಣ್ಣೆಯ ಕೃತಕ ಅಭಾವ: ತಾಳೆ, ಸೂರ್ಯಕಾಂತಿ ಎಣ್ಣೆ 15 ದಿನಕ್ಕಾಗುವಷ್ಟು ದಾಸ್ತಾನು

# ಯುದ್ಧ ಪರಿಣಾಮ, ಭಾರಿ ಏರಿದ ಅಡುಗೆ ಎಣ್ಣೆ ಬೆಲೆ

• **ಉದಯವಾಹಿನಿ ರಾಯಚೂರು**

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಇರಾನ್-ಇಸ್ರೇಲ್ ಯುದ್ಧದಿಂದಾಗಿ ದೇಸಿ ಮಾರುಕಟ್ಟೆ ಮೇಲೂ ಪರಿಣಾಮ ಬೀಳಲು ಆರಂಭವಾಗಿದೆ. ಅದರಲ್ಲೂ ಅಡುಗೆ ಎಣ್ಣೆ ಬೆಲೆ ದಿನೇ ದಿನೇ ಏರಿಕೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕೊರತೆ ಉಂಟಾಗಿ ಕೃತಕ ಅಭಾವ ಸೃಷ್ಟಿಯಾಗುವ ಭೀತಿ ಎದುರಾಗಿದೆ.

ರಾಜ್ಯದಲ್ಲಿ ತಾಳೆ (ಪಾಮ್) ಹಾಗೂ ಸೂರ್ಯಕಾಂತಿ ಎಣ್ಣೆಗಳ ಹೆಚ್ಚಿನ ಪ್ರಮಾಣವು ವಿದೇಶಗಳಿಂದ ಕಚ್ಚಾ ತೈಲವಾಗಿ ಆಮದು ಮಾಡಿಕೊಂಡು, ಇಲ್ಲಿ ಶುದ್ಧೀಕರಿಸಿ ಹಾಗೂ ಪ್ಯಾಕಿಂಗ್ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ. ಪಾಮ್ ಎಣ್ಣೆಯನ್ನು ಮುಖ್ಯವಾಗಿ ಮಲೇಶಿಯಾ ಹಾಗೂ ಇಂಡೋನೇಷ್ಯಾ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಸನ್‌ಫ್ಲವರ್ ಎಣ್ಣೆಯ ಕಚ್ಚಾ ತೈಲವನ್ನು ಉಕ್ರೇನ್ ಹಾಗೂ ಕೆಲವು ಯೂರೋಪಿನ ರಾಷ್ಟ್ರಗಳಿಂದ ತರಲಾಗುತ್ತದೆ. ಆದರೆ, ಮಧ್ಯಪ್ರಾಚ್ಯದ ಉದ್ವಿಗ್ನ ಪರಿಸ್ಥಿತಿ ಹಾಗೂ ಸಾಗಾಟದ ಅಡಚಣೆಗಳಿಂದಾಗಿ ಈ ಕಚ್ಚಾ ತೈಲದ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಲಕ್ಷಣ ಕಂಡುಬಂದಿದೆ. ಇದರಿಂದಲೇ ಸದ್ಯ ಮಾರುಕಟ್ಟೆಯಲ್ಲಿ ಎಣ್ಣೆ ಬೆಲೆ ಏರಿಕೆಯ ಜತೆಗೆ ಬೇಡಿಕೆ ಹೆಚ್ಚಳವೂ ಕಂಡುಬರುತ್ತಿದೆ.

- ■ ವಿದೇಶಗಳಿಂದ ಕಚ್ಚಾ ತೈಲವಾಗಿ ಆಮದು ಮಾಡಿಕೊಂಡು, ಇಲ್ಲಿ ಶುದ್ಧೀಕರಿಸಿ ಹಾಗೂ ಪ್ಯಾಕಿಂಗ್ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ.
- ■ ಸನ್‌ಫ್ಲವರ್‌ಎಣ್ಣೆಯ ಕಚ್ಚಾ ತೈಲವನ್ನು ಉಕ್ರೇನ್ ಹಾಗೂ ಕೆಲವು ಯೂರೋಪಿನ ರಾಷ್ಟ್ರಗಳಿಂದ ತರಲಾಗುತ್ತದೆ
- ■ ಸನ್‌ಫ್ಲವರ್‌ಎಣ್ಣೆ ಲೀಟರ್‌ಗೆ 165 ರೂ.ಇದ್ದದ್ದು ಈಗ 178 ರೂ.ಗೆ ಏರಿಕೆಯಾಗಿದೆ.

**ಬೇಡಿಕೆ ದ್ವಿಗುಣ:** ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಹಾಗೂ ವ್ಯಾಪಾರಿಗಳ ಒಕ್ಕೂಟದ ಮೂಲಕ ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರಗಿ ಮತ್ತು ಬೀದರ್ ಜಿಲ್ಲೆಗಳಿಗೆ ಸನ್‌ಫ್ಲವರ್ ಹಾಗೂ ಪಾಮ್ ಎಣ್ಣೆ ಪೂರೈಕೆ ಮಾಡಲಾಗುತ್ತಿದೆ. ಈ ಮೊದಲು ದಿನಕ್ಕೆ ಸರಾಸರಿ 10 ಟನ್ ಎಣ್ಣೆ ಮಾರಾಟವಾಗುತ್ತಿತ್ತು. ಆದರೆ, ಕಳೆದ ಕೆಲ ದಿನಗಳಿಂದ ಜನರು ಮುಂಚಿತವಾಗಿ ಖರೀದಿಸಲು ಮುಂದಾಗಿರುವ ಕಾರಣ 20 ಟನ್‌ಗೂ ಹೆಚ್ಚು ಮಾರಾಟವಾಗುತ್ತಿದೆ. ಹೋಟೆಲ್, ತಿನಿಸು ತಯಾರಿಕಾ ಘಟಕಗಳು ಹಾಗೂ ಗೃಹ ಬಳಕೆದಾರರು ಹೆಚ್ಚಿನ ಪ್ರಮಾಣದಲ್ಲಿಎಣ್ಣೆ ಸಂಗ್ರಹ ಮಾಡುತ್ತಿರುವುದು ಕಂಡುಬರುತ್ತಿದೆ.

**ಬೆಲೆ ಏರಿಕೆ:** ಕಳೆದ ವಾರದಲ್ಲಿ ಸನ್‌ಫ್ಲವರ್ ಎಣ್ಣೆ ಹಾಗೂ ಪಾಮ್ ಎಣ್ಣೆ ದರದಲ್ಲಿ ಗಮನಾರ್ಹ ಏರಿಕೆ ಕಂಡುಬಂದಿದೆ. ಹತ್ತು ದಿನದ ಹಿಂದೆ ಸನ್‌ಫ್ಲವರ್‌ಎಣ್ಣೆ ಲೀಟರ್‌ಗೆ 165 ರೂ.ಇದ್ದದ್ದು ಈಗ 178 ರೂ.ಗೆ ಏರಿಕೆಯಾಗಿದೆ. ಅದೇ ರೀತಿ ಪಾಮ್ ಎಣ್ಣೆ ಲೀಟರ್‌ಗೆ 134 ರೂ. ಇದ್ದದ್ದು ಈಗ 146 ರೂ.ಗೆ ತಲುಪಿದೆ. ಮಾರುಕಟ್ಟೆ ತಜ್ಞರ ಪ್ರಕಾರ ಯುದ್ಧ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಬೆಲೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ.



**ದಾಸ್ತಾನು ಕೇವಲ 15 ದಿನ**

**ಪ್ರಾದೇಶಿಕ ವಿತರಣೆ ಕೇಂದ್ರಗಳಲ್ಲಿ ಸದ್ಯ 100 ಟನ್ ಸನ್‌ಫ್ಲವರ್‌ಎಣ್ಣೆ, 120 ಟನ್ ಪಾಮ್ ಎಣ್ಣೆ ದಾಸ್ತಾನು ಇದ್ದು, ಇದು ಗರಿಷ್ಠ 15 ದಿನಗಳವರೆಗೆ ಸಾಕಾಗಬಹುದು ಎನ್ನುತ್ತವೆ ಮೂಲಗಳು. ಕೆಲ ವರ್ಷಗಳ ಹಿಂದೆ ಉಕ್ರೇನ್-ರಷ್ಯಾ ಯುದ್ಧದ ಸಂದರ್ಭ ಸನ್‌ಫ್ಲವರ್‌ಎಣ್ಣೆಯ ಬೆಲೆ ಲೀಟರ್ ಗೆ 200 ರೂ.ದಾಟಿತ್ತು. ಈಗಲೂ ಅಂತಹ ಪರಿಸ್ಥಿತಿ ಉಂಟಾಗುವ ಭೀತಿ ಮಾರುಕಟ್ಟೆಯಲ್ಲಿವ್ಯ ಕ್ತವಾಗಿದೆ.**

ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ ವ್ಯಾಪ್ತಿಗೊಳಪಡುವ ಐದು ಜಿಲ್ಲೆಗಳಲ್ಲಿ ನಿತ್ಯ ಅಂದಾಜು 10 ಟನ್‌ನಷ್ಟು ಸೂರ್ಯಕಾಂತಿ ಮತ್ತು ತಾಳೆ ಎಣ್ಣೆ ಮಾರಾಟವಾಗುತ್ತಿತ್ತು. ಸದ್ಯ 20 ಟನ್ ತಲುಪಿದೆ. ಸದ್ಯ ನಮ್ಮಲ್ಲಿ 15 ದಿನಕ್ಕಾಗುವಷ್ಟು ಎರಡೂ ಬಗೆಯ ಎಣ್ಣೆ ದಾಸ್ತಾನಿದ್ದು, ಅಲ್ಲಿಯವರೆಗೆ ಸಮಸ್ಯೆ ಇಲ್ಲ ಎನ್ನುತ್ತಾರೆ ಲಿಂಗರಾಜ್ ಎಲ್.ಆರ್. ಸಲಹೆಗಾರ, ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ, ರಾಯಚೂರು

ಒಂದೆಡೆ ಸಿಲಿಂಡರ್ ಅಭಾವ ಉಂಟಾಗುತ್ತಿದೆ. ಮತ್ತೊಂದೆಡೆ ಸೂರ್ಯಕಾಂತಿ, ತಾಳೆ ಎಣ್ಣೆ ಬೆಲೆಯೂ ಏರಿಕೆಯಾಗುತ್ತಿದೆ. ಹಾಗಾಗಿ, ನಮ್ಮ ಹೋಟೆಲ್‌ನಲ್ಲಿ ಹೆಚ್ಚು ಬೇಡಿಕೆ ಇರುವ ಉಪಾಹಾರವನ್ನು ಮಾತ್ರ ತಯಾರಿಸುವತ್ತ ಗಮನಹರಿಸುವಂತಾಗಿದೆ. ಮುಂಜಾಗ್ರತಾ ಕ್ರಮವಾಗಿ ನಮಗೆ ಅಗತ್ಯವಿರುವಷ್ಟು ಎಣ್ಣೆಯನ್ನು ದಾಸ್ತಾನು ಮಾಡಿಕೊಳ್ಳಲಾಗುತ್ತಿದೆ ಎಂದಿದ್ದಾರೆ ಲಕ್ಷ್ಮೀನಾರಾಯಣ ಕೇಕುಡ ಹೋಟೆಲ್ ಉದ್ಯಮಿ, ರಾಯಚೂರು.

**ಜಿಲ್ಲಾವಾರು ಮಾರಾಟ ಮಳಿಗೆಗಳು**

**ರಾಯಚೂರಿನಲ್ಲಿಅಡುಗೆ ಎಣ್ಣೆ ಮಾರಾಟ ಮಾಡುವ 12 ಕೇಂದ್ರ, 10 ಫ್ರಾಂಚೈಸಿ, ಬೀದರ್ 1 ಸಫಲ್ ಹೌಸ್, ಕಲಬುರಗಿ 3 ಮಾರಾಟ ಕೇಂದ್ರ ಮತ್ತು 4 ಫ್ರಾಂಚೈಸಿ, ಕೊಪ್ಪಳ 5 ಮಾರಾಟ ಕೇಂದ್ರ ಹಾಗೂ 3 ಫ್ರಾಂಚೈಸಿ, ಯಾದಗಿರಿಯಲ್ಲಿ3 ಮಾರಾಟ ಕೇಂದ್ರ ಮತ್ತು 5 ಫ್ರಾಂಚೈಸಿಗಳಿದ್ದು, ಇವುಗಳ ಮೂಲಕ ನಿತ್ಯ ಬೇಡಿಕೆಗನುಗುಣವಾಗಿ ಗ್ರಾಹಕರನ್ನು ತಲುಪುತ್ತಿವೆ. ಒಟ್ಟಾರೆ, ಯುದ್ಧ ಪರಿಸ್ಥಿತಿ ಮುಂದುವರಿದರೆ ಅಡುಗೆ ಎಣ್ಣೆ ದರದಲ್ಲಿ ಮತ್ತಷ್ಟು ಏರಿಕೆ ಹಾಗೂ ಕೊರತೆ ಉಂಟಾಗುವ ಸಾಧ್ಯತೆ ಇರುವುದರಿಂದ ಮಾರುಕಟ್ಟೆಯಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.**

## ರೈತರ ಹಿತದೃಷ್ಟಿಯಿಂದ ಏ.15ರವರೆಗೆ ಕಾಲುವೆಗೆ ನೀರು ಹರಿಸಿ: ತಿರುಪತಿ ಎಸ್.ಮ್ಯಾಗೇರಿ ಆಗ್ರಹ

• **ಉದಯವಾಹಿನಿ ಕೆಂಭಾವಿ**

ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನಲ್ಲಿ ರೈತರು ಬೆಳೆದಿರುವ ಬೆಳೆಗಳು ಕೈಗೆ ಬರುವ ಹಂತದಲ್ಲಿದ್ದು, ಬೆಳೆ ರಕ್ಷಣೆಗಾಗಿ ಕಾಲುವೆಗಳಿಗೆ ಏಪ್ರಿಲ್ 15ರವರೆಗೆ ನಿರಂತರವಾಗಿ ನೀರು ಹರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕೆಂಭಾವಿ ಹೋಬಳಿ ಘಟಕ ಅಧ್ಯಕ್ಷ ತಿರುಪತಿ ಎಸ್. ಮ್ಯಾಗೇರಿ ಆಗ್ರಹಿಸಿದ್ದಾರೆ.



ಈಗಾಗಲೇ ಅನ್ನದಾತರು ಎಪಿಎಂಸಿ ಮತ್ತು ಬ್ಯಾಂಕುಗಳಲ್ಲಿ ಸಾಲ ಮಾಡಿ, ರಾಸಾಯನಿಕ ಗೊಬ್ಬರ ಹಾಗೂ ಬೀಜಗಳಿಗಾಗಿ ಸಾವಿರಾರು ರೂಪಾಯಿ ಖರ್ಚು ಮಾಡಿದ್ದಾರೆ. ಪ್ರಸ್ತುತ ಹೊಲಗಳಲ್ಲಿನ ಬೆಳೆಗಳು ಕಾಳು ಕಟ್ಟುವ (Milk stage/Grain filling) ಅತ್ಯಂತ ನಿರ್ಣಾಯಕ ಹಂತದಲ್ಲಿವೆ. ಈ ಸಮಯದಲ್ಲಿ ಸಮರ್ಪಕವಾಗಿ ನೀರು ದೊರೆಯದಿದ್ದರೆ, ಕಾಳುಗಳು ಜೊಳ್ಳಾಗಿ ಇಡೀ ವರ್ಷದ ಶ್ರಮ ವ್ಯರ್ಥವಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

**ಐಸಿಸಿ ಸಭೆಯ ನಿರ್ಣಯಕ್ಕೆ ವಿರೋಧ:** ಐಸಿಸಿ (ನೀರಾವರಿ ಸಲಹಾ ಸಮಿತಿ) ಸಭೆಯಲ್ಲಿ ವಾರಾಬಂದಿ ಪದ್ಧತಿಯನ್ನು ಅನುಸರಿಸಿ ಏಪ್ರಿಲ್ 3ರವರೆಗೆ ಮಾತ್ರ ನೀರು ಹರಿಸಲು ನಿರ್ಧರಿಸಲಾಗಿದೆ. ಈ ನಿರ್ಧಾರವು ಅವೈಜ್ಞಾನಿಕವಾಗಿದ್ದು, ಇದರಿಂದ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಕೂಡಲೇ ಈ ಆದೇಶವನ್ನು ಬದಲಿಸಿ, ಏಪ್ರಿಲ್ 15ರವರೆಗೆ ಮುಖ್ಯ ಕಾಲುವೆ ಹಾಗೂ ಉಪ ಕಾಲುವೆಗಳಿಗೆ ನಿರಂತರವಾಗಿ ನೀರು ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ಒಂದು ವೇಳೆ ನೀರಾವರಿ ಇಲಾಖೆ ಮತ್ತು ಸರ್ಕಾರ ರೈತರ ಮನವಿಗೆ ಸ್ಪಂದಿಸದಿದ್ದರೆ, ಕೇವಲ ಪತ್ರಿಕಾ ಹೇಳಿಕೆಗೆ ಸೀಮಿತವಾಗದೆ, ಅಚ್ಚುಕಟ್ಟು ಪ್ರದೇಶದ ಸಾವಿರಾರು ರೈತರನ್ನು ಸಂಘಟಿಸಿ ನೀರಾವರಿ ಕಚೇರಿ ಮುಂದೆ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ..

## ಕುಸುಬೆ ಬೆಲೆ ಕುಸಿತ: ಸಂಕಷ್ಟಕ್ಕೀಡಾದ ಬೆಳೆಗಾರ

• **ಉದಯವಾಹಿನಿ ಲಕ್ಷ್ಮೇಶ್ವರ**

ಶೇಂಗಾ, ಎಳ್ಳು, ಸೂರ್ಯಕಾಂತಿ ನಂತರ ಕುಸುಬೆ ಎಣ್ಣೆ ಬೆಳೆಗಳಲ್ಲಿ ಪ್ರಮುಖವಾಗಿದೆ. ಪ್ರತಿವರ್ಷ ನೂರಾರು ಹೆಕ್ಟೇರ್‌ಗಳಲ್ಲಿ ಇದನ್ನು ಬೆಳೆಯಲಾಗುತ್ತದೆ. ಆದರೆ ಇದೀಗ ಅದರ ಬೆಲೆ ಕುಸಿದಿದ್ದು ಕಷ್ಟಪಟ್ಟು ಬೆಳೆದ ರೈತ ಕಂಗಲಾಗುವ ಸ್ಥಿತಿ ಎದುರಾಗಿದೆ.

ಎಣ್ಣೆ ಬೆಲೆ ಹೆಚ್ಚಳದಿಂದಾಗಿ ಎಣ್ಣೆಕಾಳು ಬೆಳೆಗಳಿಗೆ ಉತ್ತಮ ಬೆಲೆ ಸಿಗುತ್ತಿದೆ ಎಂಬ ಕಾರಣಕ್ಕಾಗಿ ರೈತರು ಹೆಚ್ಚಿನ ಕ್ಷೇತ್ರದಲ್ಲಿ ಕುಸುಬೆ ಬೆಳೆದಿದ್ದಾರೆ. ಆದರೆ ಬೆಳೆ ಮಾರುಕಟ್ಟೆಗೆ ಬರುತ್ತಲೇ ಬೆಲೆ ಕುಸಿತ ಆಗಿದ್ದು ರೈತರಿಗೆ ಸಂಕಷ್ಟ ತಂದಿದೆ.

ತಾಲ್ಲೂಕಿನ ಮಾಡಳ್ಳಿ, ಯತ್ತಿನಹಳ್ಳಿ, ಯಳವತ್ತಿ, ಗೊಜನೂರು, ಶಿಗ್ಲಿ, ಅಡರಕಟ್ಟಿ, ರಾಮಗೇರಿ, ಬಸಾಪುರ, ದೊಡ್ಡೂರು, ಗೋವನಾಳ ಭಾಗದ ಕಪ್ಪು ಮಣ್ಣಿನ 1,150 ಹೆಕ್ಟೇರ್‌ನಲ್ಲಿ ಕುಸುಬೆ ಬೆಳೆಯಲಾಗಿದೆ. ಎಕರೆಗೆ ಕನಿಷ್ಠ 5 ಕ್ವಿಂಟಲ್ ಇಳುವರಿ ಬರುತ್ತದೆ. ಮಾರುಕಟ್ಟೆಯಲ್ಲಿ ಕುಸುಬೆ ಎಣ್ಣೆಗೆ ಯಾವಾಗಲೂ ಬೇಡಿಕೆ ಇರುತ್ತದೆ. ಹೀಗಾಗಿ ತಪ್ಪದೇ ಇದನ್ನು ರೈತರು ಬೆಳೆಯುತ್ತಾರೆ. ಫೆಬ್ರುವರಿಯಲ್ಲಿ ಕ್ವಿಂಟಲ್‌ಗೆ ರೂ.8,000ಕ್ಕಿಂತ ಹೆಚ್ಚು ದರದಲ್ಲಿ ಕುಸುಬೆ ಮಾರಾಟ ಆಗಿತ್ತು. ಆದರೆ ಸದ್ಯ ಕ್ವಿಂಟಲ್‌ಗೆ ರೂ. 4,800ರಿಂದ 5,000ವರೆಗೆ ದರ ಇದೆ. ಇದು ರೈತರಲ್ಲಿ ಆತಂಕ ಮೂಡಿಸಿದೆ.



ಉದಯವಾಹಿನಿ ಚಿತ್ರ

ಪ್ರತಿಕೂಲ ವಾತಾವರಣದಿಂದಾಗಿ ಈ ವರ್ಷ ಇಳುವರಿ ಕಡಿಮೆ ಬಂದಿದೆ. ಅದರೊಂದಿಗೆ ಬೆಲೆಯೂ ಕುಸಿದಿರುವುದು ಬೆಳೆಗಾರರನ್ನು ಚಿಂತೆಗೀಡು ಮಾಡಿದೆ. ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಕುಸಿತ ಕಂಡಾಗ ರೈತರು ಅನುಭವಿಸುವ ನಷ್ಟ ತಪ್ಪಿಸಲು ಸರ್ಕಾರ ಬೆಂಬಲ ಘೋಷಿಸುತ್ತದೆ. ಅದರಂತೆ ಈ ವರ್ಷ ಕೂಡ ಪ್ರತಿ ಕ್ವಿಂಟಲ್‌ಗೆ 6,540 ಬೆಂಬಲ ಬೆಲೆ ನಿಗದಿ ಮಾಡಿದೆ. ಆದರೆ ಖರೀದಿ ಕೇಂದ್ರ ಮಾತ್ರ ಇನ್ನೂ ಆರಂಭವಾಗಿಲ್ಲ. ಸಾಲ ಮಾಡಿ ಬೆಳೆ ಬೆಳೆದ ಅನ್ನದಾತ ಹಣದ ಅಡಚಣೆಗಾಗಿ ಸಿಕ್ಕಷ್ಟು ಬೆಲೆಗೆ ಮಾರಾಟ ಮಾಡುವ ಸ್ಥಿತಿ ಇದೆ. ರೈತರ ಹಿತ ಕಾಯುವ ಸಲುವಾಗಿಯೇ ಸರ್ಕಾರ ಹತ್ತಾರು ಯೋಜನೆಗಳನ್ನು ಜಾರಿಗೆ ತರುತ್ತದೆ. ಅವುಗಳಲ್ಲಿ ಬೆಂಬಲ ಖರೀದಿ ಕೇಂದ್ರವೂ ಒಂದು. ಆದರೆ ರೈತರ ಬೆಳೆ ಮಾರಾಟಕ್ಕೆ ಬಂದಾಗ ಕೇಂದ್ರ ಶುರು ಆಗುವುದಿಲ್ಲ. ಇದರಿಂದಾಗಿ ಕೇಂದ್ರದ ಲಾಭದಿಂದ ಅವರು ವಂಚಿತರಾಗಬೇಕಾದ ಪರಿಸ್ಥಿತಿ ಇದೆ.

ಒಂದು ಎಕರೆಯಲ್ಲಿ ಕುಸುಬೆ ಬೆಳೆಯಲು ರೈತ ಬರೋಬ್ಬರಿ ರೂ. 10 ಸಾವಿರ ಖರ್ಚು ಮಾಡಿದ್ದಾನೆ. ಪ್ರತಿಕೂಲ ಹವಾಮಾನದಿಂದಾಗಿ ಈ ಬಾರಿ ಎಕರೆಗೆ 2 ಕ್ವಿಂಟಲ್‌ನಿಂದ 3 ಕ್ವಿಂಟಲ್‌ಗಳಷ್ಟು ಇಳುವರಿ ಮಾತ್ರ ಬಂದಿದೆ. ಈಗಿನ ದರದಲ್ಲಿ ಮಾರಾಟ ಮಾಡಿದರೆ ಮಾಡಿದ ಹಣವೂ ರೈತನಿಗೆ ಸಿಗುವುದಿಲ್ಲ. ಕಾರಣ ಬೆಂಬಲ ಬೆಲೆಯಲ್ಲಿ ಕುಸುಬೆಯನ್ನು ಖರೀದಿಸಬೇಕು ಎಂದು ಆಗ್ರಹಿಸಿದರು.

## ಲೋಕೋಪಯೋಗಿ ಸಚಿವರ ಮನೆಗೆ ಮುತ್ತಿಗೆ: ನರಿಬೋಳ ಎಚ್ಚರಿಕೆ

• **ಉದಯವಾಹಿನಿ ಕಲಬುರಗಿ**

ಜೇವರ್ಗಿ ತಾಲ್ಲೂಕಿನ ನರಿಬೋಳ ಚಾಮನೂರಿನ ಸೇತುವೆ ಕೆಲಸ ಕಂಪನಿಯ ನಿರ್ಲಕ್ಷ್ಯದಿಂದ ಹಲವರು ವರ್ಷಗಳಿಂದ ಸ್ಥಗಿತಗೊಂಡಿತ್ತು. ಇನ್ನೇನು ಕೆಲಸ ಪ್ರಾರಂಭವಾಗಬೇಕಿದ್ದ ಸಂದರ್ಭದಲ್ಲಿ ಬಂದ ಪ್ರವಾಹಕ್ಕೆ ಸ್ಲ್ಯಾಬ್‌ಗಳು ನದಿಯಲ್ಲಿ ಬಿದ್ದವು. ಆ ಸಂದರ್ಭದಲ್ಲಿ ಅಧಿಕಾರಿಗಳು ಗ್ರಾಮಸ್ಥರ ಜೊತೆ ಚರ್ಚಿಸಿ ಹಾನಿಯನ್ನು ಕಂಪನಿಯಿಂದ ವಸೂಲಿ ಮಾಡುತ್ತೇವೆ. ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡುತ್ತೆವೆ ಎಂದು ತಿಳಿಸಿದ್ದರು.

ಆದರೆ ಹಾನಿ ವಸೂಲಿಗೆ ಸರ್ಕಾರದ ಮುಖ್ಯ ಇಂಜಿನಿಯರ್ ಅವರಿಗೆ ಸೂಚಿಸಿದ್ದು ಕಂಪನಿ ಕಪ್ಪು ಪಟ್ಟಿಗೆ ಸೇರಿಸುವ ಕುರಿತಂತೆ ಯಾವುದೆ ಬೆಳವಣಿಗೆ ಕಂಡು ಬರುತ್ತಿಲ್ಲ. ಕೂಡಲೆ ಕಂಪನಿ ಕಪ್ಪು ಪಟ್ಟಿಗೆ ಸೇರಿಸುವ ನಿರ್ಧಾರ ಕೈಗೊಂಡು ಅಪೂರ್ಣಗೊಂಡಿರುವಂತಹ ಸೇತುವೆ ಕೇಲಸ ಪ್ರಾರಂಭಿಸಬೇಕು ನಿರ್ಲಕ್ಷಿಸಿದರೆ ಲೋಕೋಪಯೋಗಿ ಸಚಿವರ ಬೆಂಗಳೂರಿನ ಮನೆಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್. ಪಾಟೀಲ ನರಿಬೋಳ ಎಚ್ಚರಿಸಿದ್ದಾರೆ.

## ಸಮಾಜದಲ್ಲಿ ಮಹಿಳೆಯರಿಗೆ ಜವಾಬ್ದಾರಿ ಹೆಚ್ಚು

• **ಉದಯವಾಹಿನಿ ವಿಜಯಪುರ**

ಸಮಾಜದ ಅಂಕು-ಡೊಂಕು ತಿದ್ದುವಲ್ಲಿ ಮಹಿಳೆಯರ ಜವಾಬ್ದಾರಿ ಅತ್ಯಂತ ಪ್ರಮುಖವಾಗಿದೆ ಎಂದು ರಾಷ್ಟ್ರೀಯ ಉಜ್ವಲಾ ಸಂಸ್ಥೆಯ ಮುಖ್ಯಸ್ಥೆ ಸುನಂದಾ ತೊಳಬಂದಿ ಹೇಳಿದರು. ನಗರದ ಕೃಷ್ಣ-ವಾದಿರಾಜ ಮಠದಲ್ಲಿ ಅಖಿಲ ಭಾರತ ಮಧ್ವ ಮಹಾ ಮಂಡಳ ಸಹಕಾರದೊಂದಿಗೆ ಹಮ್ಮಿಕೊಂಡ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮಹಿಳೆಯರು ಅಬಲೆಯರಲ್ಲ ಸಬಲೆಯರು ಎಂದು ಹೆಮ್ಮೆಯಿಂದ ಹೇಳುವ ಕಾಲ ಇದು. ದಶ ದಿಕ್ಕುಗಳಲ್ಲಿಯೂ ಮಹಿಳೆಯರ ಸಾಧನೆ ಕುರಿತು ಚರ್ಚೆ ನಡೆಯುತ್ತಿರುವುದೆ ಇದಕ್ಕೆ ಪ್ರತ್ಯಕ್ಷ ಸಾಕ್ಷಿ ಎಂದು ಅವರು ವಿವರಿಸಿದರು. ಜಿಲ್ಲಾ ಮಕ್ಕಳ ರಕ್ಷಣಾ ಸಮೀತಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರುವ ಸುನಂದಾ ಮಹಿಳೆ ಮತ್ತು ಮಕ್ಕಳ ರಕ್ಷಣೆಗಾಗಿ ಸರಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ. ಅವುಗಳ ಮೂಲಕ ಪ್ರತಿಭೆಗಳು ಹೊರಬರಬೇಕೆಂದು ಕರೆ ನೀಡಿದರು. ಮಹಿಳೆಯರು ಸ್ವಯಂ ರಕ್ಷಣೆಗೆ ಕರಾಟೆಯಂತಹ ಸಾಧನೆಗಳನ್ನು ಅರಿಯಬೇಕೆಂದರು.

## ಸಿಲಿಂಡರ್ ಪೂರೈಕೆ ಸ್ಥಗಿತ ಆತಿಥ್ಯ ವಲಯಕ್ಕೆ ಸಮಸ್ಯೆ

• **ಉದಯವಾಹಿನಿ ದಾಂಡೇಲಿ**

ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಸ್ಥಗಿತಗೊಂಡ ಕಾರಣಕ್ಕೆ ತಾಲ್ಲೂಕಿನ ರೆಸಾರ್ಟ್ ಹಾಗೂ ಹೋಂ ಸ್ಟೇಗಳಿಗೆ ಸಮಸ್ಯೆ ಎದುರಾಗಿದೆ. ಸಿಲಿಂಡರ್ ಕೊರತೆಯಿಂದ ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡಿರುವ ಅತಿಥಿಗಳಿಗೆ ಊಟೋಪಚಾರಕ್ಕೆ ಸಮಸ್ಯೆ ಉಂಟಾಗಿದೆ. ಕಾಳಿ ನದಿಯ ಜಲಕ್ರೀಡೆ ಆಡಲು ದಾಂಡೇಲಿ ಕಡೆ ಪ್ರವಾಸಿಗರ ಮುಖ ಮಾಡಿದ್ದಾರೆ. ಆದರೆ, ಊಟ ಉಪಚಾರ ಪೂರೈಸಲು ಸಿಲಿಂಡರ್ ಕೊರತೆಯಿಂದಾಗಿ ರೆಸಾರ್ಟ್‌ಗಳು ತಮ್ಮ ಅತಿಥಿಗಳನ್ನು ಕಳೆದುಕೊಳ್ಳುವ ಆತಂಕ ಉಂಟಾಗಿದೆ. ವಾರಾಂತ್ಯದಲ್ಲಿ ಅತಿ ಹೆಚ್ಚು ಅತಿಥಿಗಳು ರೆಸಾರ್ಟ್ ಹಾಗೂ ಹೋಂ ಸ್ಟೇಗಳಿಗೆ ಭೇಟಿ ನೀಡುತ್ತಾರೆ. ಏಕಾಏಕಿ ವಾಣಿಜ್ಯ ಬಳಕೆ ಸಿಲಿಂಡರ್ ಸ್ಥಗಿತ ಗೊಳಿಸಿರುವುದರಿಂದ ಅಡುಗೆ ಮಾಡಲು ಪರದಾಡುವ ಸ್ಥಿತಿ ಉಂಟಾಗಿದೆ. ಮುಂಗಡ ಬುಕ್ಕಿಂಗ್ ಮಾಡಿದ ಗ್ರಾಹಕರು ನೋಂದಣಿ ರದ್ದುಗೊಳಿಸುತ್ತಿದ್ದಾರೆ ಎಂದು ಹೋಂ ಸ್ಟೇ ಮಾಲೀಕ ಪ್ರಶಾಂತ ಬಿ. ಹೇಳಿದರು. ಎಣ್ಣೆಯಲ್ಲಿ ಕರಿಯುವ ಕಚೋರಿ, ವಡಾ, ಕಬಾಬ್, ಬಜ್ಜಿ ಮುಂತಾದ ತಿನಿಸುಗಳನ್ನು ಕೈಬಿಟ್ಟು ಮಂಡಕ್ಕಿ, ಗಿರ್‌ಮಿಟ್‌ನಂತಹ ತಿನಿಸುಗಳನ್ನು ತಯಾರಿಸಿ ಮಾಡಿ ಮಾರಾಟ ಮಾಡಬೇಕಿದೆ ಎಂದು ಸೋಮಾನಿ ವೃತ್ತದಲ್ಲಿನ ಹೋಟೆಲ್ ಮಾಲೀಕರೊಬ್ಬರು ಹೇಳಿದರು.

## ಮೊಬೈಲ್ ಬಿಟ್ಟು ಮಹಾಪುರುಷರ ಪುಸ್ತಕಗಳು ಓದಿ ಜೀವನ ಪಾವನವಾಗುತ್ತೇ; ಪೂಜ್ಯ ಡಾ.ಬಸವಲಿಂಗ ಅವಧೂತರು

• **ಉದಯವಾಹಿನಿ ಚಿಂಚೋಳಿ**

ಇಂದಿನ ಯುವಕರು,ಹಿರಿಯರು,ವಿದ್ಯಾರ್ಥಿಗಳು ಮೊಬೈಲ್ ಬಿಟ್ಟು ಮಹಾಪುರುಷರ ಮಹಾತ್ಮರ ಪುಸ್ತಕಗಳು ಓದಿದರೆ ಮಾತ್ರ ಜೀವನ ಪಾವನವಾಗುತ್ತದೆ ಎಂದು ದೇಗಲಮಡಿ ಬಸವಲಿಂಗ ಅವಧೂತ ಮಠದ ಪೀಠಾಧಿಪತಿ ಪರಮಪೂಜ್ಯ ಡಾ.ಬಸವಲಿಂಗ ಅವಧುತರು ಹೇಳಿದರು.

ತಾಲ್ಲೂಕಿನ ದೇಗಲಮಡಿಯ ಬಸವಲಿಂಗ ಅವಧೂತರ ಮಠದಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ಜಾತ್ರಾ ಮಹೋತ್ಸವದ 14ನೇ ರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ಜರುಗಿದ ನಂತರ ಧರ್ಮಸಭೆಯಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಅವರು,ಒಂದು ಕುಟುಂಬ ಸಂತೋಷವಾಗಿರಬೇಕೆಂದರೆ ಅತ್ತಿ,ಮಾವ,ಪತಿ,ಪತ್ನಿ ಮನೆಯಲ್ಲಿ ಒಬ್ಬರಿಗೊಬ್ಬರು ಆತ್ಮೀಯತೆಯಿಂದ ತಾಳ್ಮೆಯಿಂದ ಶಾಂತ ಮನೋಭವದಿಂದ ಇದ್ದರೆ ಕುಟುಂಬ ಸಂತೋಷದಿಂದ ಇರುತ್ತದೆ.

ಯಾವಾಗಲು ಬುದ್ಧಿವಂತರ ಜೊತೆ ಬೇರೆತೂ ಇದ್ದರೆ ಬುದ್ಧಿವಂತರಾಗುತ್ತೀರಿ ಇಲ್ಲದಿದ್ದರೆ ಇಲ್ಲ,ಪ್ರಾಣಿ ಬಲಿ ಮಧ್ಯಪಾನ ಮಾಡುವುದು ಬಿಡಬೇಕು, ಮೂಢನಂಬಿಕೆಯಿಂದ ದೂರವಿರಬೇಕು, ಮನುಷ್ಯನಲ್ಲಿ ಶಿಸ್ತು ಏಕಾಗ್ರಹತೆಯಿಂದ ಇರಬೇಕು, ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ ಗುಣಮಟ್ಟದ ಶಿಕ್ಷಣ ಪಡೆದುಕೋಳ್ಳಬೇಕು, ಧೃಡವಾದ ನಿರ್ಧಾರ ಮಾಡಿ ಏಕಾಗ್ರಹತೆಯಿಂದ ದೇವರ ಧ್ಯಾನ ಮಾಡಿದರೆ ದೇವರು ಒಲಿಯುತ್ತಾನೆ.

ನಾವು ಮಾಡುವ ಕಾಯಕದಲ್ಲಿ ನಿಷ್ಠೆಯಿರಬೇಕು,ಸತ್ಯದ ದಾರಿಯಲ್ಲಿ ನಡೆಯಬೇಕು,ದುಶ್ಚಟಗಳಿಂದ ದೂರವಿರಬೇಕು,ಯಾರು ಕೂಡ ಜಾತಿಧರ್ಮ ಮಾಡದೆ ನಾವೇಲ್ಲರೂ ಒಂದೇ ಅನ್ನುವ ಭಾವನೆ ಇರಬೇಕು, ಜಾತಿ ಮನೆಯ ಅಂಗಳಕ್ಕೆ ಸೀಮಿತ ಮಾಡಿ ಹೊರಗಡೆ ನಾವೆಲ್ಲರೂ ಒಂದೇ ಜಾತಿಯವರು ಒಂದೇ ದೇಶದವರೆಂದು ಇರಬೇಕು,ಒಳ್ಳೆಯ ಸಂಕಲ್ಪ ಮಾಡಿ ಸತ್ಯದ ದಾರಿಯಲ್ಲಿ ನಾವೇಲ್ಲರು ನಡೆದರೆ ಎಲ್ಲವೂ ಒಳ್ಳೆದಾಗುತ್ತದೆ ಎಂದರು.



ಉದಯವಾಹಿನಿ ಚಿತ್ರ

ಇದಕ್ಕೂ ಮುಂಚೆ ಬೆಳಿಗ್ಗೆ ದೇಗಲಮಡಿ ವೀರಭದ್ರೇಶ್ವರ ದೇವಾಸ್ಥಾನದಿಂದ ಮಠದವರೆಗೆ ಬೃಹತ್ ಸಡಗರ ಸಂಭ್ರಮದಿಂದ ಪಲ್ಲಕಿ ಮೆರವಣಿಗೆ ನಡೆಯಿತು,ಸಾಯಂಕಾಲ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ 14ನೇ ರಥೋತ್ಸವವನ್ನು ವಿಜೃಂಭಣೆಯಿಂದ ಜೈಗುರುದೇವ ಜೈಗುರುದೇವ ಎಂದು ಜಯಘೋಷಗಳ ಸಾವಿರಾರು ಸಂಖ್ಯೆಯ ಭಕ್ತರ ಮಧ್ಯೆ ಜರುಗಿತ್ತು,ಧರ್ಮಸಭೆಯಲ್ಲಿ ಪರಮಪೂಜ್ಯ ಡಾ.ಬಸವಲಿಂಗ ಅವಧೂತರಿಗೆ ಸುಧಾ ಕುಟುಂಬದವರಿಂದ ಕಾಶಿಯಿಂದ ತರಿಸಿದ ರುದ್ರಾಕ್ಷಿಗಳಿಂದ ತುಲಾಭಾರ ಮಾಡಿದರು.

ಪ್ರಮುಖರು; ಶ್ರೀಮಂತ ಕಟ್ಟಿಮನಿ,ಲಕ್ಷ್ಮಣ ಆವುಂಟಿ, ದೇವೇಂದ್ರ ಕರಜಗಿ,ಶರಣುಗೌಡ ಮುದ್ದಾ,ಕೆ ಎಂ ಬಾರಿ, ಭೀಮಶೆಟ್ಟಿ ಮುರುಡ,ಅಶೋಕ ಮೋಗದಂಪೂರ,ಅಮರ ಲೋಡನೂರ, ಅವಿನಾಶ ಗೂಸುಲ, ಸತೀಶಪಾಟೀಲ,ಅನೇಕರಿದ್ದರು.

## ಕುಡಿಯುವ ನೀರಿನ ಪರಿಸ್ಥಿತಿ ನಿಭಾಯಿಸಲು ಅಗತ್ಯ ಕ್ರಮ

• **ಉದಯವಾಹಿನಿ ಬೆಳಗಾವಿ**

ಏಪ್ರಿಲ್ 15ರ ನಂತರ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆ ಇದೆ. ಪರಿಸ್ಥಿತಿ ನಿಭಾಯಿಸಲು ವಿವಿಧ ಜಲಮೂಲ ಗುರುತಿಸಬೇಕು. ಅಗತ್ಯವಿರುವ ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಜಲಮೂಲ ಗುರುತಿಸಲು ಮತ್ತು ಅಗತ್ಯವಿರುವ ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಲಭ್ಯವಾಗುವಂತೆ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಸೂಚಿಸಲಾಗಿದೆ. ಎಲ್ಲಾ ಗ್ರಾ.ಪಂಗಳು ಟ್ಯಾಂಕರ್ ಹೊಂದಿವೆ.

**ಟ್ಯಾಂಕರ್ ಮೂಲಕ ನೀರು ಪೂರೈಕೆ**

ಬಾಡಿಗೆಗೆ ಟ್ರ್ಯಾಕ್ಟರ್, ಎಂಜಿನ್‌ಗಳನ್ನಷ್ಟೇ ಅವು ಪಡೆಯಬೇಕಿದೆ. ಪ್ರಸ್ತುತ ನೀರಿನ ಕೊರತೆ ಇಲ್ಲ. ಆದರೆ, ಏಪ್ರಿಲ್ 15ರ ನಂತರ ಪರಿಸ್ಥಿತಿ ಗಂಭೀರವಾಗಬಹುದು ಎಂದರು. ಕುಡಿಯುವ ನೀರಿನ ಅಗತ್ಯತೆ ಪೂರೈಸಲು ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯ ಮತ್ತು ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯದಲ್ಲಿ ಬೇಡಿಕೆಯಷ್ಟು ನೀರಿನ ಲಭ್ಯತೆ ಇದೆ ಎಂದು ಹೇಳಿದರು.

**1 ಟಿಎಂಸಿ ಅಡಿ ನೀರು ತರಲು ಪ್ರಯತ್ನ:** ಹಿಪ್ಪರಗಿ ಬ್ಯಾರೇಜ್‌ನ 22ನೇ ಕ್ರಸ್ಟ್‌ಗೇಟ್ ಮುರಿದ ಪರಿಣಾಮ 2ರಿಂದ 3 ಟಿಎಂಸಿ ಅಡಿ ನೀರು ವ್ಯರ್ಥವಾಗಿ ಹರಿದುಹೋಗಿದೆ.



ಉದಯವಾಹಿನಿ ಚಿತ್ರ

ಕೃಷ್ಣಾ ನದಿಪಾತ್ರದಲ್ಲಿ ಇರುವ ಪಟ್ಟಣಗಳು ಮತ್ತು ಹಳ್ಳಿಗಳ ಕುಡಿಯುವ ನೀರಿನ ಅಗತ್ಯತೆ ಪೂರೈಸಲು ನಮಗೆ 1 ಟಿಎಂಸಿ ಅಡಿ ನೀರು ಬೇಕಾಗುತ್ತದೆ. ಹಾಗಾಗಿ ಮಹಾರಾಷ್ಟ್ರದಿಂದ ಕೃಷ್ಣಾ ನದಿಗೆ 1 ಟಿಎಂಸಿ ಅಡಿ ನೀರು ಬಿಡುಗಡೆಗೊಳಿಸಲು ಪ್ರಯತ್ನಿಸಲಾಗುವುದು. ಇದಕ್ಕಾಗಿ ಶೀಘ್ರವೇ ಮುಂಬೈಗೆ ನಿಯೋಗ ಭೇಟಿ ನೀಡಲಿದೆ' ಎಂದು ಹೇಳಿದರು. ಬೆಳಗಾವಿ ಮಹಾನಗರದಲ್ಲಿ ಸಿಟೀಸ್ 2.0 ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿ, ಸ್ಮಾರ್ಟ್‌ಸಿಟಿ ಯೋಜನೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಿತಿಗತಿ ಪರಿಶೀಲಿಸುತ್ತೇನೆ. ಯೋಜನೆ ಕಾರ್ಯಗತವಾಗುವಂತೆ ನೋಡಿಕೊಳ್ಳಲು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳಿದರು. ರಾಜ್ಯದ ವಿವಿಧೆಡೆ ಅಡುಗೆ ಅನಿಲ ಸಿಲಿಂಡರ್ ಅಭಾವದ ಸಮಸ್ಯೆ ತಲೆದೋರಿದೆ. ಅಡುಗೆ ಅನಿಲವನ್ನು ಎಲ್ಲರೂ ಮಿತವಾಗಿ ಬಳಸಬೇಕಿದೆ ಎಂದರು. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಇದ್ದರು.

# ವಾಣಿಜ್ಯ ಬಳಕೆಯ ಗ್ಯಾಸ್ ಏಜೆನ್ಸಿ ಮಾಲೀಕರೊಂದಿಗೆ ಸಭೆ

### ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಅನಿಲ ಪೂರೈಕೆಗೆ ಕ್ರಮ ವಹಿಸಿ- ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ

• **ಉದಯವಾಹಿನಿ ಉಡುಪಿ**

ಯುದ್ಧ ಸನ್ನಿವೇಶದ ಹಿನ್ನೆಲೆ, ಅನಿಲ ಕೊರತೆ ಉಂಟಾಗುತ್ತದೆ ಎಂದು ಸಾರ್ವಜನಿಕರು ಏಕಕಾಲದಲ್ಲಿ ಅನಿಲ ಸಂಪರ್ಕಕ್ಕೆ ಬುಕ್ಕಿಂಗ್ ಮಾಡುತ್ತಿದ್ದು, ಇದರಿಂದ ಬುಕ್ಕಿಂಗ್ ಕ್ರ್ಯಾಯಷ್ ಆಗುತ್ತಿದೆ. ಸಾರ್ವಜನಿಕ ಆಸ್ಪತ್ರೆಗಳು, ವಸತಿ ನಿಲಯಗಳು, ಗೃಹಬಳಕೆ, ಅತೀ ಅವಶ್ಯಕ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕಾ ಘಟಕಗಳು, ಸೇರಿದಂತೆ ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಆದ್ಯತೆಯ ಮೇಲೆ ಅನಿಲ ಪೂರೈಸಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಸೂಚನೆ ನೀಡಿದರು.

ಅವರು ನಗರದ ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಪ್ರಸ್ತುತ ಗೃಹ ಬಳಕೆಯ ಎಲ್‌ಪಿಜಿ ಗ್ಯಾಸ್ ಮತ್ತು ವಾಣಿಜ್ಯ ಬಳಕೆಯ ಗ್ಯಾಸ್ ಬಗ್ಗೆ ಗ್ಯಾಸ್ ಏಜೆನ್ಸಿ ಮಾಲೀಕರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮದಿಂದ ದೇಶದಲ್ಲಿ ಅಡುಗೆ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಬಹುದು ಎಂಬ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ವಂದತಿಗಳಿಗೆ ಜಿಲ್ಲೆಯ ಸಾರ್ವಜನಿಕರು ಕಿವಿಗೊಡದಂತೆ ಅವರುಗಳಿಗೆ ಪ್ರಸ್ತುತ ಸನ್ನಿವೇಶವನ್ನು ವಿವರಿಸಿ, ಅರಿವು ಮೂಡಿಸಬೇಕು. ಜಿಲ್ಲೆಯಲ್ಲಿ ಗೃಹಬಳಕೆ ಅಡುಗೆ ಅನಿಲದ ದಾಸ್ತಾನು ಸಾಕಷ್ಟು ಪ್ರಮಾಣದಲ್ಲಿದ್ದು, ಗ್ರಾಹಕರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ ಎಂಬುದನ್ನು ಗ್ರಾಹಕರುಗಳಿಗೆ ಮನದಟ್ಟು ಮಾಡಿಸಬೇಕು ಎಂದರು. ಬೇಡಿಕೆಯ ಭಾಗವನ್ನು ನಿರ್ವಹಿಸಲು ಪ್ರತಿ ಗ್ರಾಹಕರಿಗೆ ಕೊನೆಯ ಮರುಪೂರಣದ ದಿನಾಂಕದಿಂದ 25 ದಿನಗಳವರೆಗೆ ಇಂಟರ್-ಬುಕಿಂಗ್ ಅವಧಿಯನ್ನು ನಿಗದಿಪಡಿಸಲಾಗಿದೆ.



ಉದಯವಾಹಿನಿ ಚಿತ್ರ

**ಜಿಲ್ಲೆಯಲ್ಲಿ ಹೆಚ್ಚು ಗೃಹ ಬಳಕೆದಾರರು ಎರಡು ಅನಿಲ ಸಂಪರ್ಕ ಹೊಂದಿದ್ದು, ಏಕ ಸಿಲಿಂಡರ್ ಹೊಂದಿದ್ದವರಿಗೆ ಆದ್ಯತೆಯ ಮೇಲೆ ಅನಿಲ ಪೂರೈಕೆ ಮಾಡಬೇಕು. ಅನಿಲದ ಮಿತ ಬಳಕೆಯ ಬಗ್ಗೆ ಸಾರ್ವಜನಿಕರು, ಸಂಘ-ಸಂಸ್ಥೆಗಳು ಮತ್ತು ಇತರರಿಗೆ ಜಾಗೃತಿ ಮೂಡಿಸಬೇಕು. ಆರೋಗ್ಯ, ವಾಣಿಜ್ಯ, ಕೈಗಾರಿಕೆ, ಇಂಧನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಸಾರಿಗೆ, ಪೊಲೀಸ್ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘ-ಸಂಸ್ಥೆಗಳಿಗೆ ಅಗತ್ಯವಿರುವ ಅನಿಲ ಸಿಲಿಂಡರ್‌ಗಳ ಬೇಡಿಕೆಯ ಪಟ್ಟಿಯನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಸಲ್ಲಿಸುವಂತೆ ಸೂಚಿಸಿದರು. -ಡಿಸಿ**

ಈ ಬಗ್ಗೆ ಆಹಾರ ಇಲಾಖೆ ಸಾರ್ವಜನಿಕರಿಗೆ ಮಾಹಿತಿ ಪ್ರಚುರಪಡಿಸಬೇಕು ಎಂದ ಅವರು, ಜಿಲ್ಲೆಯ ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ಪೂರೈಕೆಯಲ್ಲಿ ಸಮಸ್ಯೆಯಾಗದಂತೆ ನೋಡಿ ಕೊಳ್ಳಬೇಕು ಎಂದರು.

ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಅನಿಲ ಪೂರೈಕೆ ಕುರಿತು ಸಾರ್ವಜನಿಕ ಜಾಲತಾಣಗಳ ಮೂಲಕ ತಪ್ಪು ಸಂದೇಶಗಳನ್ನು ಹರಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದ ಅವರು, ಸಾರ್ವಜನಿಕರು ತೊಂದರೆಗಳನ್ನು ನಿವಾರಿಸಲು ಸಹಾಯವಾಣಿ ಸಂಖ್ಯೆಯನ್ನು 112 ಪ್ರಚಾರ ಪಡಿಸುವುದರೊಂದಿಗೆ ಸ್ವೀಕರಿಸಿದ ದೂರುಗಳನ್ನು ತಕ್ಷಣವೇ ಪರಿಹರಿಸುವಂತೆ ತಿಳಿಸಿದರು.

**ಕಂಪನಿಗಳ ಸಹಕಾರ ಅತ್ಯಗತ್ಯ**

ಗೃಹ ಬಳಕೆ ಹಾಗೂ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಕಾಳಸಂತೆಯಲ್ಲಿ ಮಾರಾಟ, ಸಂಗ್ರಹಣೆ, ಶೇಖರಣೆ ಹಾಗೂ ಸಾಗಾಣಿಕೆ ಮಾಡುವುದು ಕಂಡುಬಂದಲ್ಲಿ ಜಿಲ್ಲಾಡಳಿತದ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಅನಧಿಕೃತವಾಗಿ ಗ್ಯಾಸ್ ಸಿಲಿಂಡರ್‌ಗಳ ದಾಸ್ತಾನು, ಸಾಗಾಣಿಕೆ ಹಾಗೂ ರಿಫಿಲ್ಲಿಂಗ್ ಪ್ರಕರಣಗಳು ಕಂಡುಬಂದಲ್ಲಿ ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ಮಾತನಾಡಿ, ಅನಾವಶ್ಯಕವಾಗಿ ಜನರು ಗೃಹ ಬಳಕೆಯ ಅನಿಲಗಳನ್ನು ಆಟೋಮೊಬೈಲ್ ಗಳಿಗೆ ಬಳಸದಂತೆ ನೋಡಿಕೊಳ್ಳಬೇಕು. ಅನಿಲಗಳು ಕಾಳಸಂತೆಯಲ್ಲಿ ಮಾರಾಟ ಆಗದಂತೆ ನೋಡಿಕೊಳ್ಳಲು ಗ್ಯಾಸ್ ಏಜೆನ್ಸಿಯ ಸಪ್ಲೈಯರ್ಸ್, ಡೀಲರ್ಸ್ ಹಾಗೂ ಕಂಪನಿಗಳ ಸಹಕಾರ ಅತ್ಯಗತ್ಯ ಎಂದರು.

ಸಭೆಯಲ್ಲಿ ಆಹಾರ ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ರವೀಂದ್ರ, ಗ್ಯಾಸ್ ಏಜೆನ್ಸಿಯ ಮಾಲೀಕರುಗಳು, ಸರಬರಾಜುದಾರರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಪ್ರೇಮ್ ರಕ್ಷಿತ್ ಬೆನ್ನು ತಟ್ಟಿದ ಲೆಜೆಂಡರಿ

ಮೈಖಲ್ ಜಾಕ್ಸನ್ ಅವರಿಗಾಗಿ ನೃತ್ಯ ನಿರ್ದೇಶನ ಮಾಡುತ್ತಿದ್ದ ಹಾಲಿವುಡ್‌ನ ಲಿಜೆಂಡರಿ ನೃತ್ಯ ನಿರ್ದೇಶಕ ಅಥವಾ ಕೊರಿಯೋಗ್ರಾಫರ್ ಇದೀಗ ಭಾರತದ ಜನಪ್ರಿಯ ಕೊರಿಯೋಗ್ರಾಫರ್ ಪ್ರೇಮ್ ರಕ್ಷಿತ್ ಅವರ ಕೆಲಸ ನೋಡಿ ಮೆಚ್ಚಿ ಕೊಂಡಾಡಿದ್ದಾರೆ. ಅಲ್ಲದೆ, ಅವರನ್ನು ಭೇಟಿ ಮಾಡುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ.



'ಕಿಂಗ್ ಆಫ್ ಪಾಪ್' ಮೈಖಲ್ ಜಾಕ್ಸನ್, ಇಂದು ಲಿಜೆಂಡರಿ ಎನಿಸಿಕೊಂಡಿರುವ ಎಷ್ಟೋ ಮಂದಿ ಖ್ಯಾತ ಪಾಪ್ ತಾರೆಯವರಿಗೆ, ಡ್ಯಾನ್ಸ್ ಮಾಸ್ಟರ್‌ಗಳಿಗೆ ಗುರು.

ಅಂಥಹಾ ಮೈಖಲ್ ಜಾಕ್ಸನ್ ಅವರಿಗಾಗಿ ನೃತ್ಯ ನಿರ್ದೇಶನ ಮಾಡುತ್ತಿದ್ದ ಹಾಲಿವುಡ್‌ನ ಲಿಜೆಂಡರಿ ನೃತ್ಯ ನಿರ್ದೇಶಕ ಅಥವಾ ಕೊರಿಯೋಗ್ರಾಫರ್ ಇದೀಗ ಭಾರತದ ಜನಪ್ರಿಯ ಕೊರಿಯೋಗ್ರಾಫರ್ ಪ್ರೇಮ್ ರಕ್ಷಿತ್ ಅವರ ಕೆಲಸ ನೋಡಿ ಮೆಚ್ಚಿ ಕೊಂಡಾಡಿದ್ದಾರೆ. ಅಲ್ಲದೆ, ಅವರನ್ನು ಭೇಟಿ ಮಾಡುವ ಆಸೆಯನ್ನು ವ್ಯಕ್ತಪಡಿಸಿದ್ದಾರೆ.


'ಆರ್‌ಆರ್‌ಆರ್' ಸಿನಿಮಾದ 'ನಾಟು-ನಾಟು' ಹಾಡಿಗೆ ನೃತ್ಯ ನಿರ್ದೇಶನ ಮಾಡಿರುವ ಪ್ರೇಮ್ ರಕ್ಷಿತ್, ಇದೀಗ ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆಂಡ್ ಸೈನ್ಸ್ (ಆಸ್ಕರ್ಸ್)ನ ಸದಸ್ಯರಾಗಿದ್ದು, ಇದೇ ಸಂದರ್ಭದಲ್ಲಿ ಲಿಜೆಂಡರಿ ಕೊರಿಯೋಗ್ರಾಫರ್ ಆಗಿರುವ ವಿನ್ಸೆಂಟ್ ಪ್ಯಾಟರ್ಸನ್ ಅವರಿಂದ ವಿಡಿಯೋ ಸಂದೇಶ ಪಡೆದಿದ್ದು, ವಿನ್ಸೆಂಟ್ ಅವರು ಪ್ರೇಮ್ ರಕ್ಷಿತ್ ಅವರ ಪ್ರತಿಭೆಯನ್ನು ಕೊಂಡಾಡಿದ್ದಾರೆ. ವಿಡಿಯೋನಲ್ಲಿ ಮಾತನಾಡಿರುವ ವಿನ್ಸೆಂಟ್, 'ನಿಮ್ಮ ಕೆಲವನ್ನು ನಾನು ನೋಡಿದ್ದೀನಿ, ನೀವು ಸಿನಿಮಾಗಳಲ್ಲಿ ಮಾಡುತ್ತಿರುವ ಕೆಲಸವನ್ನು ನಾನು ಗೌರವಿಸುತ್ತೇನೆ, ಇಷ್ಟಪಡುತ್ತೇನೆ. ಅಲ್ಲದೆ, ನೀವು ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆಂಡ್ ಸೈನ್ಸ್‌ನ ಸದಸ್ಯ ಆಗಿರುವುದಕ್ಕೆ ನಾನು ಸಂತೋಷಪಡುತ್ತೇನೆ. ಸದ್ಯಕ್ಕೆ ನಾನು ಲಾಸ್ ಏಂಜಲ್ಸ್‌ನಲ್ಲಿದ್ದು, ನಿಮ್ಮನ್ನು ಭೇಟಿ ಆಗುವ ಕಾತರದಲ್ಲಿದ್ದೇನೆ. ಭಾರತದ ಯುವ ಡ್ಯಾನ್ಸ್ ಕೊರಿಯೋಗ್ರಾಫರ್‌ಗಳು ನನ್ನ ಮತ್ತು ನಿಮ್ಮ ಕೆಲಸದಿಂದ ಸ್ಫೂರ್ತಿ ಪಡೆಯುತ್ತಾರೆ. ನಮ್ಮಂತೆ ಅವರಿಗೂ ಸಾಧನೆ ಸಾಧ್ಯ ಎಂದು ಅರಿತುಕೊಳ್ಳುತ್ತಾರೆ ಎಂಬುದನ್ನು ನಂಬಿದ್ದೇನೆ' ಎಂದಿದ್ದಾರೆ.

ವಿನ್ಸೆಂಟ್ ಅವರು ಹಾಲಿವುಡ್‌ನ ಲಿಜೆಂಡರಿ ಕೊರಿಯೋಗ್ರಾಫರ್ ಆಗಿದ್ದಾರೆ. ಮೈಖಲ್ ಜಾಕ್ಸನ್ ಅವರೊಟ್ಟಿಗೆ ಹಲವು ವರ್ಷ ಅವರು ಕೆಲಸ ಮಾಡಿದ್ದರು. ಮೈಖಲ್ ಅವರ ಆಲ್ ಟೈಮ್ ಫೇವರೇಟ್ ಆಗಿರುವ 'ಸ್ಮೂತ್ ಕ್ರಿಮಿನಲ್' ಆಲ್ಬಂಗೆ ಕೊರಿಯೋಗ್ರಫಿ ಮಾಡಿದ್ದು ವಿನ್ಸೆಂಟ್. ಅದಕ್ಕೆ ಮುಂಚೆ ಮೈಖಲ್ ಅವರ 'ಬೀಟ್ ಇಟ್'ನಲ್ಲಿ ಡ್ಯಾನ್ಸರ್ ಆಗಿದ್ದರು.



# ಲಾವಣ್ಯಳಿಂದ ಸೂಪರ್ ಹಿಟ್ ಆದ ರಶ್ಮಿಕಾ

ನಟಿ ಲಾವಣ್ಯ ತ್ರಿಪಾಠಿ ಅವರ 'ಸತಿ ಲೀಲಾವತಿ' ಬಿಡುಗಡೆಗೆ ಸಿದ್ಧವಾಗಿದೆ. ಇತ್ತೀಚಿನ ಸಂದರ್ಶನವೊಂದರಲ್ಲಿ ಲಾವಣ್ಯ ತಮ್ಮ ವೃತ್ತಿಜೀವನದ ಬಗ್ಗೆ ಆಸಕ್ತಿದಾಯಕ ವಿಷಯ ರಿವೀಲ್ ಮಾಡಿದ್ದಾರೆ. ರಶ್ಮಿಕಾ ಮಂದಣ್ಣ ನಟಿಸಿ ಸೂಪರ್ ಹಿಟ್ ಆದ 'ಗೀತ ಗೋವಿಂದಂ' ಸಿನಿಮಾ ಅವಕಾಶ ಮೊದಲು ತಮಗೆ ಬಂದಿತ್ತು ಎಂದಿದ್ದಾರೆ. ಆ ಸಿನಿಮಾ ಹೇಗೆ ಕೈತಪ್ಪಿ ಹೋಯಿತು ಮತ್ತು ರಶ್ಮಿಕಾ ಯಶಸ್ಸು ಗಳಿಸಿದ್ದು ಹೇಗೆ ಎಂದು ಲಾವಣ್ಯ ವಿವರಿಸಿದ್ದಾರೆ. ಲಾವಣ್ಯ ತ್ರಿಪಾಠಿ ಮೆಗಾ ಪ್ರಿನ್ಸ್ ವರುಣ್ ತೇಜ್ ಅವರನ್ನು ಪ್ರೀತಿಸಿ ಮದುವೆಯಾದರು. ಅವರಿಗೆ ಗಂಡು ಮಗು ಜನಿಸಿತು. ಪ್ರಸ್ತುತ, ತನ್ನ ಮಗುವನ್ನು ಬೆಳೆಸುವಲ್ಲಿ ನಿರತರಾಗಿರುವ ಲಾವಣ್ಯ ಮೊದಲಿನಂತೆ ಹೆಚ್ಚು ಚಿತ್ರಗಳಲ್ಲಿ ನಟಿಸುತ್ತಿಲ್ಲ. ಅವರು ತಮಗೆ ಹೊಂದುವ ಸಿನಿಮಾಗಳನ್ನು ಮಾತ್ರ ಮಾಡುತ್ತಿದ್ದಾರೆ. ಮದುವೆಯ ನಂತರ ಲಾವಣ್ಯ ತ್ರಿಪಾಠಿ ಅವರ ಮೊದಲ ಚಿತ್ರ 'ಸತಿ ಲೀಲಾವತಿ' ಈಗ ಬಿಡುಗಡೆಗೆ ಸಿದ್ಧವಾಗಿದೆ. ಮಾರ್ಚ್ 06 ರಂದು ಬಿಡುಗಡೆಯಾಗಬೇಕಿದ್ದ ಈ ಚಿತ್ರವು ಸ್ವಲ್ಪ ಸಮಯದ ಹಿಂದೆ ಪೂರ್ಣಗೊಂಡಿತು. ಆದಾಗ್ಯೂ, ವಿವಿಧ ಕಾರಣಗಳಿಂದ ಅದು ಮುಂದೂಡಲ್ಪಟ್ಟಿತು. ಈ ಚಿತ್ರವು ಶೀಘ್ರದಲ್ಲೇ ಪ್ರೇಕ್ಷಕರ ಮುಂದೆ ಬಿಡುಗಡೆಯಾಗಲಿದೆ. ಈಗ ಅವರು ಒಂದು ವಿಷಯ ರಿವೀಲ್ ಮಾಡಿದ್ದಾರೆ.ಲಾವಣ್ಯ ಪ್ರಸ್ತುತ 'ಸತಿ ಲೀಲಾವತಿ' ಚಿತ್ರದ ಪ್ರಚಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಅವರು ಸತತವಾಗಿ ಚಾನೆಲ್‌ಗಳಿಗೆ ಸಂದರ್ಶನಗಳನ್ನು ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ,



ಅವರು ತಮ್ಮ ವೈಯಕ್ತಿಕ ಮತ್ತು ವೃತ್ತಿಪರ ಜೀವನದ ಬಗ್ಗೆ ಅನೇಕ ಆಸಕ್ತಿದಾಯಕ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಸಂದರ್ಶನವೊಂದರಲ್ಲಿ, ನಿರೂಪಕರೊಬ್ಬರು ಲಾವಣ್ಯ ಅವರಿಗೆ ಆಸಕ್ತಿದಾಯಕ ಪ್ರಶ್ನೆಯನ್ನು ಕೇಳಿದರು. 'ಯಾವುದೇ ಸಿನಿಮಾಗಳನ್ನು ತಿರಸ್ಕರಿಸಿದ ನಂತರ ನೀವು ಎಂದಾದರೂ ವಿಷಾದಿಸಿದ್ದೀರಾ' ಎಂಬ ಪ್ರಶ್ನೆಗೆ ಲಾವಣ್ಯ ಈ ಉತ್ತರವನ್ನು ನೀಡಿದರು.

'ನಾನು ಇಲ್ಲಿಯವರೆಗೆ ಸಿನಿಮಾಗಳನ್ನು ಹೆಚ್ಚು ತಿರಸ್ಕರಿಸಿಲ್ಲ ಮತ್ತು ಸಿನಿಮಾಗಳ ಬಗ್ಗೆ ನನಗೆ ಯಾವುದೇ ವಿಷಾದವಿಲ್ಲ. ನನ್ನ ವೃತ್ತಿಜೀವನದ ಆರಂಭದಲ್ಲಿ, ನಾನು ಒಂದು ಸಿನಿಮಾಗೆ ಬೇಡ ಅಂದಿದ್ದೆ. ನಾನು ಒಪ್ಪಿಕೊಂಡ ನಂತರವೂ ಆ ಸಿನಿಮಾದ ಅವಕಾಶವನ್ನು ಕಳೆದುಕೊಂಡೆ. ರಶ್ಮಿಕಾ ಆ ಚಿತ್ರದಲ್ಲಿ ನಟಿಸಿ ಯಶಸ್ಸನ್ನು ಗಳಿಸಿದರು.


# ನನಗೆ ಕನ್ನಡ ಚಿತ್ರರಂಗದಲ್ಲಿ ಅಪ್ಪು ಮೊದಲ ಫ್ರೆಂಡ್

ಸಾಯಿ ಪಲ್ಲವಿ, ಪುನೀತ್ ರಾಜ್‌ಕುಮಾರ್ ಅವರನ್ನು ಕನ್ನಡ ಚಿತ್ರರಂಗದಲ್ಲಿ ತಮ್ಮ ಮೊದಲ ಸ್ನೇಹಿತ ಎಂದು ಕರೆದು ಭಾವುಕರಾಗಿದ್ದಾರೆ. 'ಪ್ರೇಮಂ' ಬಳಿಕ ಪುನೀತ್ ಅವರು ತಮ್ಮನ್ನು ಅಭಿನಂದಿಸಿದ ಘಟನೆಯನ್ನು ನೆನಪಿಸಿಕೊಂಡಿದ್ದಾರೆ. ಅಪ್ಪು ಹುಟ್ಟುಹಬ್ಬದ ಸನಿಹದಲ್ಲಿ ಸಾಯಿ ಪಲ್ಲವಿ ಅವರ ಈ ವಿಡಿಯೋ ವೈರಲ್ ಆಗಿದೆ.

ಪುನೀತ್ ರಾಜ್‌ಕುಮಾರ್ ಹುಟ್ಟಿದ್ದು ಮಾರ್ಚ್ 17ರಂದು. ಅವರು ಇಂದು ನಮ್ಮ ಜೊತೆ ಇಲ್ಲ ಎಂಬ ನೋವು ಅಭಿಮಾನಿಗಳನ್ನು ಕಾಡಿದೆ. ಅವರು ಅನೇಕರಿಗೆ ಮಾದರಿ. ಕನ್ನಡದವರಿಗೆ ಮಾತ್ರವಲ್ಲ, ಪರಭಾಷೆಯವರಿಗೂ ಪುನೀತ್ ಅವರು ಇಷ್ಟ. ಅನುಪಮಾ ಪರಮೇಶ್ವರನ್, ಅದಾ ಶರ್ಮಾ ಸೇರಿದಂತೆ ಅನೇಕರು ಪುನೀತ್ ಬಗ್ಗೆ ಮೆಚ್ಚುಗೆ ಸೂಚಿಸಿದ್ದನ್ನು ನೀವು ಕಾಣಬಹುದು.

ಈಗ ಸಾಯಿ ಪಲ್ಲವಿ ಅವರ ಹೊಸ ವಿಡಿಯೋ ವೈರಲ್ ಆಗಿದೆ. ಸಾಯಿ ಪಲ್ಲವಿ ಅವರು ಇತ್ತೀಚೆಗೆ ಪುನೀತ್ ರಾಜ್‌ಕುಮಾರ್ ಬಗ್ಗೆ ಮಾತನಾಡಿದರು. ಸಂದರ್ಶನ ಒಂದರಲ್ಲಿ ಈ ಬಗ್ಗೆ ವಿವರಿಸಿದ್ದರು. 'ಈ ಇಂಡಸ್ಟ್ರಿಯಿಂದ ಮೊದಲು ಭೇಟಿ ಮಾಡಿದ್ದು ಅಂದರೆ ಅದು ಪುನೀತ್ ರಾಜ್‌ಕುಮಾರ್. ನಾನು, ಫಿಲ್ಮ್ ಫೇರ್ ಅವಾರ್ಡ್‌ನಲ್ಲಿ ಅವರು ಭೇಟಿ ಮಾಡಿದ್ದೆ. ನಾನು ಆಗತಾನೇ ಇಂಡಸ್ಟ್ರಿಗೆ ಬಂದಿದ್ದೆ. ಪ್ರೇಮಂ ಮಾಡಿದ್ದೆ' ಎಂದು ಅವರು ಹೇಳಿದ್ದರು.


'ನಾನು ಅವಾರ್ಡ್ ಫಂಕ್ಷನ್ನಿಂದ ತೆರಳುತ್ತಿದ್ದೆ. ಆಗ ಅವರು ಕರೆದು ಮಾತನಾಡಿಸಿದರು. ನಿಮ್ಮ ಸಿನಿಮಾ ನೋಡಿದೆ. ಸಿನಿಮಾ ಚೆನ್ನಾಗಿದೆ ಎಂದು ಅವರು ನನಗೆ ಹೇಳಿದ್ದರು' ಎಂಬುದಾಗಿ ಸಾಯಿ ಪಲ್ಲವಿ ವಿವರಿಸಿದ್ದರು.



# ಅಡ್ವಾನ್ಸ್ ಬುಕಿಂಗ್ 60 ಕೋಟಿ ರೂಪಾಯಿ ಕಲೆಕ್ಷನ್

ರಣವೀರ್ ಸಿಂಗ್ ನಟನೆಯ 'ಧುರಂಧರ್ 2' ಸಿನಿಮಾ ಮಾರ್ಚ್ 19ಕ್ಕೆ ತೆರೆಗೆ ಬರಲಿದ್ದು, ಮಾರ್ಚ್ 18ರ ಪ್ರೀಮಿಯರ್ ಶೋಗಳ ಅಡ್ವಾನ್ಸ್ ಬುಕಿಂಗ್ ದಾಖಲೆ ಬರೆದಿದೆ. ವಿಶ್ವಾದ್ಯಂತ 60 ಕೋಟಿ ರೂ. ಹಾಗೂ ಭಾರತದಲ್ಲಿ 24.4 ಕೋಟಿ ರೂ. ಗಳಿಕೆ ಕಂಡಿದೆ. ಪವನ್ ಕಲ್ಯಾಣ್ 'ಒಜಿ' ದಾಖಲೆ ಮುರಿಯುವ ಸನಿಹದಲ್ಲಿದೆ. ರಣವೀರ್ ಸಿಂಗ್ ನಟನೆಯ 'ಧುರಂಧರ್ 2' ಸಿನಿಮಾ ಹೊಸ ದಾಖಲೆ ಬರೆಯಲು ರೆಡಿ ಆಗಿದೆ. ಈ ಚಿತ್ರ ಮಾರ್ಚ್ 19ಕ್ಕೆ ತೆರೆಗೆ ಬರಲಿದೆ. ಅದಕ್ಕೂ ಹಿಂದಿನ ದಿನ ಅಂದರೆ ಮಾರ್ಚ್ 18ರಂದು ಸಿನಿಮಾಗೆ ಸಾಕಷ್ಟು ಪ್ರೀಮಿಯರ್ ಶೋಗಳನ್ನು ಆಯೋಜನೆ ಮಾಡಲಾಗಿದೆ. ಬೆಂಗಳೂರು, ಮುಂಬೈ ಸೇರಿದಂತೆ ಅನೇಕ ಕಡೆಗಳಲ್ಲಿ ಶೋ ಹೌಸ್‌ಫುಲ್ ಆಗಿದೆ. ಇದರಿಂದ ಸಿನಿಮಾಗೆ ದೊಡ್ಡ ಮೊಟ್ಟದಲ್ಲಿ ಹಣ ಹರಿದು ಬರುತ್ತಿದೆ. ಅಡ್ವಾನ್ಸ್ ಬುಕಿಂಗ್‌ನಿಂದ ಚಿತ್ರಕ್ಕೆ ವಿಶ್ವಾದ್ಯಂತ 60 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ. 'ಧುರಂಧರ್ 2' ಸಿನಿಮಾದ ಎಲ್ಲಾ ಟಿಕೆಟ್‌ಗಳನ್ನು ಬಿಡುಗಡೆ ಮಾಡಿಲ್ಲ. ಕೇವಲ ಮಾರ್ಚ್ 18ರ ಟಿಕೆಟ್‌ಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ.

ಮಾರ್ಚ್ 19ರ ಟಿಕೆಟ್‌ಗಳನ್ನು ಕೂಡ ಬುಕಿಂಗ್ ಮಾಡುವ ಅವಕಾಶ ನೀಡಿದರೆ ಸಿನಿಮಾ ಅಬ್ಬರಿಸೋದು ಫಿಕ್ಸ್ ಎಂದು ಹೇಳಲಾಗುತ್ತಿದೆ. ಈಗಾಗಲೇ ದೇಶಾದ್ಯಂತ 4.7 ಲಕ್ಷ ಟಿಕೆಟ್‌ಗಳು ಸೇಲ್ ಆಗಿವೆ. ಇದರಿಂದ ಭಾರತದಲ್ಲಿ 24.4 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ.



# 'ಉಸ್ತಾದ್ ಭಗತ್ ಸಿಂಗ್' ಇವೆಂಟ್‌ಗೆ ದಿನಾಂಕ ನಿಗದಿ

ರಣ್ವೀರ್ ಸಿಂಗ್ ನಟನೆಯ 'ಧುರಂಧರ್ 2' ಸಿನಿಮಾದ ಎದುರು 'ಉಸ್ತಾದ್ ಭಗತ್ ಸಿಂಗ್' ಬಿಡುಗಡೆ ಆಗುತ್ತಿದ್ದು, 'ಧುರಂಧರ್ 2'ಗೆ ಪೈಪೋಟಿ ನೀಡಲು ಭಾರಿ ಪ್ರಚಾರವನ್ನೇ ಚಿತ್ರತಂಡ ಮಾಡಬೇಕಿದೆ.

ಆದರೆ ಈ ವರೆಗೂ ಸಿನಿಮಾದ ಮುಖ್ಯ ಆಕರ್ಷಣೆಯಾಗಿರುವ ಪವನ್ ಕಲ್ಯಾಣ್ ಪ್ರಚಾರಕ್ಕೆ ಇಳಿದೇ ಇಲ್ಲ. ಆದರೆ ಇದೀಗ ಪವನ್ ಕಲ್ಯಾಣ್ ಆಗಮನಕ್ಕೆ ದಿನಾಂಕ ನಿಗದಿ ಆಗಿದ್ದು, ಸಿನಿಮಾದ ಅದ್ದೂರಿ ಪ್ರೀ ರಿಲೀಸ್ ಆಯೋಜನೆ ಮಾಡಲಾಗಿದೆ. ಪವನ್ ಕಲ್ಯಾಣ್ ನಟನೆಯ 'ಉಸ್ತಾದ್ ಭಗತ್ ಸಿಂಗ್' ಸಿನಿಮಾ ಮಾರ್ಚ್ 19ರಂದು ಬಿಡುಗಡೆ ಆಗಲಿದೆ. ಪವನ್ ಕಲ್ಯಾಣ್, ಆಂಧ್ರ ಪ್ರದೇಶದ ಡಿಸಿಎಂ ಆದ ಬಳಿಕ ಬಿಡುಗಡೆ ಆಗುತ್ತಿರುವ ಅವರ ಮೂರನೇ ಸಿನಿಮಾ ಇದಾಗಿದೆ. ರಣ್ವೀರ್ ಸಿಂಗ್ ನಟನೆಯ 'ಧುರಂಧರ್ 2' ಸಿನಿಮಾದ ಎದುರು 'ಉಸ್ತಾದ್ ಭಗತ್ ಸಿಂಗ್' ಬಿಡುಗಡೆ ಆಗುತ್ತಿದ್ದು, 'ಧುರಂಧರ್ 2'ಗೆ ಪೈಪೋಟಿ ನೀಡಲು ಭಾರಿ ಪ್ರಚಾರವನ್ನೇ ಚಿತ್ರತಂಡ ಮಾಡಬೇಕಿದೆ.

ಆದರೆ ಈವರೆಗೂ ಸಿನಿಮಾದ ಮುಖ್ಯ ಆಕರ್ಷಣೆಯಾಗಿರುವ ಪವನ್ ಕಲ್ಯಾಣ್ ಪ್ರಚಾರಕ್ಕೆ ಇಳಿದೇ ಇಲ್ಲ. ಆದರೆ ಇದೀಗ ಪವನ್ ಕಲ್ಯಾಣ್ ಆಗಮನಕ್ಕೆ ದಿನಾಂಕ ನಿಗದಿ ಆಗಿದ್ದು, ಸಿನಿಮಾದ ಅದ್ದೂರಿ ಪ್ರೀ ರಿಲೀಸ್ ಆಯೋಜನೆ ಮಾಡಲಾಗಿದೆ. 'ಉಸ್ತಾದ್ ಭಗತ್ ಸಿಂಗ್' ಸಿನಿಮಾದ ಪ್ರಚಾರ ಈಗಾಗಲೇ ಪ್ರಾರಂಭವಾಗಿದೆ. ಸಿನಿಮಾದ ನಾಯಕಿ ಶ್ರೀಲೀಲಾ ಮತ್ತು ನಿರ್ದೇಶಕ ಹರೀಶ್ ಶಂಕರ್ ಅವರುಗಳು ಕಾಲೇಜುಗಳು ಇನ್ನಿತರೆ ಕಡೆಗಳಿಗೆ ಹೋಗಿ ಸಿನಿಮಾದ ಪ್ರಚಾರ ಮಾಡುತ್ತಲಿದ್ದಾರೆ. ಆದರೆ ಸಿನಿಮಾಕ್ಕೆ ಸಿಗಬೇಕಿದ್ದ ಹೈಪ್ ಇನ್ನೂ ಸೃಷ್ಟಿಯಾಗಿಲ್ಲ. ಹೈಪ್ ಸೃಷ್ಟಿಯಾಗಬೇಕೆಂದರೆ ಪವನ್ ಕಲ್ಯಾಣ್ ಅಖಾಡಕ್ಕೆ ಇಳಿಯಲೇ ಬೇಕಿದೆ. ಇದೇ ಕಾರಣಕ್ಕೆ 'ಉಸ್ತಾದ್ ಭಗತ್ ಸಿಂಗ್' ಸಿನಿಮಾದ ಪ್ರೀ ರಿಲೀಸ್ ಕಾರ್ಯಕ್ರಮ ಆಯೋಜನೆ ಮಾಡಲಾಗಿದ್ದು ಮಾರ್ಚ್ 15 ರಂದು 'ಉಸ್ತಾದ್ ಭಗತ್ ಸಿಂಗ್' ಸಿನಿಮಾದ ಅದ್ದೂರಿ ಪ್ರೀ ರಿಲೀಸ್ ಕಾರ್ಯಕ್ರಮ ನಡೆಯಲಿದೆ.

ಮಾರ್ಚ್ 15 ರಂದು ಪ್ರೀ ರಿಲೀಸ್ ಕಾರ್ಯಕ್ರಮ

# ರೋಹಿತ್ - ವಿರಾಟ್ ತರಹ ಆಡಿದ್ದರೆ ಗೆಲ್ಲುತ್ತಿರಲಿಲ್ಲ!

ಭಾರತೀಯ ಕ್ರಿಕೆಟ್‌ನಲ್ಲಿ ಆಟದ ಶೈಲಿಯು ಕಾಲಾನಂತರದಲ್ಲಿ ಬದಲಾವಣೆ ಆಗಿದೆ. ಅನುಭವ, ತಾಳ್ಮೆ ಮತ್ತು ಇನ್ನಿಂಗ್ಸ್ ಅನ್ನು ನಿರ್ವಹಿಸುವ ಮತ್ತು ಮುನ್ನಡೆಸುವ ತಂತ್ರವು ಟೀಮ್ ಇಂಡಿಯಾದ ವಿಶಿಷ್ಟ ಲಕ್ಷಣಗಳಾಗಿದ್ದ ಕಾಲವೊಂದಿತ್ತು. ಆದಾಗ್ಯೂ, ವೇಗದ ಟಿ20 ಕ್ರಿಕೆಟ್ ಜಗತ್ತಿನಲ್ಲಿ ಆಕ್ರಮಣಶೀಲತೆ ಮತ್ತು ನಿರ್ಭಯತೆಯು ಯಶಸ್ಸಿನ ಕೀಲಿಗಳಾಗಿವೆ. ಅದಕ್ಕಾಗಿಯೇ, ಸೂರ್ಯಕುಮಾರ್ ಯಾದವ್ ಅವರ ನಾಯಕತ್ವ ಮತ್ತು ಗೌತಮ್ ಗಂಭೀರ್ ಅವರ ತರಬೇತಿಯಲ್ಲಿ ಟೀಮ್ ಇಂಡಿಯಾ ತನ್ನ ಮನಸ್ಥಿತಿ ಮತ್ತು ಆಟದ ಶೈಲಿಯನ್ನು ಪರಿವರ್ತಿಸಿದೆ. ಭಾರತ ತಂಡವು ವೈಯಕ್ತಿಕ ಸಾಧನೆಗಳಿಗಿಂತ ಗೆಲುವಿಗೆ ಆದ್ಯತೆ ನೀಡುತ್ತಿದೆ. ಈ ಹೊಸ ವಿಧಾನವು ಟೀಮ್ ಇಂಡಿಯಾ ಸತತ ಎರಡನೇ ಬಾರಿಗೆ ಟಿ20 ವಿಶ್ವಕಪ್ ಗೆಲ್ಲಲು ಕಾರಣವಾಯಿತು.

ರೋಹಿತ್ ಶರ್ಮಾ ಮತ್ತು ರಾಹುಲ್ ದ್ರಾವಿಡ್ ನೇತೃತ್ವದ ಭಾರತ ತಂಡವನ್ನು ಹೆಚ್ಚು ಸಮತೋಲಿತ ಮತ್ತು ಅನುಭವ ಆಧಾರಿತ ಎಂದು ಪರಿಗಣಿಸಲಾಗಿತ್ತು.

ಈ ತಂತ್ರವು 2024 ರವರೆಗೆ ಪರಿಣಾಮಕಾರಿಯಾಗಿತ್ತು. ಆದರೆ ಎರಡು ವರ್ಷಗಳ ನಂತರ, ಟಿ20 ಕ್ರಿಕೆಟ್‌ನ ಬದಲಾಗುತ್ತಿರುವ ಬೇಡಿಕೆಗಳ ಹಿನ್ನೆಲೆಯಲ್ಲಿ ಅದು ಸ್ವಲ್ಪ ನಿಧಾನ ಮತ್ತು ಸಾಂಪ್ರದಾಯಿಕವೆಂದು ಭಾವಿಸಲು ಪ್ರಾರಂಭಿಸಿತು. 2026 ರ ವಿಶ್ವಕಪ್‌ನಲ್ಲಿ ಭಾರತ ತಂಡವು 2024 ರಂತೆಯೇ ಅದೇ ವಿಧಾನವನ್ನು ಬಳಸಲು ಪ್ರಯತ್ನಿಸಿದ್ದರೆ, ಪ್ರಶಸ್ತಿಯನ್ನು ಗೆಲ್ಲುತ್ತಿರಲಿಲ್ಲ ಎಂದು ಸೂರ್ಯಕುಮಾರ್ ಯಾದವ್ ಅಂದುಕೊಂಡಿದ್ದಾರೆ.



**ಸೂರ್ಯ ಹೇಳಿದ್ದೇನು:** ಸಂದರ್ಶನವೊಂದರಲ್ಲಿ ಮಾತನಾಡಿದ ಸೂರ್ಯಕುಮಾರ್, 2024 ರ ಟಿ 20 ವಿಶ್ವಕಪ್‌ನಲ್ಲಿ ನಾವು ಆಡಿದ ಕ್ರಿಕೆಟ್ ಭವಿಷ್ಯದಲ್ಲಿ ಕೆಲಸ ಮಾಡುವುದಿಲ್ಲ ಎಂದು ನಮಗೆ ತಿಳಿದಿತ್ತು. ಆದ್ದರಿಂದ ನಾವು ವೈಯಕ್ತಿಕ ದಾಖಲೆಗಳ ಮೇಲೆ ಕೇಂದ್ರೀಕರಿಸುವುದನ್ನು ನಿಲ್ಲಿಸಲು ನಿರ್ಧರಿಸಿದ್ದೇವೆ.

ನಮ್ಮ ಗುರಿ ಪಂದ್ಯಗಳನ್ನು ಗೆಲ್ಲುವುದು.

ಸೆಮಿಫೈನಲ್‌ವರೆಗೆ, ನಮ್ಮ ಯಾವುದೇ ಆಟಗಾರರು ಪ್ರಮುಖ ರನ್ ಗಳಿಸಿದವರ ಅಥವಾ ಪ್ರಮುಖ ವಿಕೆಟ್ ಪಡೆದವರ ಪಟ್ಟಿಯಲ್ಲಿ ಇರಲಿಲ್ಲ. ಆದರೂ, ಪ್ರತಿಯೊಬ್ಬ ಆಟಗಾರನು ಪ್ರತಿ ಪಂದ್ಯದಲ್ಲೂ ಕೊಡುಗೆ ನೀಡಿದ್ದರಿಂದ ನಾವು ಗೆಲ್ಲುತ್ತಲೇ ಇದ್ದೆವು. ತಂಡದಲ್ಲಿ ಈ ಮನಸ್ಥಿತಿಯನ್ನು ಮೊದಲಿನಿಂದಲೂ ಬಲಪಡಿಸುವುದು ಮುಖ್ಯ. ಇದಕ್ಕಾಗಿ ನಾವು ಸುಮಾರು 18 ತಿಂಗಳ ಹಿಂದೆ ಈ ತಂಡದ ಸಂಸ್ಕೃತಿಯನ್ನು ನಿರ್ಮಿಸಲು ಪ್ರಾರಂಭಿಸಿದ್ದೇವು. ಅದನ್ನು ತಂಡದೊಳಗೆ ವೈರಸ್‌ನಂತೆ ಹರಡಿದೆವು, ಇದರಿಂದಾಗಿ ಪ್ರತಿಯೊಬ್ಬ ಆಟಗಾರನು ಅದೇ ಮನಸ್ಥಿತಿಯೊಂದಿಗೆ ಮೈದಾನಕ್ಕೆ ಪ್ರವೇಶಿಸಿದನು ಎಂದು ಹೇಳಿದ್ದಾರೆ.

**ಆಕ್ರಮಣಶೀಲತೆ:** 2024 ಮತ್ತು 2026 ತಂಡಗಳ ನಡುವಿನ ವ್ಯತ್ಯಾಸಗಳ ಬಗ್ಗೆ ಭಾರತ ತಂಡದ ಬ್ಯಾಟಿಂಗ್ ಕೋಚ್ ಸೀತಾಂಶು ಕೊಟಕ್ ಅವರನ್ನು ಕೇಳಲಾಯಿತು. 2024ರ ತಂಡವು ಅನುಭವದಲ್ಲಿ ಸಮೃದ್ಧವಾಗಿತ್ತು. ಆದರೆ ಆಕ್ರಮಣಶೀಲತೆಯ ಕೊರತೆಯನ್ನು ಹೊಂದಿತ್ತು ಎಂದು ಅವರು ಭಾವಿಸಿದ್ದಾರೆ. ಆ ತಂಡದಲ್ಲಿ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ರವೀಂದ್ರ ಜಡೇಜಾ ಅವರಂತಹ ಅನುಭವಿ ಆಟಗಾರರು ಇದ್ದರು, ಅವರು ಸ್ಥಿರತೆ ಮತ್ತು ಅನುಭವವನ್ನು ಒದಗಿಸಿದರು.

ಕೊಟಕ್ ಪ್ರಕಾರ, ರೋಹಿತ್ ಶರ್ಮಾ ಆರಂಭದಿಂದಲೂ ನಿರ್ಭೀತ ಬ್ಯಾಟರ್ ಆಗಿದ್ದರು, ಮೊದಲ ಎಸೆತದಿಂದಲೇ ಆಕ್ರಮಣಕಾರಿಯಾಗಿದ್ದರು. ಆದಾಗ್ಯೂ, ವಿರಾಟ್ ಕೊಹ್ಲಿಯ ಪಾತ್ರ ವಿಭಿನ್ನವಾಗಿತ್ತು. ಅವರು ಇನ್ನಿಂಗ್ಸ್ ಆಂಕರ್ ಆಗಿದ್ದರು, ಪಾಲುದಾರಿಕೆಗಳನ್ನು ನಿರ್ಮಿಸುವಲ್ಲಿ ಮತ್ತು ಕೊನೆಯವರೆಗೂ ಆಟದಲ್ಲಿ ಉಳಿಯುವಲ್ಲಿ ನಂಬಿಕೆ ಇಟ್ಟಿದ್ದರು.

# ಟೀಮ್ ಇಂಡಿಯಾ ತಂಡಕ್ಕೆ ಎಂಟ್ರಿ

ಭಾರತ ತಂಡದ 2026 ರ ಕ್ಯಾಲೆಂಡರ್ ಅನ್ನು ಈಗಾಗಲೇ ಅಂತಿಮಗೊಳಿಸಲಾಗಿದೆ. ಈ ಅವಧಿಯಲ್ಲಿ ಹಲವಾರು ಟಿ20 ಸರಣಿಗಳು ನಡೆಯಲಿವೆ. ಜೂನ್‌ನಲ್ಲಿ ಭಾರತ ತಂಡವು ಅಫ್ಘಾನಿಸ್ತಾನ ವಿರುದ್ಧ ಒಂದು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ನಂತರ, ಭಾರತ ತಂಡವು ಇಂಗ್ಲೆಂಡ್ ಗೆ ಪ್ರಯಾಣ ಬೆಳೆಸಲಿದ್ದು, ಅಲ್ಲಿ ಐದು ಪಂದ್ಯಗಳ ಟಿ20 ಸರಣಿ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ.

ವರದಿಗಳ ಪ್ರಕಾರ, ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ಭಾರತ ತಂಡ ಐರ್ಲೆಂಡ್ ವಿರುದ್ಧ ಮೂರು ಪಂದ್ಯಗಳ ಟಿ20 ಸರಣಿಯನ್ನು ಆಡಬಹುದು. ಶ್ರೀಲಂಕಾ ಕ್ರಿಕೆಟ್ ಭಾರತದಿಂದ ಹೆಚ್ಚುವರಿ ಮೂರು ಟಿ20 ಮತ್ತು ಎರಡು ಟೆಸ್ಟ್ ಪಂದ್ಯಗಳನ್ನು ಕೇಳಿದೆ. ಭಾರತ ಸೆಪ್ಟೆಂಬರ್‌ನಲ್ಲಿ ಇಲ್ಲಿ ಸರಣಿಯನ್ನು ಸಹ ಆಡಲಿದೆ. ನಂತರ ವೆಸ್ಟ್ ಇಂಡೀಸ್ ತಂಡವು ಮೂರು ಏಕದಿನ ಮತ್ತು ಐದು ಪಂದ್ಯಗಳ ಟಿ20 ಸರಣಿಗಾಗಿ ಭಾರತ ಪ್ರವಾಸ ಮಾಡಲಿದೆ. ಹೆಚ್ಚುವರಿಯಾಗಿ, ಭಾರತ ತಂಡವು ಯುಎಇಯಲ್ಲಿ ಅಫ್ಘಾನಿಸ್ತಾನ ವಿರುದ್ಧ ಮೂರು ಪಂದ್ಯಗಳ ಟಿ20 ಸರಣಿಯನ್ನು ಆಡಲಿದೆ.



# ಶುರುವಾಯ್ತು ಸೂರ್ಯವಂಶಿ ದರ್ಬಾರ್!

**ಏಷ್ಯನ್ ಕ್ರೀಡಾಕೂಟ:** 2026 ರ ಏಷ್ಯನ್ ಕ್ರೀಡಾಕೂಟ ಜಪಾನ್‌ನಲ್ಲಿ ನಡೆಯಲಿದೆ. ಭಾರತ ತಂಡ ಹಾಲಿ ಚಾಂಪಿಯನ್ ಆಗಿದೆ. ಟಿ20 ಟೂರ್ನಿ ಸೆಪ್ಟೆಂಬರ್ 25 ರಿಂದ ಅಕ್ಟೋಬರ್ 3 ರವರೆಗೆ ನಡೆಯಲಿದೆ. ಭಾರತ ಇಲ್ಲಿ ಜಿಂಬಾಬ್ವೆ ವಿರುದ್ಧ ಮೂರು ಪಂದ್ಯಗಳ ಟಿ20 ಸರಣಿಯನ್ನು ಆಡಬಹುದು ಎಂದು ಹೇಳಲಾಗುತ್ತಿದೆ.


**ನ್ಯೂಜಿಲೆಂಡ್ ವಿರುದ್ಧ ಸರಣಿ:** ಅಕ್ಟೋಬರ್ ಮಧ್ಯದಲ್ಲಿ ಭಾರತ ತಂಡ ನ್ಯೂಜಿಲೆಂಡ್ ಪ್ರವಾಸ ಕೈಗೊಳ್ಳಲಿದೆ. ಈ ಸರಣಿಯು ಐದು ಏಕದಿನ ಪಂದ್ಯಗಳು, ಐದು ಟಿ20 ಮತ್ತು ಎರಡು ಟೆಸ್ಟ್ ಪಂದ್ಯಗಳನ್ನು ಒಳಗೊಂಡಿರುತ್ತದೆ. ಮೊದಲ ಪಂದ್ಯ ಅಕ್ಟೋಬರ್ 22 ರಂದು ನಡೆಯಲಿದೆ. ನಂತರ ಭಾರತ ತಂಡವು ಮೂರು ಪಂದ್ಯಗಳ ಏಕದಿನ ಮತ್ತು ಮೂರು ಪಂದ್ಯಗಳ ಟಿ20 ಸರಣಿಗಾಗಿ ಬಾಂಗ್ಲಾದೇಶಕ್ಕೆ ಪ್ರಯಾಣ ಬೆಳೆಸಲಿದೆ, ಆದರೆ ಇನ್ನೂ ಯಾವುದನ್ನೂ ದೃಢಪಡಿಸಲಾಗಿಲ್ಲ. ಹಲವು ಟಿ20 ಪಂದ್ಯಗಳು ಮುಂಬರುವ ದಿನಗಳಲ್ಲಿ ಯುವ ಆಟಗಾರರಿಗೆ ಇದೊಂದು ಸುವರ್ಣಾವಕಾಶ.

ವೈಭವ್ ಸೂರ್ಯವಂಶಿ ಮತ್ತು ಪ್ರಿಯಾಂಶ್ ಆರ್ಯ ಪೈಪೋಟಿಯಲ್ಲಿ ಇದ್ದಾರೆ. ಸೂರ್ಯವಂಶಿ ಸ್ಥಿರವಾಗಿ ಉತ್ತಮ ಪ್ರದರ್ಶನ ನೀಡುತ್ತಿದ್ದರೆ, ಪ್ರಿಯಾಂಶ್ ಆರ್ಯ ಕೂಡ ಹೊಸ ಅಲೆಯನ್ನು ಸೃಷ್ಟಿಸುತ್ತಿದ್ದಾರೆ. ಆದ್ದರಿಂದ, ಇಬ್ಬರೂ ಆಟಗಾರರಿಗೆ ಚೊಚ್ಚಲ ಪ್ರವೇಶಕ್ಕೆ ಉತ್ತಮ ಅವಕಾಶವಿದೆ.

ಈ ವರ್ಷ ಇಬ್ಬರೂ ಯುವ ಆಟಗಾರರು ಟೀಮ್ ಇಂಡಿಯಾ ಪರ ಆಡಬಹುದು.

# ಪಾಕಿಸ್ತಾನ ಸ್ಪಿನ್ನರ್ ಅಬ್ರಾರ್ ಖರೀದಿಸಿದ ಕಾವ್ಯಾ ಮಾರನ್‌ಗೆ ಬ್ಯಾನ್ ಬಿಸಿ

ಕಾವ್ಯಾ ಮಾರನ್ ಅವರ ಸನ್ ರೈಸರ್ಸ್ ಲೀಡ್ಸ್ ತಂಡ ಪಾಕಿಸ್ತಾನದ ಸ್ಪಿನ್ನರ್ ಅಬ್ರಾರ್ ಅಹ್ಮದ್ ಅವರನ್ನು ಖರೀದಿಸಿ ವಿವಾದಕ್ಕೀಡಾಗಿದೆ. 2.35 ಕೋಟಿ ರೂ.ಗೆ ನಡೆದ ಈ ಒಪ್ಪಂದಕ್ಕೆ ಭಾರೀ ಟೀಕೆ ವ್ಯಕ್ತವಾಗಿದ್ದು, ಪರಿಣಾಮವಾಗಿ ಸನ್ ರೈಸರ್ಸ್ ಲೀಡ್ಸ್ ಟ್ವಿಟರ್ ಖಾತೆ ಸ್ಥಗಿತಗೊಂಡಿದೆ. ಈ ಕ್ರಮವು ಐಪಿಎಲ್ ತಂಡದ ವರ್ಚಸ್ಸಿಗೆ ಹಾನಿಯಾಗಬಹುದೆಂಬ ಆತಂಕವೂ ಎದುರಾಗಿದೆ. ಸನ್ ರೈಸರ್ಸ್ ಹೈದರಾಬಾದ್ ತಂಡದ ಒಡತಿ ಕಾವ್ಯಾ ಮಾರನ್‌ಗೆ ಬ್ಯಾನ್ ಬಿಸಿ ತಟ್ಟಿದೆ. ದಿ ಹಂಡ್ರೆಡ್ ಲೀಗ್‌ನಲ್ಲಿ ಕಾವ್ಯಾ ಅವರ ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿಯು ಪಾಕಿಸ್ತಾನದ ಸ್ಪಿನ್ನರ್ ಅಬ್ರಾರ್ ಅಹ್ಮದ್ ಅವರನ್ನು ಖರೀದಿ ಮಾಡಿತು. ಆಕ್ಷನ್ ಅಲ್ಲಿ 2.35 ಕೋಟಿ ರೂಪಾಯಿಯನ್ನು ಕೊಡಲು ಸನ್‌ರೈಸರ್ಸ್ ಒಪ್ಪಿಕೊಂಡಿತು. ಈ ಬೆನ್ನಲ್ಲೇ ಕಾವ್ಯಾ ಮಾರನ್ ಅವರು ಸಾಕಷ್ಟು ಟೀಕೆ ಎದುರಿಸಿದರು. ಅಷ್ಟೇ ಅಲ್ಲ, ಸನ್‌ರೈಸರ್ಸ್ ಲೀಡ್ಸ್ ಟ್ವಿಟರ್ ಖಾತೆ ಬ್ಯಾನ್ ಆಗಿದೆ. ಮಾರ್ಚ್ 12ರ ರಾತ್ರಿ 8.30ಕ್ಕೆ ವೇಳೆಗೆ ಈ ಖರೀದಿ ನಡೆದಿದೆ.



ಮಾರ್ಚ್ 13 ಮುಂಜಾನೆ ಸನ್‌ರೈಸರ್ಸ್ ಲೀಡ್ಸ್ ಟ್ವಿಟರ್ ಖಾತೆಯನ್ನು ಸಸ್ಪೆಂಡ್ ಮಾಡಲಾಗಿದೆ. ಭಾರತೀಯರು ಸಾಕಷ್ಟು ಸಂಖ್ಯೆಯಲ್ಲಿ ಸನ್‌ರೈಸರ್ಸ್ ಲೀಡ್ಸ್ ಟ್ವಿಟರ್ ಖಾತೆಯನ್ನು ರಿಪೋರ್ಟ್ ಮಾಡಿರಬಹುದು ಎಂದು ಊಹಿಸಲಾಗಿದೆ. ಈ ಕಾರಣದಿಂದಲೇ ಸಸ್ಪೆಂಡ್ ಆಗಿರಬಹುದು ಎಂಬುದು ಕೆಲವರ ಊಹೆ.

ಹಂಡ್ರೆಡ್ ಲೀಗ್ಸ್ ಆಕ್ಷನ್ ಅಲ್ಲಿ ಕಾವ್ಯಾ ಮಾರನ್, ತಂಡದ ಕೋಚ್ ಡ್ಯಾನಿಯಲ್ ವಿಟ್ಟೋರಿ ಇದ್ದರು. ಭಾರತ ಒಡೆತನದ ನಾಲ್ಕು ತಂಡಗಳು ಹಂಡ್ರೆಡ್ ಲೀಗ್‌ನಲ್ಲಿ ಇದ್ದು, ಇವರು ಪಾಕಿಸ್ತಾನ ಆಟಗಾರರನ್ನು ಖರೀದಿಸುತ್ತಾರೆಯೇ ಎಂಬ ಪ್ರಶ್ನೆ ಇತ್ತು. ಕಾವ್ಯಾ ಅವರು ತೆಗೆದುಕೊಂಡ ಒಂದು ನಿರ್ಧಾರಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿದೆ.

ಇದು ಐಪಿಎಲ್ ತಂಡದ ವರ್ಚಸ್ಸಿನ ಮೇಲೂ ಪರಿಣಾಮ ಬೀರಬಹುದು. ಸನ್‌ರೈಸರ್ಸ್ ಲೀಡ್ಸ್ ಅಬ್ರಾರ್‌ಗೆ ವೆಲ್‌ಕಮ್ ಎಂದು ಪೋಸ್ಟ್ ಹಾಕಿತ್ತು. ಈ ಪೋಸ್ಟ್ ಸಾಕಷ್ಟು ವೈರಲ್ ಆಯಿತು.

ಕಾವ್ಯಾ ಅವರನ್ನು ಬ್ಯಾನ್ ಮಾಡುವಂತೆ ಟ್ವಿಟರ್‌ನಲ್ಲಿ ಟ್ರೆಂಡ್ ಆಗಿದೆ. ಸನ್ನರೈಸರ್ಸ್ ಲೀಡ್ಸ್ ಟ್ವಿಟರ್ ಖಾತೆ ಓಪನ್ ಮಾಡಿದರೆ 'ಈ ಖಾತೆಯನ್ನು ಸಸ್ಪೆಂಡ್ ಮಾಡಲಾಗಿದೆ' ಎಂಬ ಬರಹ ಕಾಣುತ್ತದೆ. ಭಾರತದಲ್ಲಿ ಪಾಕಿಸ್ತಾನ ಆಟಗಾರರ ಮೇಲೆ ಸಂಪೂರ್ಣ ಬ್ಯಾನ್ ಹೇರಲಾಗಿದೆ.

ಅವರ ಜೊತೆ ಐಸಿಸಿ ಟೂರ್ನಮೆಂಟ್ ಹೊರತುಪಡಿಸಿ ಮತ್ಯಾವುದೇ ಪಂದ್ಯವನ್ನು ಆಡುತ್ತಿಲ್ಲ. ಹೀಗಿರುವಾಗ ಸನ್ ರೈಸರ್ಸ್ ಹೈದರಾಬಾದ್‌ನ ಸೋದರ ಸಂಸ್ಥೆಯಾಗಿರುವ ಸನ್ ರೈಸರ್ಸ್ ಲೀಡ್ಸ್ ಪಾಕ್ ಆಟಗಾರನನ್ನು ಖರೀರಿದಿಸಿದ್ದು ಎಷ್ಟು ಸರಿ ಎಂಬ ಪ್ರಶ್ನೆ ಮೂಡಿದೆ. ಈ ವಿರೋಧದ ಬಳಿಕ ಆಟಗಾರನನ್ನು ಕೈ ಬಿಡಲಾಗುವುದೇ ಎಂಬ ಪ್ರಶ್ನೆ ಮೂಡಿದೆ.



# ಅಭಿಷೇಕ್ ಆಯ್ತು, ಈಗ ಪಂತ್!

ಐಪಿಎಲ್ 2026 ರ ಸೀಸನ್‌ಗಾಗಿ ಎಲ್ಲಾ ತಂಡಗಳ ಅನೇಕ ಆಟಗಾರರು ಅಭ್ಯಾಸ ಮಾಡಲು ಪ್ರಾರಂಭಿಸಿದ್ದಾರೆ. ಲಕ್ನೋ ಸೂಪರ್ ಜೈಂಟ್ಸ್ ನಾಯಕ ರಿಷಭ್ ಪಂತ್ ಯುವರಾಜ್ ಸಿಂಗ್ ಅವರೊಂದಿಗೆ ಒಂದು ಅಥವಾ ಎರಡು ದಿನಗಳಲ್ಲ, ನಾಲ್ಕು ದಿನಗಳ ವಿಶೇಷ ಪ್ರಾಕ್ಟೀಸ್ ಮಾಡಿದರು. ಅಭಿಷೇಕ್ ಶರ್ಮಾ ಯುವರಾಜ್ ಸಿಂಗ್ ಅವರಿಂದ ಬಹಳಷ್ಟು ಕಲಿತು ಸ್ಫೋಟಕ ಬ್ಯಾಟರ್ ಆಗಿದ್ದರೆ, ರಿಷಭ್ ಪಂತ್ ಕೂಡ ಐಪಿಎಲ್ 2026 ರ ಸೀಸನ್‌ನಲ್ಲಿ ವಿಭಿನ್ನ ಶೈಲಿಯಲ್ಲಿ ಕಾಣಿಸಿಕೊಳ್ಳಲು ಯುವರಾಜ್ ಸಿಂಗ್ ಮೊರೆ ಹೋಗಿದ್ದಾರೆ. ಇದನ್ನು ಸಾಧಿಸಲು, ಅವರು ಯುವರಾಜ್ ಸಿಂಗ್ ಅವರೊಂದಿಗೆ ಶ್ರಮಿಸಿದ್ದಾರೆ. ವರದಿಯ ಪ್ರಕಾರ, 28 ವರ್ಷದ ರಿಷಭ್ ಪಂತ್ ಮುಂಬೈನ ಬ್ರಬೋರ್ನ್ ಕ್ರೀಡಾಂಗಣದಲ್ಲಿ ಯುವರಾಜ್ ಸಿಂಗ್ ಅವರೊಂದಿಗೆ ನಾಲ್ಕು ದಿನಗಳ ಕಾಲ ಅಭ್ಯಾಸ ಮಾಡಿದರು. ಇಬ್ಬರೂ ಸುಮಾರು ನಾಲ್ಕು ದಿನಗಳ ಕಾಲ ಒಟ್ಟಿಗೆ ಕಳೆದರು. ಹಗಲು ಮತ್ತು ರಾತ್ರಿ, ಎರಡೂ ಸೆಷನ್‌ಗಳಲ್ಲಿ ತರಬೇತಿ ಪಡೆದರು. ವಿವಿಧ ರೀತಿಯ ಬಿಳಿ-ಚೆಂಡಿನ ಶಾಟ್‌ಗಳನ್ನು ಅಭ್ಯಾಸ ಮಾಡಿದರು.



ಯುವರಾಜ್ ಸಿಂಗ್ ಬಗ್ಗೆ ಹೇಳುವುದಾದರೆ, ಅವರು ಈಗಾಗಲೇ ಅನೇಕ ಯುವ ಆಟಗಾರರಿಗೆ ಕೆಲವು ವಿಶೇಷ ಬ್ಯಾಟಿಂಗ್ ಸಲಹೆಗಳನ್ನು ನೀಡಿದ್ದಾರೆ. ಅವರಲ್ಲಿ ಪ್ರಭ್ಸಿಮ್ರಾನ್ ಸಿಂಗ್, ಶುಭ್ಮನ್ ಗಿಲ್ ಮತ್ತು ಅಭಿಷೇಕ್ ಶರ್ಮಾ ಸೇರಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಯುವರಾಜ್ ಸಿಂಗ್ ಅವರ ಯಶಸ್ಸಿಗೆ ಅಭಿಷೇಕ್ ಶರ್ಮಾ ಆಗಾಗ್ಗೆ ಹೆಗ್ಗಳಿಕೆ ನೀಡುತ್ತಾರೆ. ಈಗ, ಯುವರಾಜ್ ಸಿಂಗ್ ಅವರಿಂದ ಸಲಹೆಗಳನ್ನು ಪಡೆದ ನಂತರ, ರಿಷಭ್ ಪಂತ್ ಕೂಡ ಟಿ20 ಕ್ರಿಕೆಟ್‌ನಲ್ಲಿ ಮತ್ತೆ ಸದ್ದು ಮಾಡಲು ನೋಡುತ್ತಿದ್ದಾರೆ.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966